

॥ ಶ್ರೀ ಗುರು ಬಸವಲಿಂಗಾಯ ನಮಃ ॥

# ಲಿಂಗಾಯತ ದರ್ಶನ

ಮಾಸಿಕ

ಸಂಪುಟ : ೬ ಜುಲೈ ೨೦೧೯ ಸಂಚಿಕೆ : ೭

ಮಾರ್ಗದರ್ಶನ
**ಪೂಜ್ಯಶ್ರೀ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು**
ರುದ್ರಾಕ್ಷಿಮಠ, ನಾಗನೂರು-ಬೆಳಗಾವಿ
ತೋಂಟದಾರ್ಯ ಸಂಸ್ಥಾನಮಠ, ಗದಗ-ಡಂಬಳ

ಸಂಪಾದಕ
**ಡಾ॥ ಎನ್. ಜಿ. ಮಹಾದೇವಪ್ಪ**

ಸಹ ಸಂಪಾದಕ
**ಡಾ॥ ರಾಮಕೃಷ್ಣ ಮರಾಠೆ**

**ಸಂಪಾದಕ ಮಂಡಳಿ**

ಡಾ॥ ಗುರುಲಿಂಗ ಕಾಪಸೆ — ಡಾ॥ ಸಿ. ಕೆ. ನಾವಲಗಿ
ಶ್ರೀ ಆರ್. ಪಿ. ಅಪರಾಜ — ಡಾ॥ ವಿ. ಎಸ್. ಮಾಳಿ
ಡಾ॥ ಬಸವರಾಜ ಜಗಜಂಪಿ — ಶ್ರೀ ಬಿ. ಬಿ. ಹೊಸಮನಿ
ಡಾ. ಎಂ. ಎಸ್. ಹುಲ್ಲೋಳಿ — ಶ್ರೀಮತಿ ನೀಲಗಂಗಾ ಚರಂತಿಮಠ

**ಪ್ರಕಾಶಕರು**
ಕಾರ್ಯದರ್ಶಿ ಶ್ರೀ ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆಯ
**ವಚನ ಅಧ್ಯಯನ ಕೇಂದ್ರ**
ನಾಗನೂರು ಶ್ರೀ ರುದ್ರಾಕ್ಷಿಮಠ, ಶಿವಬಸವನಗರ
ಬೆಳಗಾವಿ-೫೯೦೦೧೦
ದೂ:೦೮೩೧-೨೪೦೭೧೫೭ *email:basavaguru@rediffmail.com*
*Web: www.rudrakshimath.in*

**ಚಂದಾವಿವರ**

| | | |
|---|---|---|
| ಮಹಾಪೋಷಕರು | ರೂ. | ೧೦,೦೦೦=೦೦ |
| ಪೋಷಕರು | ರೂ. | ೫೦೦೦=೦೦ |
| ಆಜೀವ | ರೂ. | ೩,೦೦೦=೦೦(೨೦ ವರ್ಷ) |
| ಆರು ವರ್ಷದ | ರೂ. | ೧೦೦೦=೦೦ |
| ಒಂದುವರ್ಷದ | ರೂ. | ೨೦೦=೦೦ |
| ಬಿಡಿ ಪ್ರತಿ | ರೂ. | ೨೦=೦೦ |

ಚಂದಾಹಣವನ್ನು ನಗದು ಅಥವಾ **'ವಚನ ಅಧ್ಯಯನ ಕೇಂದ್ರ'** ಹೆಸರಿನಲ್ಲಿ ಕ್ರಾಸ್ ಮಾಡಿದ ಡಿ.ಡಿ/ಚೆಕ್‌ಮುಖಾಂತರ**"ನಿರ್ದೇಶಕರು, ವಚನ ಅಧ್ಯಯನ ಕೇಂದ್ರ ನಾಗನೂರು ರುದ್ರಾಕ್ಷಿಮಠ, ಶಿವಬಸವ ನಗರ, ಬೆಳಗಾವಿ-೫೯೦ ೦೧೦"** ಈ ವಿಳಾಸಕ್ಕೆ ಕಳಿಸಬೇಕಾಗಿ ವಿನಂತಿ.

**ಅಂತರಂಗದೊಳಗೆ.....**

* ಸಂಪಾದಕೀಯ ೨
* ವಚನಾರ್ಥ-ಚಿಂತನ ೪
  - **ಡಾ. ಸಿದ್ಧರಾಮ ಸ್ವಾಮಿಗಳು**
* ವಚನಗಳಲ್ಲಿ ಅನುಕಂಪದ ನೆಲೆಗಳು ೬
  - **ಡಾ. ರಾಜಶೇಖರ ಜಮದಂಡಿ**
* ಬಿಜ್ಜಳನ ಸಂಹಾರ : ಮೊಲ್ಲೆಬೊಮ್ಮಯ್ಯ ೯
  - **ಡಾ. ವೀರಣ್ಣ ದಂಡೆ**
* ಮನ ಕಟ್ಟಿ, ಮದ ಮೆಟ್ಟಿದ ಹಡಪದಪ್ಪಣ್ಣ ೧೪
  - **ವೆಂಕಟೇಶ ಕೆ. ಜನಾದ್ರಿ**
* ಹಿಂದಿನ ಧರ್ಮಗಳ ತಾತ್ವಿಕತೆಯ ಪ್ರತಿರೋಧ ೧೭
  - **ಡಾ. ಬಸವರಾಜ ಸಬರದ**
* ಲಿಂಗಾಯತ ಧರ್ಮ ೨೯
  - **ಮೂಡ್ನಾಕೂಡು ಚಿನ್ನಸ್ವಾಮಿ**
* ಭಾರತೀಯ ತತ್ತ್ವಶಾಸ್ತ್ರದ ವಿಮರ್ಶೆ ಬೆಳದಿಂಗಳು ೩೨
  - **ಸೂರ್ಯಪ್ರಕಾಶ ಪಂಡಿತ್**

ಇಲ್ಲಿಯ ಲೇಖನಗಳ ಅಭಿಪ್ರಾಯಗಳು ಲೇಖಕರವೇ ಹೊರತು ಪತ್ರಿಕೆಯ ಅಭಿಪ್ರಾಯಗಳಲ್ಲ. **-ಸಂ**

# ಪ್ರಚಲಿತ ವಿದ್ಯಮಾನಗಳು

**ಅಭಿವೃದ್ಧಿ ನಿಗಮವೆಂಬ ಪ್ರಹಸನ**

ಕರ್ನಾಟಕ ಸರಕಾರವು ಕಳೆದ ವರ್ಷ 'ಬ್ರಾಹ್ಮಣ ಅಭಿವೃದ್ಧಿ ನಿಗಮ' ಸ್ಥಾಪಿಸಿ ಬಜೆಟ್‌ನಲ್ಲಿ ಇಪ್ಪತ್ತೈದು ಕೋಟಿ ರೂಪಾಯಿಗಳನ್ನು ಮೀಸಲಾಗಿರಿಸಿದುದನ್ನು ಕಂಡು, ಇದೇ ಮಾದರಿಯಲ್ಲಿ ವೀರಶೈವ-ಲಿಂಗಾಯತ ಅಭಿವೃದ್ಧಿ ನಿಗಮ ಸ್ಥಾಪಿಸಬೇಕೆಂದು ಕಾಂಗ್ರೆಸ್ ಪಕ್ಷದ ಕೆಲವು ಶಾಸಕರು, ಮಾಜಿ ಶಾಸಕರು, ಸಚಿವರು, ಶಾಮನೂರು ಶಿವಶಂಕರಪ್ಪ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕರ್ನಾಟಕ ಸರಕಾರವನ್ನು ಒತ್ತಾಯಿಸುವ ಮತ್ತು ವೀರಶೈವ ಲಿಂಗಾಯತರನ್ನು ಹಿಂದುಳಿದ ವರ್ಗದಲ್ಲಿ ಸೇರಿಸಬೇಕೆಂದು ಕೇಂದ್ರ ಸರಕಾರಕ್ಕೆ ಮನವಿ ಸಲ್ಲಿಸುವ ನಿರ್ಣಯ ಕೈಕೊಂಡಿರುವುದು, ಹಾಗೆಯೇ ಇದೇ ಸಂದರ್ಭದಲ್ಲಿ ಲಿಂಗಾಯತ ಸ್ವತಂತ್ರಧರ್ಮದ ಹೋರಾಟ ಅಪ್ರಸ್ತುತ, ಮುಗಿದ ಅಧ್ಯಾಯ ಎಂದು ಹೇಳಿಕೊಂಡಿರುವುದು ಹಲವು ಆಭಾಸ, ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಇದು ಇಡೀ ಸಮುದಾಯವನ್ನು ದಾರಿ ತಪ್ಪಿಸುವ ಮತ್ತು ಲಿಂಗಾಯತ ಸ್ವತಂತ್ರಧರ್ಮದ ಹೋರಾಟಗಾರರನ್ನು ಮೂಲೆಗುಂಪು ಮಾಡುವ ದುರುದ್ದೇಶದಿಂದ ಕೂಡಿರುವ ಕ್ರಮವಾಗಿದೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಈಗಾಗಲೇ ಲಿಂಗಾಯತ ಧರ್ಮದ ಸುಮಾರು ಮೂವತ್ತಕ್ಕೂ ಅಧಿಕ ಒಳಪಂಗಡ (ಸಣ್ಣ ಸಣ್ಣ ಸಮುದಾಯ)ಗಳು ಹಿಂದುಳಿದ ವರ್ಗದ ಪಟ್ಟಿಯಲ್ಲಿ ಸೇರಿಕೊಂಡಿವೆ. ಇನ್ನುಳಿದ ಎಪ್ಪತ್ತಕ್ಕೂ ಅಧಿಕ ಪಂಗಡಗಳಲ್ಲಿಯೂ ಬಡವರು ಅಧಿಕ ಸಂಖ್ಯೆಯಲ್ಲಿರುವುದರಿಂದ ಅವನ್ನೂ ಸೇರಿಸಬೇಕಾಗಿದೆ. ಅವೆಲ್ಲವೂ ಲಿಂಗಾಯತ ಪದವನ್ನು ಮಾತ್ರ ತಮ್ಮ ಪಂಗಡದೊಂದಿಗೆ ಸೇರಿಸಿಕೊಂಡಿರುವುದನ್ನು ಕಾಣುತ್ತೇವೆ. ಉದಾ: ಲಿಂಗಾಯತ ಗೌಳಿ, ಲಿಂಗಾಯತ ಮೇದಾರ, ಲಿಂಗಾಯತ ಅಗಸ, ಲಿಂಗಾಯತ ಮಡಿವಾಳ ಇತ್ಯಾದಿ. ತಪ್ಪಿಯೂ ವೀರಶೈವ ಎಂಬ ಪದ ಎಲ್ಲಿಯೂ ಬಳಕೆಯಾಗಿಲ್ಲ. ಕೇಂದ್ರ ಸರಕಾರವೂ ಕೂಡ ಅಪ್ರತ್ಯಕ್ಷವಾಗಿ ಲಿಂಗಾಯತ ಪದವನ್ನೇ ಒಪ್ಪಿಕೊಂಡಿದೆ. ಲಿಂಗಾಯತರಲ್ಲಿ ಉಳಿದ ಒಳಪಂಗಡಗಳಂತೆ ವೀರಶೈವ ಎಂಬುದು ಒಂದು ಒಳಪಂಗಡವಾಗಿ ಬಳಕೆಯಲ್ಲಿದೆ ಮತ್ತು ರಾಜ್ಯ ಸರಕಾರದ ದಾಖಲೆಗಳಲ್ಲಿಯೂ ಇದು ನಮೂದಾಗಿದೆ. ವಸ್ತುಸ್ಥಿತಿ ಹೀಗಿರುವಾಗ ವೀರಶೈವ-ಲಿಂಗಾಯತ ಎಂಬ ಪದ ಬಳಕೆ ಎಷ್ಟು ಸೂಕ್ತ? ಅಖಿಲ ಭಾರತ ವೀರಶೈವ ಮಹಾಸಭೆಯವರು ವೀರಶೈವ-ಲಿಂಗಾಯತ ಧರ್ಮವನ್ನು ಸ್ವತಂತ್ರಧರ್ಮವೆಂದು ಪರಿಗಣಿಸಬೇಕೆಂದು ಸಲ್ಲಿಸಿದ ಮನವಿಗಳು ಇದೇ ಪದಬಳಕೆ ಕಾರಣವಾಗಿ ಮೂರು ಬಾರಿ ತಿರಸ್ಕೃತವಾಗಿರುವುದು ನಮ್ಮ ಕಣ್ಮುಂದಿದೆ. ಆದರೂ ಅದೇ ಪದವನ್ನು ಮುಂದುಮಾಡಿಕೊಂಡು ಈಗ ಮನವಿ ಸಲ್ಲಿಸುತ್ತಿರುವುದು ವಿವೇಚನಾರಹಿತ ಕ್ರಮವೊ? ಅಥವಾ ಲಿಂಗಾಯತರನ್ನು ಯಾಮಾರಿಸುವ ಕ್ರಮವೊ?

ಲಿಂಗಾಯತ ಸ್ವತಂತ್ರಧರ್ಮದ ಹೋರಾಟಗಾರರು ವೀರಶೈವ-ಲಿಂಗಾಯತರನ್ನು ಹಿಂದುಳಿದ ವರ್ಗಕ್ಕೆ ಸೇರಿಸುವ ಕಾಂಗ್ರೆಸ್ ಪಕ್ಷದ ರಾಜಕೀಯ ಧುರೀಣರ ಈ ತೀರ್ಮಾನವನ್ನು ಮತ್ತು ವೀರಶೈವ-ಲಿಂಗಾಯತ ಅಭಿವೃದ್ಧಿ ನಿಗಮ ಸ್ಥಾಪಿಸಲು ಕರ್ನಾಟಕ ಸರಕಾರಕ್ಕೆ ಸಲ್ಲಿಸಿದ ಮನವಿಯನ್ನು ವಿರೋಧಿಸಿದರೆ ಅವರನ್ನು ಲಿಂಗಾಯತರ ವಿರೋಧಿಗಳೆಂದು ಬಿಂಬಿಸುವ ಹುನ್ನಾರ ಇದರ ಹಿಂದಿದೆ. ಹೀಗೆ ಮಾಡಿದರೆ ಲಿಂಗಾಯತ ಸ್ವತಂತ್ರಧರ್ಮದ ಹೋರಾಟ ತನ್ನಿಂದ ತಾನೇ ನಿಂತು ಹೋಗುತ್ತದೆ ಎಂಬ ದುರಾಲೋಚನೆಯೂ ಇರಬಹುದು. ಆದರೆ ಇಂತಹ ಹುನ್ನಾರ ಮತ್ತು ದುರಾಲೋಚನೆಗಳು ಲಿಂಗಾಯತ ಸ್ವತಂತ್ರಧರ್ಮದ ಹೋರಾಟದ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡಲು ಸಾಧ್ಯವಿಲ್ಲ. ಧರ್ಮದ ವಿಷಯವೇ ಬೇರೆ, ಸಾಮಾಜಿಕ ಸಂಗತಿಗಳೇ ಬೇರೆ. ವೈದಿಕ ಹಿಂದೂ ಧರ್ಮದ ಆಚರಣೆಗಳು, ತಾತ್ತ್ವಿಕ ವಿಚಾರಗಳಿಗಿಂತ ಅವೈದಿಕವಾದ ಲಿಂಗಾಯತರ ಆಚರಣೆಗಳು ಹಾಗು ತಾತ್ತ್ವಿಕ ಸಂಗತಿಗಳು ಎಲ್ಲ ರೀತಿಯಿಂದಲೂ ಭಿನ್ನವಾಗಿರುವ ಹಿನ್ನೆಲೆಯಲ್ಲಿ ಲಿಂಗಾಯತರನ್ನು ಹಿಂದೂ ಧರ್ಮದ ಭಾಗವಾಗಿ ಗುರುತಿಸುವುದು ಲಿಂಗಾಯತ ಧರ್ಮದ ಅಸ್ತಿತ್ವವನ್ನು, ಶರಣ ಸಂಸ್ಕೃತಿಯನ್ನು ನಾಶಮಾಡುವ ಕ್ರಮವಾಗುತ್ತದೆ. ಶರಣ ಸಂಸ್ಕೃತಿ, ಶರಣರ ಆಚಾರ-ವಿಚಾರಗಳನ್ನು ಉಳಿಸಿಕೊಳ್ಳಲು ಬದ್ಧರಾಗಿರುವ ಲಿಂಗಾಯತರು ಈ ಹೋರಾಟವನ್ನು ಎಂದಿಗೂ ಕೈಬಿಡಲು ಸಾಧ್ಯವಿಲ್ಲ.

ಜಾಗತಿಕ ಮಟ್ಟದಲ್ಲಿ ಜನರು ಲಿಂಗಾಯತರನ್ನು, ಲಿಂಗಾಯತ ಧರ್ಮವನ್ನು ಗುರುತಿಸಬೇಕು; ಲಿಂಗಾಯತ ಧರ್ಮವು ವಿಶ್ವಧರ್ಮದ ಸ್ಥಾನವನ್ನು ಅಲಂಕರಿಸಬೇಕೆಂಬ ಆಶಯ ಇದರ ಹಿಂದಿರುವುದನ್ನು ಗಮನಿಸಬೇಕು. ಈ ಹಿನ್ನೆಲೆಯಲ್ಲಿಯೇ ಲಿಂಗಾಯತ ಸ್ವತಂತ್ರಧರ್ಮದ ಹೋರಾಟ ನಿರಂತರ ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ಇನ್ನು ವೀರಶೈವ–ಲಿಂಗಾಯತ ಅಭಿವೃದ್ಧಿ ನಿಗಮದ ವಿಷಯವನ್ನು ಕುರಿತು ಹೇಳುವುದಾದರೆ 'ವೀರಶೈವ–ಲಿಂಗಾಯತ' ಎಂಬ ಪದ ಸರಕಾರದ ಈವರೆಗಿನ ದಾಖಲೆಗಳಲ್ಲಿ ಎಲ್ಲಿಯೂ ಇಲ್ಲ. ಹೀಗೆ ಇಲ್ಲದ ಪದವನ್ನು ಬಳಸಿ ಮನವಿ ಸಲ್ಲಿಸುವುದು ತಾಂತ್ರಿಕ ತೊಡಕಿಗೆ ಕಾರಣವಾಗುತ್ತದೆ. ಲಿಂಗಾಯತ–ವೀರಶೈವ ಎಂದು ಬಳಸಿದರೆ ಲಿಂಗಾಯತರಲ್ಲಿ ಇರುವ ವೀರಶೈವ ಎಂಬ ಒಳಪಂಗಡಕ್ಕೆ ಮಾತ್ರ ಅದು ಸೀಮಿತವಾಗುತ್ತದೆ. ಆದ್ದರಿಂದ 'ಲಿಂಗಾಯತ ಅಭಿವೃದ್ಧಿ ನಿಗಮ' ಸ್ಥಾಪಿಸಬೇಕೆಂಬ ಮನವಿ ಸಲ್ಲಿಸಿದರೆ ಮತ್ತು ಸಮಸ್ತ ಲಿಂಗಾಯತರನ್ನು ಹಿಂದುಳಿದ ವರ್ಗಕ್ಕೆ ಸೇರಿಸಬೇಕೆಂಬ ಬೇಡಿಕೆ ಇಟ್ಟರೆ ಅದು ಕಾನೂನಾತ್ಮಕವಾಗಿ ಸೂಕ್ತವಾಗುತ್ತದೆ. ಇದರಿಂದ ಯಾವುದೇ ತಾಂತ್ರಿಕ ಸಮಸ್ಯೆಗಳು ಉದ್ಭವಿಸಲಾರವು. ಹಾಗೆಯೇ ವೀರಶೈವರೂ ಲಿಂಗಾಯತರ ಭಾಗವಾಗಿರುವುದರಿಂದ (ಒಳಪಂಗಡ ಸಂಖ್ಯೆ ೩೮) ಅವರಿಗೂ ಎಲ್ಲ ಸೌಲಭ್ಯಗಳು ಲಭ್ಯವಾಗುತ್ತವೆ. ಇದನ್ನು ಲಿಂಗಾಯತ ಸ್ವತಂತ್ರಧರ್ಮದ ಹೋರಾಟಗಾರರೂ ಪ್ರಾಂಜಲ ಮನಸ್ಸಿನಿಂದ ಬೆಂಬಲಿಸುತ್ತಾರೆ. ಈ ಕಾರಣಕ್ಕಾಗಿ ಅಖಿಲ ಭಾರತ ವೀರಶೈವ ಮಹಾಸಭೆಯ ಪದಾಧಿಕಾರಿಗಳಾಗಲಿ, ಸಭೆ ಸೇರಿದ ಕಾಂಗ್ರೆಸ್ ಪಕ್ಷದ ಧುರೀಣರಾಗಲಿ ತಮ್ಮ ಮನವಿ ಅಥವಾ ಬೇಡಿಕೆಯ ಪತ್ರಗಳಲ್ಲಿ ಬದಲಾವಣೆ ಮಾಡಿಕೊಳ್ಳುವುದು ಸೂಕ್ತ. ಇಲ್ಲದೆ ಹೋದರೆ ಅದೊಂದು ನಿರರ್ಥಕ ಪ್ರಯತ್ನಗಳ ಒಂದು ಭಾಗವಾಗುತ್ತದೆ ಮತ್ತು ಲಿಂಗಾಯತರ ಬಗ್ಗೆ ಈ ಧುರೀಣರು ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ ಎಂದು ಭಾವಿಸಬಹುದಷ್ಟೆ.

**'ಮತ್ತೆ ಕಲ್ಯಾಣ'ವೆಂಬ ವಿನೂತನ ಅಭಿಯಾನ**

ಇತ್ತೀಚೆಗೆ ಸಾಣೇಹಳ್ಳಿಯ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ನೇತೃತ್ವದಲ್ಲಿ ಅನೇಕ ಪ್ರಗತಿಪರ ಸ್ವಾಮಿಗಳು, ಚಿಂತಕರು ಸಭೆ ಸೇರಿ 'ಸಹಮತ ವೇದಿಕೆ'ಯನ್ನು ಸ್ಥಾಪಿಸಿಕೊಂಡು ಅದರ ಅಡಿಯಲ್ಲಿ 'ಮತ್ತೆ ಕಲ್ಯಾಣ'ವೆಂಬ ವಿನೂತನ ಅಭಿಯಾನವನ್ನು ಜರುಗಿಸಬಯಸಿ ಕಾರ್ಯತತ್ಪರವಾಗಿರುವುದು ಒಳ್ಳೆಯ ಬೆಳವಣಿಗೆಯಾಗಿದೆ. ಬಸವಾದಿ ಶರಣರ ಸಮಾನತೆಯ ಆಶಯವನ್ನು ಜನಮನಕ್ಕೆ ತಲುಪಿಸಿ ಸಂಘರ್ಷ ರಹಿತವಾದ, ಸರ್ವಸಮಾನತೆಯ ಸಮಾಜವನ್ನು ಮತ್ತೆ ನಿರ್ಮಿಸಲು ಪ್ರಯತ್ನಿಸುವುದೇ 'ಮತ್ತೆ ಕಲ್ಯಾಣ'ದ ಸದಾಶಯವಾಗಿದೆ. ಜೊತೆಗೆ ಸಾಂಸ್ಥಿಕಗೊಂಡ ಸಾಂಸ್ಕೃತಿಕ ಸ್ವರೂಪವನ್ನು ವಿಮರ್ಶಿಸುತ್ತ ಚಿಂತನೆಗೆ ಒಳಪಡಿಸುವುದೂ, ವಚನಗಳ ಹಿನ್ನೆಲೆಯಲ್ಲಿ ಹೊಸ ಹೊಸ ನೆಲೆಗಳನ್ನು ಕಂಡುಕೊಳ್ಳುವುದೂ ಕೂಡ ಅಭಿಯಾನದ ಉದ್ದೇಶವಾಗಿದೆ. ಶಿವಶರಣೆ ಅಕ್ಕನಾಗಮ್ಮನ ಐಕ್ಯಸ್ಥಳ ಚಿಕ್ಕಮಗಳೂರಿನ ಎಣ್ಣೆಹೊಳೆಯಿಂದ ಅಗಸ್ಟ ಒಂದರಂದು ಪ್ರಾರಂಭಗೊಳ್ಳುವ ಈ ಅಭಿಯಾನವು ಬಸವಣ್ಣನವರ ಕಾರ್ಯಕ್ಷೇತ್ರ ಶರಣಾಂದೋಲನದ ಜನ್ಮಸ್ಥಳ ಬಸವಕಲ್ಯಾಣದಲ್ಲಿ ಅಗಸ್ಟ ಮೂವತ್ತರಂದು ಮಂಗಲಗೊಳ್ಳಲಿದೆ. ಇನ್ನುಳಿದಂತೆ ಅಗಸ್ಟ ತಿಂಗಳುದ್ದಕ್ಕೂ ಕರ್ನಾಟಕದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ನಿರ್ದಿಷ್ಟಪಡಿಸಿದ ದಿನದಂದು ವಿದ್ಯಾರ್ಥಿಗಳೊಂದಿಗೆ ಸಂವಾದ, ಸಾಮರಸ್ಯದ ನಡಿಗೆ, ಉಪನ್ಯಾಸ, ನಾಟಕ ಇತ್ಯಾದಿ ಕಾರ್ಯಕ್ರಮಗಳು ಈ ಅಭಿಯಾನದಂಗವಾಗಿ ಜರಗುತ್ತವೆ. ಇದಕ್ಕೆ ಯಾವುದೇ ಜಾತಿ–ಮತ ಪಂಥಗಳ ಬಂಧನವಿಲ್ಲ; ಯಾವುದೇ ಮಠ–ಪೀಠಗಳ ಹಂಗಿಲ್ಲ. ಇದು ಎಲ್ಲರಿಂದ ಎಲ್ಲರಿಗಾಗಿ ಜರುಗುವ ಅಭಿಯಾನ.

ಬಸವಾದಿ ಶರಣರ ಮೌಲ್ಯಾದರ್ಶಗಳನ್ನು ನಮ್ಮ ನೆನಪಿನಾಳದಿಂದ ಹೊರತೆಗೆದು ಮನನ ಮಾಡಿಕೊಳ್ಳುವ, ಹೊಸ ತಲೆಮಾರಿಗೆ ಅದನ್ನು ತಲುಪಿಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ. ಬನ್ನಿ, ನಾವೆಲ್ಲ ಈ ಮಹಾಮಣಿಹವನ್ನು ಪೂರೈಸೋಣ; 'ಮತ್ತೆ ಕಲ್ಯಾಣ' ಅಭಿಯಾನವನ್ನು ಯಶಸ್ವಿಗೊಳಿಸೋಣ.

**ರಾವ್‌ಬಹದ್ದೂರ ಡಾ. ಫ. ಗು. ಹಳಕಟ್ಟಿ ಅವರ ಜಯಂತಿ**

'ವಚನ ಗುಮ್ಮಟ'ವೆಂದು ಗೌರವಿಸಲ್ಪಡುವ ರಾ. ಬ. ಡಾ. ಫಕೀರಪ್ಪ ಗುರುಬಸಪ್ಪ ಹಳಕಟ್ಟಿ ಅವರ ಜನ್ಮದಿನ ಜುಲೈ ೨. ಬಸವಾದಿ ಶರಣರ ವಚನ ಸಂಪತ್ತನ್ನು ನಮಗೆಲ್ಲ ಬಳುವಳಿಯಾಗಿ ಕೊಟ್ಟ ಅವರು ಜಗದ್ವಂದ್ಯರು. ಶಿಕ್ಷಣ, ವಾಣಿಜ್ಯ, ಉದ್ದಿಮೆ, ರಾಜಕೀಯ ಮುಂತಾದ ಕ್ಷೇತ್ರಗಳಲ್ಲಿ ಅವರು ಸಲ್ಲಿಸಿದ ಸೇವೆ, ನೀಡಿದ ಕೊಡುಗೆ ಅಪೂರ್ವ ಹಾಗು ಅನುಪಮ. ಅವರು ಸಲ್ಲಿಸಿದ ಸೇವೆ ಮತ್ತು ಕಲಿಸಿದ ಶ್ರಮಸಂಸ್ಕೃತಿ ನಮಗೆಲ್ಲ ಮಾದರಿ. 'ಲಿಂಗಾಯತ ದರ್ಶನ' ಪತ್ರಿಕೆಯ ಬಳಗವು ಅವರನ್ನು ಶ್ರದ್ಧಾ ಭಕ್ತಿಗಳಿಂದ ಸ್ಮರಿಸುತ್ತದೆ.

**ಡಾ. ಫ. ಗು. ಹಳಕಟ್ಟಿ ಅವರ ಜಯಂತಿಯ**
**ಹಾರ್ದಿಕ ಶುಭಾಶಯಗಳು**

■■

# ವಚನಾರ್ಥ–ಚಿಂತನ

● ಡಾ. ಸಿದ್ಧರಾಮ ಸ್ವಾಮಿಗಳು

**ವಿದ್ಯೆಯ ಬಹಳ ಕಲಿತಡೇನು ಭಕ್ತಿಯಲ್ಲಿ**
**ಶುದ್ಧವಿಲ್ಲದವನು ಬುದ್ಧಿಯಲ್ಲಿ ವಿಶೇಷವೆನಿಸಿದಡೇನು**
**ಭಕ್ತಿಯಲ್ಲಿ ಬಡವನಾದವನು**
**ಅರ್ಥದಲ್ಲಿ ಅಧಿಕನಾದಡೇನು ಕರ್ತೃಶಿವನ**
**ನೆನೆಯದವನು**
**ಮದ್ದುಗುಣಿಕೆಯ ತಿಂದ ಮದೋನ್ಮತ್ತರ**
**ಎನ್ನತ್ತ ತೋರದಿರಯ್ಯ ಅಖಂಡೇಶ್ವರಾ.**

ಮಾನವ ಜೀವನದ ಸಾರ್ಥಕತೆಯಾಗುವುದು ಶಿವಭಕ್ತಿ, ಶಿವಧ್ಯಾನ–ಗಳಿಂದ ಮಾತ್ರ. ಕೇವಲ ವಿದ್ಯಾವಂತರು, ಬುದ್ಧಿವಂತರು ಹಾಗೆಯೆ ಶ್ರೀಮಂತ ರಾಗಿದ್ದರೆ ನಮ್ಮ ಭವಪಾಶ ಹರಿಯದು. ನಮಗೆ ಅನುಭಾವಿಗಳ ಸಂಗ ಸುಖ ದೊರೆಯದು. ಇದಕ್ಕೆಲ್ಲ ಶಿವಭಕ್ತಿ ಶಿವಧ್ಯಾನಗಳು ಮುಖ್ಯವಾಗಿರಬೇಕು ಎಂದು ಕಠೋರವಾಗಿ ಹೇಳುವ ಈ ವಚನ ಜೇವರಗಿಯ ಶ್ರೀ ಷಣ್ಮುಖ ಶಿವಯೋಗಿಗಳವರದು.

ನಮ್ಮ ದೈನಂದಿನ ಬದುಕಿನಲ್ಲಿ ವಿದ್ಯೆಗಿರುವ ಮಹತ್ವವನ್ನು ಯಾರೂ ಅಲ್ಲಗಳೆಯಲಾರರು. "ವಿದ್ವಾನ್ ಸರ್ವತ್ರ ಪೂಜ್ಯತೇ" ಎಂಬ ಸುಭಾಷಿತ–ವೊಂದು ವಿದ್ಯಾವಂತನಾದವನು ದೇಶ ವಿದೇಶಗಳಲ್ಲಿಯೂ ಗೌರವವನ್ನು ಸಂಪಾದಿಸುತ್ತಾನೆ ಎಂದು ಹೇಳುತ್ತದೆ. ವಿದ್ಯೆಯೆ ಮನುಷ್ಯನ ನಿಜವಾದ ಸೌಂದರ್ಯ. ಅದು ಗುಪ್ತ ಧನ. ಅದನ್ನು ಕಳ್ಳರು ಕದಿಯಲಾರರು. ಸಹೋದರರು ಹಂಚಿಕೊಳ್ಳಲಾರರು. ಸರಕಾರ ಆಕ್ರಮಿಸಿಕೊಳ್ಳಲಾರದು. ವಿದ್ಯೆಯಿಂದಲೇ ಭೋಗ, ಯಶಸ್ಸು ಮನುಷ್ಯನಿಗೆ ಪ್ರಾಪ್ತವಾಗುತ್ತವೆ–ಎಂದೆಲ್ಲ ವಿದ್ಯೆಯ ಮಹತ್ವವನ್ನು ಹೇಳಲಾಗಿದ್ದರೂ ವಿದ್ಯಾವಂತನಾದವನು ಪರಿಶುದ್ಧ ಭಕ್ತಿಯನ್ನು ಆಚರಿಸದಿದ್ದರೆ ಅವನ ವಿದ್ಯೆಗೆ ಕಿಂಚಿತ್ತೂ ಬೆಲೆಯಿಲ್ಲ ಎಂಬುದು ಅನುಭಾವಿಗಳ ಮಾತು. "ಆವ ವಿದ್ಯೆ ಕಲಿತಡೇನು? ಸಾವವಿದ್ಯೆ ಬೆನ್ನ ಬಿಡದು" ಎನ್ನುವ ಅವರು ಮನುಷ್ಯ ತನ್ನ ಜನ್ಮದ ಸಾರ್ಥಕತೆಗಾಗಿ ಅಧ್ಯಾತ್ಮ ವಿದ್ಯೆಯನ್ನು ಸಂಪಾದಿಸಬೇಕು. ಅದುವೆ ನಿಜವಾದ ವಿದ್ಯೆ. "ಸಾ ವಿದ್ಯಾ ಯಾ ವಿಮುಕ್ತಯೇ" ಮನುಷ್ಯನಿಗೆ ಮುಕ್ತಿಯನ್ನು ಕರುಣಿಸುವ ವಿದ್ಯೆಯೇ ಶ್ರೇಷ್ಠವಾದ ವಿದ್ಯೆ. ಅದು ಪರಿಶುದ್ಧ ಭಕ್ತಿಯಿಂದ ಮಾತ್ರ ಲಭ್ಯವಾಗುತ್ತದೆ.

ಕೆಲವು ಜನ ಅತ್ಯಂತ ಬುದ್ಧಿವಂತರಾಗಿರುತ್ತಾರೆ. ತಮ್ಮ ಬುದ್ಧಿಯ ಬಲದಿಂದ ಚಾಕಚಕ್ಯತೆಯಿಂದ ಈ ಜಗತ್ತಿನಲ್ಲಿ ಸುಖವಾಗಿ ಬದುಕಲು ಜಾಣ ಮಾತುಗಳನ್ನಾಡಲು ರೂಢಿಸಿಕೊಂಡಿರುತ್ತಾರೇನೋ ನಿಜ. ಆದರೆ ಅವರಿಗೂ ಆತ್ಮ ಅಥವಾ ಅಧ್ಯಾತ್ಮ ವಿದ್ಯೆ ಸಾಧ್ಯವಾಗದು. "ನ ಅಯಂ ಆತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾ ಶ್ರುತೇನ" ಎಂಬ ಉಪನಿಷತ್ತಿನ ವಾಕ್ಯವು ಈ ಮಾತನ್ನು ಸಮರ್ಥಿಸುತ್ತದೆ. ಬುದ್ಧಿಯನ್ನು ಹೊಂದಿದ ಅನೇಕ ಜನ ತಮ್ಮ ಬದುಕಿನಲ್ಲಿ ಶ್ರದ್ಧೆಯನ್ನು ಕಳೆದು–ಕೊಂಡಿರುತ್ತಾರೆ. "ಬುದ್ಧಿ ಬಂತು ಶ್ರದ್ಧೆ ಹೋಯ್ತು" ಎಂದಿಲ್ಲವೆ ಆಧುನಿಕ ವಚನಕಾರರಾದ ಸಿದ್ಧಯ್ಯ ಪುರಾಣಿಕರು. 'ಶ್ರದ್ಧೆ' ಎಂಬುದು ಭಕ್ತಿಯ ಮೊದಲ ಸೋಪಾನ. ಶ್ರದ್ಧೆಯಿಲ್ಲದೆ ಭಕ್ತಿ ಅಳವಡದು. ಬುದ್ಧಿವಂತನಾದವನಲ್ಲಿ ಈ ಶ್ರದ್ಧೆ ಭಕ್ತಿಗಳು ಇಲ್ಲದಿದ್ದರೆ ಅವನು ಅನುಭಾವಿಗಳ ತಿರಸ್ಕಾರಕ್ಕೆ ಗುರಿಯಾಗಿ ಅವರ ಸಂಗಸುಖದಿಂದ ವಂಚಿತನಾಗುವನು.

ಲೌಕಿಕ ಜೀವನದಲ್ಲಿ ವಿದ್ಯೆ ಬುದ್ಧಿಗಳಂತೆ ಹಣವೂ ಪ್ರಮುಖ ಪಾತ್ರವಹಿಸುತ್ತದೆ. "ಸರ್ವೇಗುಣಾಃ ಕಾಂಚನಮ್ ಆಶ್ರಯಂತಿ" ಎನ್ನುವಲ್ಲಿ ಹಣವಿದ್ದವನೇ ಶ್ರೇಷ್ಠ ಕುಲದವನು. ಅವನೇ ಪಂಡಿತ, ಗುಣಶಾಲಿ, ಸರ್ವಾಂಗ ಸುಂದರ ಎಂದೆಲ್ಲ ವರ್ಣಿಸಲಾಗುತ್ತದೆ. ಇಂದು ಇದು ಅಕ್ಷರಶಃ ನಿಜವೆನಿಸಿದರೂ ಸಿರಿಸಂಪತ್ತಿನ ಅಸ್ಥಿರತೆಯನ್ನು ಮನಗಾಣುವುದು ಕೂಡ

ನಾಗನೂರು ಶ್ರೀ ರುದ್ರಾಕ್ಷಿಮಠ, ಬೆಳಗಾವಿ

ಅತ್ಯವಶ್ಯವಾಗಿದೆ. ಅನೇಕ ರಾಜಮಹಾರಾಜರು ತಮ್ಮ ಸಂಪತ್ತನ್ನೆಲ್ಲ ಕಳೆದುಕೊಂಡು ಭಿಕ್ಷುಕರಾಗಿ ತಿರುಗಿದ ಐತಿಹಾಸಿಕ ಘಟನೆಗಳಿಗೇನೂ ಕೊರತೆಯಿಲ್ಲ. ಬಸವಣ್ಣನವರ ದೃಷ್ಟಿಯಲ್ಲಿ "ಸಿರಿ ಎಂಬುದು ಸಂತೆಯ ಮಂದಿ." ಯಾವುದೋ ಒಂದು ಕ್ಷಣ ಒಂದು ದಿನ ಒಂದೆಡೆ ಸೇರಿ ಮತ್ತೆ ಇಲ್ಲದಂತಾಗುವುದು ಅದರ ಲಕ್ಷಣ. ಅಂತೆಯೇ "ಸಿರಿ ಎಂಬುದ ನೆಚ್ಚಿ ಕೆಡಬೇಡ, ಮರೆಯದೇ ಪೂಜಿಸು ಕೂಡಲಸಂಗಮದೇವನ" ಎಂಬ ಎಚ್ಚರಿಕೆಯ ಘಂಟೆಯನ್ನು ಬಾರಿಸುತ್ತಾರೆ. ದೈವಕೃಪೆಯಿಂದ ಧನ ಸಂಪತ್ತು ಲಭ್ಯವಿರುವಾಗ ಅದನ್ನು ಕರುಣಿಸಿದ ಶಿವನನ್ನು ನೆನೆಯದೇ ಹೋದರೆ ಅದು ಕೃತಘ್ನತೆಯೇ ಸರಿ. ವಾಸಿಸಲು ಭೂಮಿ, ಹೊಟ್ಟೆಗೆ ಅನ್ನ, ಉಡಲು ಬಟ್ಟೆ, ಪ್ರಾಣಕ್ಕಾಧಾರವಾದ ಗಾಳಿ–ನೀರನ್ನು ಕೊಟ್ಟ ಶಿವನನ್ನು ನೆನೆಯುವುದು ನಮ್ಮ ಮುಖ್ಯ ಕರ್ತವ್ಯ. ಹೀಗೆ ವಿದ್ಯೆ, ಬುದ್ಧಿ, ಸಂಪತ್ತುಗಳು ನಮಗೆ ಲಭ್ಯವಾಗಿದ್ದರೂ ಶಿವಭಕ್ತಿ ಶಿವಧ್ಯಾನಗಳನ್ನು ಕೂಡ ನಮ್ಮ ದೈನಂದಿನ ಬದುಕಿನ ಅವಿಭಾಜ್ಯ ಅಂಗವಾಗಿಸಿಕೊಳ್ಳಬೇಕು. ಹೀಗಲ್ಲದೆ ವಿದ್ಯಾಮದ, ಬುದ್ಧಿಮದ ಮತ್ತು ಧನಮದಗಳಿಂದ ಪ್ರಭಾವಿತರಾಗಿ, ಶಿವಭಕ್ತಿಯಿಂದ ವರ್ತಿಸದೆ, ಮನಬಂದಂತೆ ವರ್ತಿಸುವವರನ್ನು ಶ್ರೀ ಷಣ್ಮುಖ ಶಿವಯೋಗಿಗಳು 'ಮದ್ದುಗುಣಿಕೆಯ ತಿಂದ ಮದೋನ್ಮತ್ತರ ಎನ್ನತ್ತ ತೋರದಿರಯ್ಯ' ಎಂದು ಖಾರವಾಗಿ ಜರಿಯುತ್ತಾರೆ.

ಮದ್ದುಗುಣಿಕೆ ಒಂದು ರೀತಿಯ ಕಾಡುಸೊಪ್ಪು. ಅದರ ಎಲೆಗಳನ್ನು ತಿಂದ ಮನುಷ್ಯ ಉನ್ಮತ್ತನಾಗಿ ಹುಚ್ಚನಂತೆ ವರ್ತಿಸುತ್ತಾನೆ. ತನ್ನ ಮೇಲಿನ ನಿಯಂತ್ರಣವನ್ನು ಕಳೆದುಕೊಂಡು ಸಮಾಜದ ತಿರಸ್ಕಾರಕ್ಕೆ ಒಳಗಾಗುತ್ತಾನೆ. ಇಂಥ ವ್ಯಕ್ತಿಗೆ ಅನುಭಾವಿಗಳ ಸಂಗ ದೊರೆಯುವುದೆಂತು? ಅದೆಂದೂ ಸಾಧ್ಯವಾಗದ ಮಾತು. ಮನುಷ್ಯನಿಗೆ ಶಾಶ್ವತವಾದ ಸುಖ ಸಂತೋಷ ದೊರೆಯುವುದೇ ಅನುಭಾವಿಗಳ ಸಂಗದಲ್ಲಿ. ಆದ್ದರಿಂದ ನಾವು ವಿದ್ಯಾವಂತರಾಗಿರಲಿ, ಧನವಂತರೇ ಆಗಿರಲಿ ನಿರಪೇಕ್ಷಭಾವದ ಶ್ರದ್ಧಾಭಕ್ತಿಯಿಂದ ದೇವರನ್ನು ನಿತ್ಯ ಸ್ಮರಿಸಿ ಶಿವನ ಹಾಗು ಅನುಭಾವಿಗಳ ಕೃಪೆಗೆ ಪಾತ್ರರಾಗಬೇಕು. ಹಾಗಾದಾಗ ಮಾತ್ರ ನಮ್ಮ ವಿದ್ಯೆ, ಬುದ್ಧಿ, ಸಿರಿ ಸಂಪತ್ತು ಜೊತೆಗೆ ನಮ್ಮ ಬದುಕು ಇವೆಲ್ಲ ಸಾರ್ಥಕತೆಯನ್ನು ಪಡೆಯುತ್ತವೆ ಎಂಬ ಶ್ರೀ ಷಣ್ಮುಖ ಶಿವಯೋಗಿಗಳ ಮನದಿಂಗಿತ ಈ ವಚನದಲ್ಲಿ ಅಭಿವ್ಯಕ್ತವಾಗಿದೆ.

■■

---

ಹೆಸರಿಗೆ ಬಾರದ ಘನವ ಹೆಸರಿಗೆ ತಂದು
ನುಡಿದಾಡುವ ಕಿಸುವಾಯರ ಮಾತ ಕೇಳಲಾಗದು
ಅದೇನು ಕಾರಣವೆಂದರೆ
ಈ ಪಶುಗಳೇನು ಬಲ್ಲರು?
ಬಸವನೆಂತಿಪ್ಪನೆಂಬುದ ವಸುಧೆಯ ಮನುಜರೆತ್ತಬಲ್ಲರು?
ಇದು ಹುಸಿ ಹುಸಿ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ
ಆ ಬಸವನ ನೆಲೆಯ ಬಸವಾದಿ ಪ್ರಮಥರೆ ಬಲ್ಲರಲ್ಲದೆ
ಓ ಹುಸಿಮಾಯಗೊಳಗಾದ ಸೂತಕರೆತ್ತಬಲ್ಲರು
ನಿಮ್ಮ ಶರಣರ ಸುದ್ದಿಯ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

**ಹಡಪದ ಅಪ್ಪಣ್ಣ**

# ವಚನಗಳಲ್ಲಿ ಅನುಕಂಪದ ಅಲೆಗಳು

● ಡಾ. ರಾಜಶೇಖರ ಜಮದಂಡಿ

ಜಗತ್ತಿನಲ್ಲಿ ಮಾನವಧರ್ಮವನ್ನು ಎತ್ತಿಹಿಡಿದ, ಸರ್ವಸಮಾನತೆಯನ್ನು ಅನುಸರಿಸಿದ, ಏಕದೇವೋಪಾಸನೆಯನ್ನು ಬೋಧಿಸಿದ ಕಾಲ ಎನ್ನುವುದೇನಾದರೂ ಇದ್ದರೆ ಅದು ೧೨ ನೇ ಶತಮಾನ ಒಂದೆ ಎಂದು ಹೇಳಬೇಕಾಗುತ್ತದೆ. ಕಾಯವೇ ದೇವಾಲಯವೆಂಬ, ಅಂತರಂಗದ ಬೆಳಕೇ ಶಿವನೆಂಬ, ಕಾಯಕವೇ ಶಿವಪೂಜೆಯೆಂಬ ಶರಣ-ಶರಣೆಯರ ಬೋಧೆಯು ದೇಶಕಾಲಾತೀತವಾದ ಶಾಶ್ವತ ಸತ್ಯವಾಗಿದೆ. ಅದೇರೀತಿ ಬಸವಾದಿ ಶರಣರ ವಚನಗಳು ಆಧ್ಯಾತ್ಮಿಕ ತವನಿಧಿಯಗಿವೆ. ಮಾನವೀಯತೆಯ ಸಾಕಾರ, ಆನಂದದ ಸಾಗರ, ಶಾಂತಿಯ ಆಗರ ಮತ್ತು ಪರಮ ಚೈತನ್ಯದ ಮುನ್ನುಡಿಯಾಗಿವೆ. ಇವುಗಳಿಗೆ ಸಮಾನವಾದ ನುಡಿಗಳನ್ನು ಪ್ರಪಂಚದ ಯಾವ ಭಾಷೆಯಲ್ಲಿಯೂ ಕಾಣಲಾರೆವು.

೧೨ನೇ ಶತಮಾನದಲ್ಲಿ ಮಹಾ ಶಿವಶರಣರ ಅನುಭವದ ಮೂಸೆಯಲ್ಲಿ ಸಾವಿರಾರು ವಚನಗಳು ನಮಗೆ ಮತ್ತು ನಮ್ಮ ನಂತರದವರಿಗೆ ದಾರಿ ದೀಪವಾಗಿವೆ. ಈ ವಚನಗಳನ್ನು ಉಳಿಸಿ ಕಾಪಾಡುವುದರ ಹಿಂದೆ ನೂರಾರು ಶರಣರ ತ್ಯಾಗ ಬಲಿದಾನವಿದೆ ಹಾಗೂ ಮಾನವೀಯ ಸಮಾಜ ನಿರ್ಮಾಣದ ಕನಸಿದೆ. ಕಲ್ಯಾಣ ಕ್ರಾಂತಿಯ ಅನಂತರ ಅಥವಾ ಕಲ್ಯಾಣ ಕ್ರಾಂತಿಗೆ ಕಾರಣವಾದ ವಚನ ಸಾಹಿತ್ಯವನ್ನು ನಿರ್ನಾಮಗೊಳಿಸಬೇಕೆಂದು ಅನೇಕ ಹುನ್ನಾರುಗಳು ಆ ಕಾಲದಲ್ಲಿ ನಡೆದವು. ಈ ಹುನ್ನಾರಿನ ಹಿಂದೆ ಪುರೋಹಿತ ಶಾಹಿಗಳ, ಸಂಪ್ರದಾಯವಾದಿಗಳ, ರಾಜ್ಯಶಾಹಿಗಳ ಮತ್ತು ಪಟ್ಟಭದ್ರಹಿತಾಶಕ್ತಿಗಳ ಕುತಂತ್ರವಿತ್ತು. ಇದಕ್ಕೆ ಪ್ರತಿಯಾಗಿ ತಮ್ಮ ಪ್ರಾಣವನ್ನೇ ಒತ್ತೆಯಿಟ್ಟು ಹೋರಾಡಿ ವಚನಗಳನ್ನು ಕಾಪಾಡಿದ ಅನೇಕ ಶರಣಚೇತನಗಳ ಬಗೆಗೆ ನಾವು ಎಷ್ಟೇ ಗುಣಗಾನ ಮಾಡಿದರೂ ಕಡಿಮೆ. ತಮ್ಮ ಪ್ರಾಣಕ್ಕಿಂತ ವಚನಗಳ ರಕ್ಷಣೆ ಗಮನಾರ್ಹವಾದ ಕೆಲಸವೆಂದೇ ಶರಣರು ಭಾವಿಸಿಕೊಂಡಿದ್ದರು. ಅವರು ಅಂದು ವಚನದ ಕಟ್ಟುಗಳನ್ನು ರಕ್ಷಣೆ ಮಾಡುವ ಸಲುವಾಗಿ ಹಳ್ಳ-ಕೊಳ್ಳ, ಕಾಡು-ಕಣಿವೆ, ಹಗಲು-ರಾತ್ರಿ, ಬಿಸಿಲು-ಮಳೆ ಮುಂತಾದ ತೊಂದರೆಗಳನ್ನು ಲೆಕ್ಕಿಸಲಿಲ್ಲ. ವಚನಗಳ ತಾಳೆಗರಿಗಳನ್ನು ದಟ್ಟವಾದ ಕಾಡುಗಳ ಗುಹೆಗಳಲ್ಲಿ ಅಡಗಿಸಿಟ್ಟರೆಂಬುದು ತಿಳಿದುಬರುತ್ತದೆ.

ವಚನಕಾರರ ಉದ್ದೇಶ ಜನ ಸಮ್ಮುಖವಾದುದರಿಂದ ಅವರ ಭಾಷೆ, ರೀತಿ, ರೂಪ, ಭಾವನೆಗಳೆಲ್ಲದರ ಹಿಂದೆ ಜಾನಪದ ಸತ್ವ ಹಿನ್ನೆಲೆಯಾಗಿದೆ. ಆಡುನುಡಿಗೆ ಹತ್ತಿರವಾದ ಭಾಷೆಯನ್ನು ಬಳಸಿದ ಅವರ ನುಡಿಗಳು ಇಂದಿಗೂ ಪರಿಣಾಮಕಾರಿಯಾಗಿ ಸಂಚಲನವನ್ನುಂಟು ಮಾಡುತ್ತಿವೆ. ಇಂಥ ಅಮೂಲ್ಯವಾದ ವಚನಗಳಲ್ಲಿ ಪ್ರಪಂಚದ ಎಲ್ಲ ಆಗು-ಹೋಗುಗಳ ವಸ್ತು ವಿಷಯಗಳಿವೆ. ಅವುಗಳ ಅಧ್ಯಯನ, ತಿಳುವಳಿಕೆ, ಪಾಲನೆ ಮಾಡಿದರೆ ನಾವಿರುವ ಸಮಾಜ ಪಾವನವಾಗುವುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಮೊದಲು ಪ್ರತಿಯೊಬ್ಬರ ಮನಸ್ಸು ಅದರೆಡೆಗೆ ಸದಾ ಹರಿಯುವಂತಾಗಬೇಕು. ವಚನಗಳನ್ನು ನಾವು ಕಾಪಾಡಿದರೆ ಅಥವಾ ಅಧ್ಯಯನ ಮಾಡಿದರೆ ಅವು ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತವೆ.

ವಚನ ಸಾಹಿತ್ಯವೆಂದರೆ ಜೀವನ ಮೌಲ್ಯಗಳ ಒಂದು ಸುಂದರ ಕರಂಡಕ. ವಚನಸಾಹಿತ್ಯವೆಂಬುದೇ ಉತ್ತಮ ಜೀವನ ಪ್ರಣಾಳಿಕೆಯ ಒಂದು ಗುಚ್ಛವಿದ್ದಂತೆ. ವಚನಕಾರರು ಸತ್ಯಕ್ಕೆ ಹೆಚ್ಚಿನ ಮಹತ್ವ ಕೊಡುತ್ತಿದ್ದರು. ಅಂತೆಯೇ ಸತ್ಯವ ನುಡಿಯುವುದೇ ದೇವಲೋಕ ಮಿಥ್ಯವ ನುಡಿಯುವುದೇ ಮರ್ತ್ಯಲೋಕ ಎಂದು ಹೇಳಿರುವರು. ಎರಡನೆಯದಾಗಿ ವಚನಕಾರರು ಅಹಿಂಸೆಗೆ ಒತ್ತು ನೀಡಿದರು. ದಯಾಗುಣಗಳನ್ನು ಎಲ್ಲರಲ್ಲಿ ಬಿತ್ತಿ ಬೆಳೆಸಿದರು. ದಯೆಯೇ ಧರ್ಮದ ಮೂಲವೆಂದು ದಯಬೇಕು ಸಕಲ ಪ್ರಾಣಿಗಳೆಲ್ಲರಲಿ ಎಂದು ಸಾರಿ ಹೇಳಿದರು. ನಯವಿನಯ, ಗೌರವ, ಆದರ್ಶಗಳಿಗೆ ಮನೆ ಮಾಡಿದವರೆಂದರೆ ೧೨ನೇ ಶತಮಾನದ ವಚನಕಾರರು. 'ಅಯ್ಯಾ ಎಂದರೆ ಸ್ವರ್ಗ ಎಲವೋ ಎಂದರೆ ನರಕ', ಮೃದು ವಚನವೇ ಸಕಲ ಜಪತಪಂಗಳಯ್ಯಾ ಎನ್ನುತ್ತಾ 'ಎನಗಿಂತ ಕಿರಿಯರಿಲ್ಲ' ವೆಂದು ನುಡಿದು-ನಡೆದು ತೋರಿದರು. ಸಮಾಜದ ಒಳಿತಿಗಾಗಿ ಸದಾ ಸಿದ್ಧತೆಯಲ್ಲಿದ್ದ ವಚನಕಾರರು ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ ಹಾಗೂ ಸಾಮಾಜಿಕ

ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ವಿಶ್ವವಿದ್ಯಾಲಯ ವಸತಿನಿಲಯ ಸರಸ್ವತಿಪುರಂ, ಅಗ್ನಿಶಾಮಕ ಕಛೇರಿ ಎದುರು, ಇ-೩, ಮೈಸೂರು. ೫೭೦೦೦೯. ಮೊ.೯೪೪೮೪೪೧೪೭೧

ನ್ಯಾಯಗಳಿಗಾಗಿ ಹೋರಾಟ ನಡೆಸಿದರು. ಕಾಯಕದ ಮೂಲಕ ಆರ್ಥಿಕ ಸಮಾನತೆಯನ್ನು, ದಾಸೋಹದ ಮೂಲಕ ದಾನದ ಮಹತ್ವವನ್ನು, ಅಂತರ್‌ಜಾತಿ ವಿವಾಹದ ಮೂಲಕ ಸಾಮಾಜಿಕ ಸಮಾನತೆಯನ್ನು, ಇಷ್ಟಲಿಂಗ ಪೂಜೆಯ ಮೂಲಕ ಧಾರ್ಮಿಕ ಸಮಾನತೆಯನ್ನು ಏಕಕಾಲದಲ್ಲಿ ಜಾರಿಗೆ ತಂದರು.

ವಚನಕಾರರು ಸಂಸಾರ ತ್ಯಾಗ ಬೋಧಿಸಲಿಲ್ಲ. ಅದರ ಬದಲಾಗಿ ಜೀವನ ಪ್ರೀತಿಯನ್ನು ಬೋಧಿಸಿದರು. ಜೀವನ ಮಾಯೆಯಲ್ಲ ಅದು ಬಹು ಸುಂದರವಾಗಿದೆ ಎಂದು ಅಧ್ಯಾತ್ಮದ ಹಿನ್ನೆಲೆಯಲ್ಲಿ ಪ್ರತಿಯೊಬ್ಬರೂ ಸಾಧನೆ ಮಾಡಲು ತಿಳಿಸಿದರು. ಶರಣರ ಹೋರಾಟದಲ್ಲಿ 'ಕೊಲ್ಲುವನೆಂಬ ಭಾಷೆ ಪರಮಾತ್ಮನದ್ದಾದರೆ ಗೆಲ್ಲುವೆನೆಂಬ ಭಾಷೆ ಶರಣನದ್ದು' ಆಗಿರುತ್ತದೆ. ಅಜ್ಞಾನದಿಂದ ಬದುಕಿನ ಬಂಡಿಯನ್ನು ಸರಿಯಾಗಿ ಎಳೆಯದೇ ಹಾದಿ ತಪ್ಪಿದವರನ್ನು ಕಂಡ ಬಸವಣ್ಣನವರು:

**ಎಡದ ಕೈಯಲ್ಲಿ ಕತ್ತಿ, ಬಲದ ಕೈಯಲ್ಲಿ ಮಾಂಸ ಬಾಯಲ್ಲಿ ಸುರೆಯ ಗಡಿಗೆ, ಕೊರಳಲ್ಲಿ ದೇವರಿರಲಿ ಅವರ ಲಿಂಗನೆಂಬೆ, ಸಂಗನೆಂಬೆ ಕೂಡಲಸಂಗಮದೇವಾ ಅವರ ಮುಖಲಿಂಗಿಗಳೆಂಬೆ**

ಹಾದಿ ತಪ್ಪಿದವರನ್ನು, ಹಿಂಸೆ ಮಾಡುವವರನ್ನು, ನೈತಿಕತೆ ಕಳೆದುಕೊಂಡವರನ್ನು ಎಚ್ಚರಿಸಿ ಉತ್ತಮ ವ್ಯಕ್ತಿತ್ವ ರೂಪಿಸಬೇಕೆಂಬ ಮೂಲೋದ್ದೇಶ ಶರಣರದ್ದಾಗಿತ್ತು. ಅಂದರೆ ಎಡಗೈಯಲ್ಲಿ ಕತ್ತಿ, ಬಲಗೈಯಲ್ಲಿ ಮಾಂಸ, ಬಾಯಲ್ಲಿ ಹೆಂಡವಿದ್ದ ಜನರನ್ನು ಬಸವಣ್ಣನವರು ಆಕಸ್ಮಿಕವಾಗಿ ನೋಡಿದಾಗ, ಅವರ ಮೇಲೆ ಮಾನವೀಯ ಅನುಕಂಪ ಹರಿಸಿ ಈ ವಚನ ಹೇಳಿದ್ದಾರೆ. ಕಾರಣ ಅವರಿಗೆ ಯಾರೂ ಸರಿಯಾದ ತಿಳಿವಳಿಕೆ ನೀಡದ್ದರಿಂದ ಅವರ ರೀತಿ–ನೀತಿಗಳು ತಪ್ಪಿವೆ. ಅವರಲ್ಲಿರುವ ಹತಾಶವಾದ ಆಲೋಚನೆಯಿಂದ ಕುಡಿತಕ್ಕೆ ಬಲಿಯಾಗಿರಬಹುದೆಂದು ವಾತ್ಸಲ್ಯದಿಂದ ಅವರನ್ನು ಸರಿದಾರಿಗೆ ತರಲು ಬಸವಣ್ಣನವರು ಪ್ರಯತ್ನಿಸಿದರು.

ವಚನಕಾರರಲ್ಲಿ ಎಂತಹ ಮಾನವೀಯ ಅನುಕಂಪವಿತ್ತೆಂಬುದನ್ನು ಬಸವಣ್ಣನವರ ಈ ವಚನ ನೆನಪಿಸುತ್ತದೆ.

**ಆಕಳ ಕಳ್ಳರು ಕೊಂಡೊಯ್ದರೆನ್ನದಿರಿಂಭೊ ನಿಮ್ಮ ಧರ್ಮ, ಬೊಬ್ಬಿಡದಿರಿಂಭೋ ನಿಮ್ಮ ಧರ್ಮ ಅರಸಾಡದಿರಿಂಭೋ ನಿಮ್ಮ ಧರ್ಮ, ಅಲ್ಲಿ ಉಂಬಡೆಯೂ ಸಂಗಯ್ಯ ಇಲ್ಲಿ ಉಂಬಡೆಯೂ ಸಂಗಯ್ಯ ಕೂಡಲಸಂಗಮದೇವ ಏಕೋ ಭಾವ.**

ಭಕ್ತರ ವೇಷದಲ್ಲಿದ್ದ ಗೊಲ್ಲ ಕಳ್ಳರು ಒಮ್ಮೆ ಬಸವಣ್ಣನವರ ಮನೆಯ ಹಸುಗಳನ್ನು ಕದ್ದೊಯ್ದರು. ಅವುಗಳಿಗೆ ಸಂಬಂಧಿಸಿದ ಕರುಗಳನ್ನು ಅಲ್ಲಿಯೇ ಬಿಟ್ಟು ಹೋಗಿದ್ದರು. ಇದನ್ನು ಗಮನಿಸಿದ ಬಸವಣ್ಣನವರು ಆ ಹಸುಗಳ ಕರುಗಳನ್ನು ಅವುಗಳೊಂದಿಗೆ ನಾನು ಕಳುಹಿಸದೇ ಹಾಗೆ ಇಲ್ಲಿಟ್ಟುಕೊಂಡಿರುವುದಕ್ಕೆ ತಾನೇ ಕಳ್ಳನೆಂದು ಕೊಳ್ಳುತ್ತಾರೆ. ಆ ಹಸುಗಳನ್ನು ಕದ್ದು ತೆಗೆದುಕೊಂಡು ಹೋಗುತ್ತಿದ್ದ ಗೊಲ್ಲರನ್ನು ಕರೆದು, ಕೂಡಲೇ ಈ ಕರುಗಳನ್ನೂ ಜೊತೆಗೆ ತೆಗೆದುಕೊಂಡು ಹೋಗಲು ಸೂಚಿಸುತ್ತಾರೆ. ಏಕೆಂದರೆ ಕರುಗಳು ತಮ್ಮ ತಾಯಂದಿರನ್ನು ಕಳೆದುಕೊಂಡು ಕೊರಗುತ್ತವೆ, ಉಪವಾಸ ಬೀಳುತ್ತವೆ, ಹಸಿವೆಯಿಂದ ನರಳುತ್ತವೆಯಾದ್ದರಿಂದ ತಾಯಿ ಮಕ್ಕಳನ್ನು ಅಗಲಿಸಬಾರದೆಂದು ಅನುಕಂಪ ಸೂಚಿಸುತ್ತಾರೆ.

ಶರಣರಿಗೆ ಪ್ರಾಣಿ ಹತ್ಯೆ ಮಹಾಪಾಪವೆಂಬ ಅರಿವು ಇತ್ತು. ನಮ್ಮಂತೆಯೇ ಅವುಗಳಿಗೆ ಜೀವವಿದೆ. ಅವುಗಳೂ ತಮ್ಮ ಮಕ್ಕಳನ್ನು ಸಲಹುತ್ತವೆ. ನಮ್ಮಂತೆ ಬದುಕುವ ಹಕ್ಕಿರುವುದರಿಂದ ಪ್ರಾಣಿ ಪಕ್ಷಿಗಳನ್ನು ಪ್ರೀತಿಯಿಂದ ಸಲಹುವ ಮನಸ್ಸು ಶರಣರಲ್ಲಿತ್ತು. ಇದಕ್ಕೆ ಪೂರಕವಾಗಿ ಬಸವಣ್ಣನವರ ವಚನ ಹೀಗಿದೆ:

**ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು ಎಲೆ ಹೋತೇ ಅಳುಕಂಡ್ಯಾ, ವೇದವನೋದಿದವರ ಮುಂದೆ ಅಳುಕಂಡ್ಯಾ, ಶಾಸ್ತ್ರವ ಕೇಳಿದವರ ಮುಂದೆ ಅಳುಕಂಡ್ಯಾ, ನೀನು ಅತ್ತುದಕ್ಕೆ ತಕ್ಕುದ ಮಾಡುವ ಕೂಡಲಸಂಗಮದೇವಾ**

ಬಡವರನ್ನು ಕಂಡ ಹರಿಶ್ಚಂದ್ರ ತನ್ನಲ್ಲಿದ್ದ ಸಂಪತ್ತನ್ನು ದಾನ ಮಾಡಿದಂತೆ, ಶವಯಾತ್ರೆಯನ್ನು ನೋಡಿದ ಬುದ್ಧನು ವೈರಾಗ್ಯಭಾವ ತಾಳಿದಂತೆ, ಯಜ್ಞಕ್ಕೆ ಬಲಿ ಕೊಡುವುದನ್ನು ಕಂಡ ಬಸವಣ್ಣನವರು ವೈದಿಕ ಧರ್ಮವನ್ನೇ ತ್ಯಜಿಸುತ್ತಾರೆ. ಯಜ್ಞಶಾಲೆಯ ಮುಂದೆ ಅರಚುತ್ತಿರುವ ಹೋತವೊಂದನ್ನು ಕಂಡ ಬಸವಣ್ಣನವರು ಮರುಗಿ ಅದರ ತಲೆಯನ್ನು ನೇವರಿಸುತ್ತಾ ತಾವೂ ದುಃಖಿಸುತ್ತಾ ನಿನ್ನ ಕೊಂದವರು ಉಳಿವರೆ? ಅವರಿಗೂ ದೇವರು ಶಿಕ್ಷೆಯನ್ನು ಕೊಡುತ್ತಾನೆ ನೀನು ದುಃಖಿಸಬೇಡ ಎಂದು ಸಮಾಧಾನ ಹೇಳುತ್ತಾರೆ. ಇಲ್ಲಿ ಅವರಲ್ಲಿದ್ದ ಅಹಿಂಸಾ ಪ್ರವೃತ್ತಿಯ ಪ್ರತಿಪಾದನೆ ಎದ್ದು ಕಾಣುತ್ತದೆ.

ಬಸವಣ್ಣನವರು ಪ್ರಾಣಿ–ಪಕ್ಷಿಗಳ ಒಳ್ಳೆಯ ಗುಣವನ್ನು ಹೇಗೆ ವ್ಯಕ್ತಪಡಿಸುತ್ತಿದ್ದರೆಂದರೆ 'ಕಾಗೆ ಒಂದಗುಳ ಕಂಡರೆ ಕರೆಯದೆ ತನ್ನ ಬಳಗವನು? ಕೋಳಿಯೊಂದು ಗುಟುಕ ಕಂಡರೆ ಕೂಗಿ ಕರೆಯದೇ ತನ್ನ ಬಳಗವನು' ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದಡೆ ಕಾಗೆ, ಕೋಳಿಯಿಂದ ಕರಕಷ್ಟ ಕೂಡಲಸಂಗಮದೇವಾ' ಎಂಬ ವಚನದಲ್ಲಿ ಆ ಕೋಳಿ ಕಾಗೆಯಂತೆ ಒಬ್ಬರನೊಬ್ಬರು ಸಹಕರಿಸಬೇಕು, ಅನುಸರಿಸಬೇಕು. ಇಲ್ಲದಿದ್ದರೆ ಮಾನವ ಜನ್ಮ ವ್ಯರ್ಥವಾಗುತ್ತದೆಂದು ಹೇಳಿದ್ದಾರೆ. 'ಸಚರಾಚರ ಪ್ರಾಣಿಗಳಲ್ಲಿ ವಿರೋಧವಿಲ್ಲವಿರಬೇಕು' ಎಂದು ಆದಯ್ಯನೂ ಹೇಳಿದ್ದಾನೆ.

**ದಯದಿಂದ ಬಿಟ್ಟು ಧರ್ಮವಿಲ್ಲ, ವಿಚಾರದಿಂದ ಬಿಟ್ಟು ಧರ್ಮವಿಲ್ಲ, ವಿಚಾರದಿಂದ ಬಿಟ್ಟು ಸಹಾಯಿಗಳಿಲ್ಲ**
(ಸಕಲೇಶ ಮಾದರಸ)

ಅಹಿಂಸೆಯ ಮೂಲಕ ಜೀವದಯೆಯ ಸೂತ್ರ ಮನುಕುಲಕ್ಕೆ ನೀಡಿದ ಶ್ರೇಯಸ್ಸು ವಚನಕಾರರಿಗೆ ಸಲ್ಲುತ್ತದೆ. 'ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವುದೇ' ಧರ್ಮದ ಮೂಲಮಂತ್ರವಾಗಿದೆ. ಮಾನವ ಮಹಾನುಭಾವನಾಗಬೇಕು ನಂತರ ದೇವಮಾನವನಾಗಬೇಕಾದರೆ ಮೊದಲು ಪ್ರಾಣಿ ಪಕ್ಷಿಗಳನ್ನು ಆದರಿಸಬೇಕೆಂದು ವಚನಕಾರರು ಹೇಳಿರುವರು. ಈ ಬದುಕು ಕೇವಲ ಹುಟ್ಟುವುದಕ್ಕೆ ಸಾಯುವುದಕ್ಕೆ ಇಲ್ಲ. ಪರಮಾತ್ಮನ ಒಂದು ಅಂಶವಾದ ಜೀವಾತ್ಮ ಸಾಧನೆಯ ಮಾರ್ಗದಲ್ಲಿ ನಡೆದು ಪರಾತ್ಪರವಾದ ಪರಮಾತ್ಮನಲ್ಲಿ ಐಕ್ಯ ಸಾಧಿಸಬೇಕಾದರೆ ಪ್ರತಿಯೊಬ್ಬರಲ್ಲಿ ಮಾನವೀಯ ಮೌಲ್ಯ ಮತ್ತು ಅನುಕಂಪದ ಅಲೆಗಳು ಏಳುತ್ತಿರಬೇಕು ಎನ್ನುತ್ತಾರೆ. ಇಂದು 'ಹಂಚಿಕೊಂಡು ತಿನ್ನುವ ದಿನಗಳು ದೂರಾಗಿ ಹರಿದುಕೊಂಡು ತಿನ್ನುವ ದಿನಗಳು' ಹತ್ತಿರವಾಗಿರುವುದು ಶೋಚನೀಯ.

**ಅರಿದರಿದು ಸಮಗಾಣಿಸಬಾರದು ತ್ರಾಸಿನ ಕಟ್ಟಳೆಯಂತಿನಿಸು ವೆಗ್ಗಳವಾದಡೆ ಈಶ್ವರನು ಒಡೆಯಿಕ್ಕದೆ ಮಾಣುವನೆ? ಪಾತ್ರ ಅಪಾತ್ರವೆಂದು ಕಂಡಡೆ ಶಿವನೆಂತು ಮೆಚ್ಚುವನು? ಜೀವ ಜೀವಾತ್ಮ ಸರಿಯೆಂದು ಕಂಡಡೆ ಸಮವೇದಿಸದಿಪ್ಪನೇ ಶಿವನು? ತನ್ನ ಮನದಲ್ಲಿ 'ಯತ್ರ ಜೀವಃ ತತ್ರ ಶಿವ' ವೆಂದು ಸರ್ವಜೀವದಯಾಪಾರಿಯಾದಡೆ ಕೂಡಲಸಂಗಮದೇವನು ಕೈಲಾಸದಿಂದ ಬಂದು ಎತ್ತಿಕೊಳ್ಳದಿಪ್ಪನೆ?**

ಸಮಾಜದಲ್ಲಿ ತಾನೊಬ್ಬ ಆದರ್ಶ ಸಾಧಕನಾಗಬೇಕೆಂದರೆ ಮೊದಲು 'ತನ್ನಂತೆ ಇತರರು' ಎಂಬ ಭಾವನೆ ಹೊಂದಬೇಕು. ಇದು ಅಂತರಂಗ ಮತ್ತು ಬಹಿರಂಗದಲ್ಲಿ ಸಂಚಲನಗೊಂಡಿರಬೇಕು. ಈ ರೀತಿ ಸಮದರ್ಶಿಯಾಗಿ, ಸಮದೃಷ್ಟಿಯಾಗಿ ಬಾಳುವುದು ಕಷ್ಟವಾದರೂ ಪ್ರಯತ್ನಕ್ಕಿಂತ ಹೆಚ್ಚಿನದು ಯಾವುದೂ ಇಲ್ಲ. ಇಂತಹ ಮನೋಭಾವ ಹೊಂದಿದರೆ ಮೇಲು–ಕೀಳು, ಪಾತ್ರ–ಅಪಾತ್ರಗಳೆಂಬ ಭೇದಗಳು ಕಾಣಿಸಲಾರವು. ಈ ಸರ್ವಸಮಾನತೆಯಲ್ಲಿ ವ್ಯತ್ಯಾಸವಾದರೆ ಶಿವದೃಷ್ಟಿ ಅದನ್ನು ಸಮಗೊಳಿಸುತ್ತದೆ. ಈ ದೃಷ್ಟಿ ಬರುವುದಕ್ಕಾಗಿಯೇ ಸಾಧಕ ತನ್ನ ಮನದಲ್ಲಿ ಸರ್ವಜೀವದಯಾಪಾರಿಯಾಗಬೇಕು. ಎಲ್ಲಿ ಜೀವವಿದೆಯೋ ಅಲ್ಲೆಲ್ಲಾ ಶಿವನಿದ್ದಾನೆಂಬ ಭಾವನೆ ಬೆಳೆಸಿಕೊಂಡಾಗ ಪ್ರಾಣಲಿಂಗಾನುಸಂಧಾನವಾಗುತ್ತದೆ. ಸಕಲ ಜೀವರಾಶಿಗಳಲ್ಲಿ ಅನುಕಂಪದ ಅಲೆ ಎದ್ದರೆ ಆ ಅಂತಃಪ್ರಜ್ಞೆಯಲ್ಲಿ ಶಿವ ಇಳಿದು ಆತನನ್ನು ಉದ್ಧರಿಸುತ್ತಾನೆ.

ಎಲ್ಲಿ ಶಿವನ ಸ್ಮರಣೆ ಇರುತ್ತದೆಯೋ ಅಲ್ಲಿ ಸೌಂದರ್ಯವಿರುತ್ತದೆ. ಎಲ್ಲಿ ಸೌಂದರ್ಯವಿರುತ್ತದೆಯೋ ಅಲ್ಲಿ ಸತ್ಯವಿರುತ್ತದೆ. ಎಲ್ಲಿ ಸತ್ಯವಿರುತ್ತದೆಯೋ ಅಲ್ಲಿ ಸ್ವಚ್ಛತೆ, ಸಮಾನತೆ, ಸಂಪ್ರೀತಿ, ಸತ್ಕಾರ್ಯಗಳಿರುತ್ತವೆ.

**ದಯವಿಲ್ಲದ ಧರ್ಮವದೇವುದಯ್ಯಾ ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ ದಯವೇ ಧರ್ಮದ ಮೂಲವಯ್ಯಾ, ಕೂಡಲಸಂಗಮದೇವಯ್ಯ ನಂತಲ್ಲದೊಲ್ಲನಯ್ಯಾ**

ಕರುಣೆಗೆ ಇದು ಪ್ರಸಿದ್ಧವಾದ ವಚನವಾಗಿದೆ. ಧರ್ಮದ ಇನ್ನೊಂದು ಮುಖವೆ ದಯೆ. ಮನುಷ್ಯಧರ್ಮದ ಮೂಲಭೂತ ಧೋರಣೆ ಸಕಲಚರಾಚರ ವಸ್ತುಗಳನ್ನು ತೆರೆದ ಕಣ್ಣುಗಳಿಂದ ಗಮನಿಸುವುದು. ದಯೆಯುಳ್ಳ ಮನುಷ್ಯನಿಗೆ ಜಗತ್ತು ತಲೆಬಾಗುತ್ತದೆ. ಸತ್ಪಥ ತುಳಿಯುವಾಗ ಅಡ್ಡಿ ಆತಂಕ ಎದುರಾದರೆ ಒಳಗಿನ ದಯೆ–ತಾಳ್ಮೆಯನ್ನು ಕಳೆದುಕೊಳ್ಳದಿರುವುದು. ಅಂದರೆ ಧರ್ಮದಿಂದ ನಡೆವಾಗ ದಯೆಯೆಂಬುದು ಹತ್ತಿರದಲ್ಲಿರುತ್ತದೆ. ಇಂತಹ ದಯೆಯಿಲ್ಲದ ಮನುಷ್ಯ ಪಶುವಿಗಿಂತಲೂ ಕಡೆಮೆಯಾಗಿರುತ್ತಾನೆ. ಇಲ್ಲಿ ದಯೆ ಎನ್ನುವುದು ಪ್ರಾಣಿಗಳ ಮೇಲೆ ನಾವು ತೋರುವ ಅನುಕಂಪ ಅಥವಾ ಕರುಣೆ ಅಷ್ಟೇ ಅಲ್ಲ. ಇದನ್ನೂ ಮೀರಿದಂತೆ ಸುತ್ತಮುತ್ತಲಿನ ಪ್ರಕೃತಿಯಲ್ಲಿ ಶಿವಸ್ವರೂಪವನ್ನು ಕಲ್ಪಿಸಿಕೊಂಡರೆ ಆತ್ಮದರ್ಶನವಾಗುವುದು. ವಿಚಾರವಂತ ಮಾನವನು ಮಾತ್ರ ಪ್ರಪಂಚದ ಪ್ರತಿ ಜೀವಿಗಳಲ್ಲೂ ಪರಮಾತ್ಮನ ಸ್ವರೂಪನ್ನು ಕಾಣಬಹುದು. ಬಸವಣ್ಣನವರು:

**ಮರಗಿಡ ಬಳ್ಳಿ ಧಾನ್ಯಂಗಳ ಬೆಳಸೆಲ್ಲವ ತರಿತರಿದು ಪ್ರಾಣವ ಕೊಂದುಂಡು ಶರೀರ ಹೊರೆವ ದೋಷಕ್ಕೆ ಇನ್ನಾವುದು ವಿಧಿಯಯ್ಯಾ?**

ಎಂದಿದ್ದಾರೆ. ಜೀವ ಚೈತನ್ಯವಾದ ಪ್ರಕೃತಿಯಲ್ಲಿನ ಪ್ರತಿ ಸಸ್ಯಗಳಿಗೂ ಜೀವವಿದೆಯಾದ್ದರಿಂದ ಸಸ್ಯಾಹಾರ ಸೇವನೆ ಮಾಡುವದು ಹಿಂಸೆಯೆನ್ನುವ ಭಾವ ಅವರದು. ಹಾಗಾಗಿ ಸ್ವೀಕರಿಸುವ ಆಹಾರವನ್ನು ನಿತ್ಯ ಲಿಂಗಕ್ಕರ್ಪಿಸಿ ಪ್ರಸಾದವ ಕೊಂಡು ನಿರ್ದೋಷಿಗಳಾಗಿ ಬದುಕಬೇಕೆಂಬುದು ಅವರ ಚಿಂತನೆ. ಒಟ್ಟಾರೆ ಬಸವಣ್ಣನವರ ವಚನಗಳಲ್ಲಿರುವ ದಯೆ, ಅಹಿಂಸೆ, ಅನುಕಂಪದ ಅಲೆಗಳ ಮಿಡಿತ, ಎಲ್ಲರ ಹೃದಯಗಳಲ್ಲಿಯೂ ಚೈತನ್ಯದ ದಿವ್ಯಧ್ವನಿಯಾಗಿ ಮಿಡಿಯುವಂತೆ ಮಾಡುತ್ತದೆ.

■■

# ಬಿಜ್ಜಳನ ಸಂಹಾರ : ಮೊಲ್ಲೆಬೊಮ್ಮಯ್ಯ

● ಡಾ. ವೀರಣ್ಣ ದಂಡೆ

ಕಲ್ಲೂರ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಒಂದು ಪುರಾತನ ಹಳ್ಳಿ. ತಾಲೂಕು ಕೇಂದ್ರದಿಂದ ಕೇವಲ ಆರು ಕಿ. ಮೀ.. ಜಿಲ್ಲಾ ಕೇಂದ್ರದಿಂದ ಸುಮಾರು ೨೦ ಕಿ. ಮೀ. ದೂರದಲ್ಲಿದೆ. ಈ ಗ್ರಾಮದ ಜನಸಂಖ್ಯೆ ಸು. ೭೦೦೦. ಒಂದು ವಿಶೇಷವೆಂದರೆ ಪ್ರತಿಶತ ೫೦ ರಷ್ಟು ಜಂಗಮ ಮನೆಗಳೇ ಇರುವವು. ಈ ಗ್ರಾಮದಲ್ಲಿ ಕಲ್ಲೇಶ್ವರ ಹೆಸರಿನ ಒಂದು ಪುರಾತನ ದೇವಾಲಯವಿದ್ದು, ಬಾದಾಮಿ ಚಾಲುಕ್ಯರಿಂದ ಪ್ರಾರಂಭಿಸಿ (ಕ್ರಿ. ಶ. ೮-೯), ಕಲ್ಯಾಣ ಚಾಲುಕ್ಯರು ಹಾಗೂ ವಿಜಯನಗರ ಕೃಷ್ಣದೇವರಾಯನ ಕಾಲದವರೆಗೂ ಈ ದೇವಾಲಯದ ಕಟ್ಟಡ ಬೆಳೆಯುತ್ತ ಬಂದಿದೆ. ದ್ವಾರಬಾಗಿಲದ ಗೋಪುರ ಕೃಷ್ಣದೇವರಾಯನ ಕಾಲದ್ದಾಗಿದೆ. ಕಲ್ಯಾಣ ಚಾಲುಕ್ಯರ ಕಾಲಕ್ಕೆ ನವರಂಗ ಹಾಗೂ ನಂದಿಸಭಾಮಂಟಪಗಳಾಗಿರುವಂತಿವೆ. ಅಪರೂಪಕ್ಕೆ ಕಲ್ಯಾಣಚಾಲುಕ್ಯರ ವಾಸ್ತುಶಿಲ್ಪ ಸಂಕೇತವಾಗಿರುವ ಗಜಲಕ್ಷ್ಮಿಯ ಒಂದು ಕರಿಕಲ್ಲಿನ ಶಿಲಾಫಲಕ, ಸುಮಾರು ನಾಲ್ಕೈದು ಅಡಿ ಉದ್ದದ, ಸುಮಾರು ಎರಡು-ಎರಡುವರಿ ಅಡಿ ಎತ್ತರದ ಫಲಕವೊಂದು ದೇವಾಲಯದ ಪೌಳಿಯ ಹೊರಗೆ ಕಟ್ಟೆಗೆ ಆನಿಸಿ ಇಡಲಾಗಿದೆ.

ನಾವು ನೋಡಿದ ಮೂರನೆಯ ಗಜಲಕ್ಷ್ಮಿಯ ದೊಡ್ಡ ಫಲಕವಿದು. ಇನ್ನೊಂದು ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ ಗೊಟಗೋಡಿ ಗ್ರಾಮದ ಬಸವೇಶ್ವರ ಹೊಸದೇವಾಲಯದ ಮುಂದಿದೆ. ಮತ್ತೊಂದು ಆಂಧ್ರಪ್ರದೇಶದ ಕೊಲ್ಲಿಪಾಕಿ ಸೋಮನಾಥ ದೇವಾಲಯದ ಪ್ರವೇಶಭಾಗದಲ್ಲಿರುವ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿದೆ. ಆದರೆ ಈ ಮೂರೂ ಫಲಕಗಳಲ್ಲಿ ಅತ್ಯಂತ ಕಲಾತ್ಮಕವಾಗಿ ನಿರ್ಮಾಣವಾದ ಫಲಕವೆಂದರೆ ಕಲ್ಲೂರಿನ ಕಲ್ಲೇಶ್ವರ ದೇವಾಲಯದ ಮುಂದಿರುವ ಗಜಲಕ್ಷ್ಮಿ ಫಲಕವಾಗಿದೆ. ಈ ದೃಷ್ಟಿಯಿಂದ ಇದು ಮಹತ್ವ ಪಡೆಯುತ್ತದೆ.

ಈ ಶಿಲಾಫಲಕದ ಬಗೆಗೆ ಒಂದು ವಿಚಿತ್ರ ನಂಬುಗೆಯೂ ಈ ಗ್ರಾಮದಲ್ಲಿ ಬೆಳೆದುಬಂದಿದೆ. ಕಲ್ಲೂರಿನಲ್ಲಿ ಯಾರ ಮನೆಯಲ್ಲಾದರೂ ಹೆರಿಗೆ ಆಗುತ್ತಿರುವ ಹೆಣ್ಣುಮಕ್ಕಳಿಗೆ ತೊಂದರೆಯಾದರೆ, ಈ ಗಜಲಕ್ಷ್ಮೀ ಫಲಕಕ್ಕೆ ಪೂಜೆ ಸಲ್ಲಿಸಿ, ಫಲಕವನ್ನು ಡಬ್ಬುಹಾಕುತ್ತಾರೆ. ಇದರಿಂದ ಹೆರಿಗೆ ಸರಾಗವಾಗಿ ಆಗುತ್ತದೆಂಬ ನಂಬುಗೆ ಇದೆ. ಹೀಗಾಗಿ ಈ ಫಲಕದ ಮೇಲೆ ಎಣ್ಣೆ ಸುರಿಯುತ್ತ ಬಂದಿದ್ದು, ಮಧ್ಯದ ಲಕ್ಷ್ಮೀ ಶಿಲ್ಪ ಕೆಡುತ್ತ ಬರುತ್ತಿದೆ.

ಈ ಗ್ರಾಮದ ಇನ್ನೊಂದು ವಿಶೇಷತೆ ಎಂದರೆ, ಬಿಜ್ಜಳನ ಕೊಲೆ ಮಾಡಿದ ಮೊಲ್ಲೆಬೊಮ್ಮಯ್ಯ, ಸಮೀಪದ ರ್‍ಯಾವಣಕಿ ಗ್ರಾಮದವನಾಗಿದ್ದರೂ ಅವನು ಕಲ್ಲೂರಿನ ಕಲ್ಲೇಶ್ವರನ ಭಕ್ತನಾಗಿದ್ದನು. ಮೊಲ್ಲೆಬೊಮ್ಮಯ್ಯನ ಗ್ರಾಮವಾದ ರ್‍ಯಾವಣಕಿಯಲ್ಲೂ ಒಂದು ಕಲ್ಲೇಶ್ವರನ ದೇವಾಲಯವಿದೆ. ಆ ದೇವಾಲಯದ ಹಿಂದೆಯೇ ಮೊಲ್ಲೆಬೊಮ್ಮಯ್ಯನ ಸಮಾಧಿಯೂ ಇದೆ. ಹೀಗಾಗಿ ಆತ ಮೂಲತಃ ರ್‍ಯಾವಣಕಿ ಕಲ್ಲೇಶ್ವರನ ಭಕ್ತನಾಗಿರಬೇಕು. ಆದರೆ ಕಲ್ಲೂರಿನ ಕಲ್ಲೇಶ್ವರನ ದೇವಾಲಯದಲ್ಲಿರುವ ಎರಡು ಶಾಸನಗಳು ಮೊಲ್ಲೆಬೊಮ್ಮಯ್ಯನನ್ನು ಉಲ್ಲೇಖಿಸುತ್ತವೆ. ಜೊತೆಗೆ ಮೊಲ್ಲೆಬೊಮ್ಮಯ್ಯನ ಹೆಸರಿಗೆ ಕಲ್ಲೇಶ್ವರ ದೇವಸ್ಥಾನದಲ್ಲಿ ಒಂದು ಶಿವಲಿಂಗವಿದ್ದು, ಅದು ದಿನವೂ ಪೂಜೆಗೊಳ್ಳುತ್ತಿದೆ.

'ಮೊಲ್ಲೆಬೊಮ್ಮಯ್ಯಗಳ ಕಾವ್ಯ' (ಕ್ರಿ. ಶ. ೧೭೦೦) ಹೇಳುವಂತೆ ಮಕ್ಕಳಿಲ್ಲದ ಬೊಮ್ಮೇಗೌಡ ಹಾಗೂ ಕಲ್ಲಮ್ಮ ದಂಪತಿಗಳು ಮಕ್ಕಳಿಗಾಗಿ ಹರಕೆ ಹೊರುವುದು ಕಲ್ಲೂರಿನ ಕಲ್ಲೇಶ್ವರನಿಗೆ. ಗಂಡುಮಗುವಾದರೆ ಅವನಿಗೆ ಕಲ್ಲೇಶ್ವರನ ಹೆಸರಿಡುವುದಾಗಿ ತಾಯಿ ಹರಕೆ ಹೊರುತ್ತಾಳೆ. ಆದರೆ ಗಂಡುಮಗು ಜನಿಸಿದ ನಂತರ ಮನೆಯ ದೇವರಾದ ಬ್ರಹ್ಮೇಶ್ವರನ ನೆನೆದು ಬೊಮ್ಮಣ್ಣ ಎಂದು ಹೆಸರಿಡುತ್ತಾರೆ. ಮುಂದೆ ಈ ಕಾವ್ಯ ಚಿತ್ರಿಸುವಂತೆ ಸ್ವತಃ ಕಲ್ಲೇಶ್ವರನು

ವಿಶ್ರಾಂತ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ-೫೮೫೧೦೬ ಮೊ : ೯೪೪೮೭೭೮೯೧

ಬೊಮ್ಮಯ್ಯ ಇನ್ನೂ ತಾಯಿಯ ಮಡಿಲಲ್ಲಿ ಕೂಸಿರುವಾಗಲೇ ಅವನನ್ನು ಎತ್ತಿಕೊಂಡು ಹೋಗುತ್ತಿದ್ದ ಎಂದು, ತಂದೆ ಕೂಸನ್ನು ಹುಡುಕುತ್ತ ಹೋಗಿ ಕಲ್ಲೂರಿನ ಕಲ್ಲೇಶ್ವರ ದೇವಾಲಯದಲ್ಲಿ ಇರುವುದನ್ನು ಕಂಡು ತೆಗೆದುಕೊಂಡು ಬರುತ್ತಿದ್ದ ಎಂದು ವಿವರಿಸುತ್ತದೆ. ಬೊಮ್ಮಯ್ಯ ಏಳೆಂಟು ವರ್ಷದ ಬಾಲಕನಾದಾಗ, ಕಲ್ಲೇಶ್ವರ(ಶಿವ) ಮತ್ತು ಬೊಮ್ಮೇಗೌಡ ಇವರ ನಡುವೆ ವ್ಯಾಜ್ಯ ಬೆಳೆದು, ಕೊನೆಗೆ ಹುಡುಗನನ್ನು ಕಲ್ಲೇಶ್ವರನಿಗೆ ಒಪ್ಪಿಸಬೇಕೆಂಬ ನಿರ್ಣಯವಾಗುತ್ತದೆ. ಈ ಘಟನೆಯಿಂದ ಮೊಲ್ಲೆಬೊಮ್ಮಯ್ಯ ಧಾರ್ಮಿಕ ದೃಷ್ಟಿವುಳ್ಳ ಬಾಲಕನಾಗಿ ಬೆಳೆದು, ಕಲ್ಲೂರಿನ ಕಲ್ಲೇಶ್ವರನ ದೇವಾಲಯದಲ್ಲಿಯೇ ಅವನನ್ನು ಪೂಜೆ ಮಾಡುತ್ತ ಇದ್ದಿರಬೇಕೆನಿಸುತ್ತದೆ. ಏಕೆಂದರೆ ಈ ಕಲ್ಲೇಶ್ವರ ದೇವಸ್ಥಾನವು ಕಾಳಾಮುಖ ಶೈವಧರ್ಮದ ಶ್ರೇಷ್ಠ ಆಚಾರ್ಯರ ನೆಲೆಯಾಗಿರುವಂತೆ ಇಲ್ಲಿಯ ಶಾಸನಗಳು ಹೇಳುತ್ತವೆ. ಹೀಗಾಗಿ ಬಹುಶಃ ಶಿಕ್ಷಣಾರ್ಥಿಯಾಗಿ ಬಾಲ್ಯದಲ್ಲಿ ಈ ಕಲ್ಲೂರಿನ ಕಲ್ಲೇಶ್ವರ ದೇವಸ್ಥಾನಕ್ಕೆ ಬಂದವನು, ಇಲ್ಲಿಯೇ ಕಲ್ಲೇಶ್ವರನ ಭಕ್ತನಾಗಿ ಉಳಿದಂತೆ ತೋರುತ್ತದೆ. ಈ ಗ್ರಾಮದ ಎರಡು ಶಾಸನಗಳು ಮೊಲ್ಲೆಬೊಮ್ಮಯ್ಯನನ್ನು 'ಶ್ರೀಸ್ವಯಂಭು ಕಲಿದೇವಸ್ವಾಮಿಯ ಪಾದಾರಾಧಕಂ' ಎಂದು ವರ್ಣಿಸುತ್ತವೆ.

**ಕ್ರಿ. ಶ. ೧೧೫೪ ಶಾಸನ :**

೩೫. ಶ್ರೀ ಸ್ವಸ್ತಿಶ್ರೀಮತು ಚಾಳುಕ್ಯ ಚಕ್ರವರ್ತಿ ತ್ರೈಲೋಕ್ಯಮಲ್ಲದೇವ ವರ್ಷದ ೪ನೆಯ ಶ್ರೀಮುಖ ಸಂವತ್ಸರದ ಮಾಘಮಾಸದಮಾವಾಸ್ಯೆ

೩೬.ಸೋಮವಾರದಂದು ಶ್ರೀ ಮನುಮಹಾಮಂಡಲೇಶ್ವರಂ ಚಾವುಂಡರಸ ದೇವನರ್ದ್ಧಾಂಗಿ ಮಹಾದೇವಿಯರು ಕಲ್ಲೂರುನಾಳುತ್ತ ಶ್ರೀಸ್ವಯಂಭು ಕ

೩೭. ಲಿದೇವಸ್ವಾಮಿಯ ಪಾದಾರಾಧಕಂ ಮೊಲ್ಲೆಯ ಬೊಮ್ಮಯ್ಯಂಗೆ ದೇಹಾತವ್ರಿತ್ತಿ ಯಾಗಿ ಕೊಟ್ಟ ಸರ್ವ್ವಮಾನ್ಯ ಬಳಾರಿಯ ಕೆಯ ಸೀಮೆಯಿಂ ಪತ್ತಿದ

೩೮. ಬಡಗಲು ಮತ್ತರಾರು ॥ ಕಲಿದೇವಸ್ವಾಮಿಯ [ಬಿಟ್ಟ] ಲೆಕ್ಕದಲೊಂದು ಮನೆಯಾಚಂದ್ರಾರ್ಕ್ಕಸ್ಥಾಯಿಯಾಗಿ ಭೂಮಿಪಾಳಕರು ಪ್ರತಿಪಾಳಿಸುವರು.

**ಕ್ರಿ. ಶ. ೧೧೮೬ರ ಶಾಸನ :**

೧. ಸ್ವಸ್ತಿಶ್ರೀಮಚ್ಚಾಳುಕ್ಯ ಚಕ್ರವರ್ತಿ ಸೋಮೇಶ್ವರದೇವ ವರ್ಷದ ೨ನೆಯ ವಿಶ್ವಾವಸು ಸಂವತ್ಸರದ ಕಾರ್ತ್ತಿಕದ ಪುಣ್ಣಿಮಿ ಸೋಮವಾರದಂದು ಶ್ರೀ

೨. ಮನ್ಮಹಾಮಂಡಲೇಶ್ವರಂ ಚಾಉಂಡರಸದೇವನ ಕುಮಾರಂ ವೀರಬಿಜ್ಜಲ ದೇವರಸರು ಕಲ್ಲೂರ 'ಶ್ರೀಸ್ವಯಂಭು ಕಲಿದೇವಸ್ವಾಮಿಯ ಪಾ

೩. ದಾರಾಧಕಂ' ಮೊಲ್ಲೆಯಬೊಮ್ಮಯ್ಯಂಗೆ ಪಮಥವ್ರಿತ್ತಿಯಾಗಿ ಗಣಮತಕ್ಕೆ ಕೊಟ್ಟ ಭೂಮಿ ಹಿರಿಯ ಹಳ್ಳದಿಂ ಮೂಡಲು ಕೊಪ್ಪ

೪. ಲ ಹಳ್ಳದಿಂದುತ್ತರ ಭಾಗದ ಸ್ಥಳದಲ್ಲಿ ಮತ್ತರಿನ್ನೂಱು ೨೦೦ ಯಾಚಂದ್ರಾರ್ಕ್ಕ ತಾರಂಬರಂ ಭೂಮಿಪಾಳಕರು ಪ್ರತಿಪಾ

೫. ಳಿಸುವರು

ಈ ಎರಡೂ ಶಾಸನಗಳು ಮೊಲ್ಲೆಬೊಮ್ಮಯ್ಯನನ್ನು 'ಶ್ರೀಸ್ವಯಂಭು ಕಲಿದೇವ ಸ್ವಾಮಿಯ ಪಾದಾರಾಧಕಂ' ಎಂದು ಕರೆದಿವೆ.

ಮೊದಲು ಮಹಾಮಂಡಲೇಶ್ವರನಾದ ಚಾವುಂಡರಸನ ಪತ್ನಿ ಮಹಾದೇವಿಯು ಕಲ್ಲೂರನ್ನು ಆಳುತ್ತಿದ್ದು, ಆಕೆ ದಾನ ಕೊಟ್ಟಿದ್ದಾಳೆ. ಎರಡನೇ ಶಾಸನದಲ್ಲಿ ಚಾವುಂಡರಸನ ಮಗ ವೀರಬಿಜ್ಜಲ ದಾನ ಕೊಟ್ಟಿದ್ದಾನೆ. ಬಹುಶಃ ಈಗ ಈತನೇ ಕಲ್ಲೂರ ಪ್ರದೇಶದ ಅಧಿಪತಿಯಾಗಿರುವಂತಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಇಬ್ಬರೂ ದಾನ ಕೊಟ್ಟುದು ಶ್ರೀಸ್ವಯಂಭುಕಲಿದೇವಸ್ವಾಮಿಯ ಪಾದಾರಾಧಕನಾದ ಮೊಲ್ಲೆಬೊಮ್ಮಯ್ಯನಿಗೆ.

ಮೊದಲನೇ ಶಾಸನ ಕ್ರಿ. ಶ. ೧೧೫೪ ನೇ ವರ್ಷಕ್ಕೆ ಸಂಬಂಧಿಸಿದ್ದು, ಎರಡನೆಯದು ಕ್ರಿ. ಶ. ೧೧೮೬ಕ್ಕೆ ಸಂಬಂಧಿಸಿದೆ. ಎರಡೂ ಶಾಸನಗಳ ಅಂತರ ೩೨ ವರ್ಷಗಳಷ್ಟು ದೀರ್ಘಕಾಲವಾಗಿದೆ. ಕಲ್ಯಾಣ ಕ್ರಾಂತಿಯ ಅವಧಿ ಕ್ರಿ. ಶ. ೧೧೬೭-೬೮ ಎಂದು ಹಿಡಿದರೆ, ಮೊದಲನೇ ಶಾಸನ ಕ್ರಾಂತಿಗಿಂತ ೧೩-೧೪ ವರ್ಷ ಮೊದಲಿನದೆಂದೂ ಎರಡನೇ ಶಾಸನ ಕ್ರಾಂತಿಯ ನಂತರ ೧೮ ವರ್ಷಗಳದ್ದೆಂದೂ ಸಹಜವಾಗಿ ಕಂಡುಬರುತ್ತದೆ.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಮೊಲ್ಲೆಬೊಮ್ಮಯ್ಯನವರು ಕಲ್ಯಾಣಕ್ಕೆ ಹೋಗುವ ಪೂರ್ವದಲ್ಲಿಯೇ ಕಲ್ಲೇಶ್ವರನ 'ಪಾದಾರಾಧಕ'ರಾಗಿದ್ದರು, ಕಲ್ಯಾಣದಿಂದ ಹಿಂತಿರುಗಿದ ನಂತರ ಸುಮಾರು ೧೮ ವರ್ಷಗಳವರೆಗೂ (ಕ್ರಿ. ಶ. ೧೧೬೮-ಕ್ರಿ. ಶ. ೧೧೮೬)

ಕಲ್ಲೇಶ್ವರನ ಪಾದಾರಾಧಕರಾಗಿದ್ದರು. ಅಂದರೆ ಬಿಜ್ಜಳನ ಕೊಲೆಯ ನಂತರ ಮೊಲ್ಲೆಬೊಮ್ಮಯ್ಯನವರು ಹಿಂತಿರುಗಿ ಬಂದು ಮೊದಲಿನಂತೆ ಉಳಿದುಕೊಂಡುದು ಕಲ್ಲೂರಿನ ಕಲ್ಲೇಶ್ವರ ದೇವಾಲಯದಲ್ಲಿಯೇ ಎಂಬವು ಮುಖ್ಯಸಂಗತಿಗಳಾಗಿವೆ.

ಈ ಎರಡೂ ಶಾಸನಗಳು ಬಿಜ್ಜಳನ ಕೊಲೆಯಲ್ಲಿ ಪ್ರಮುಖ ಪಾತ್ರವಹಿಸಿದ ಜಗದೇವಪ್ಪನ ಹೆಸರನ್ನು ಎಲ್ಲೂ ಉಲ್ಲೇಖಿಸಿಲ್ಲ. ಅಂದರೆ ಬಿಜ್ಜಳನ ಕೊಲೆಯ ನಂತರ ಜಗದೇವಪ್ಪ ಮೊಲ್ಲೆಬೊಮ್ಮಯ್ಯನೊಂದಿಗೆ ಕಲ್ಲೂರಿಗೆ ಬಂದಿಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಜೊತೆಗೆ ಜಗದೇವಪ್ಪನ ಸ್ವಂತಗ್ರಾಮವಾದ ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಆಲಮೇಲ ಹತ್ತಿರದ ಬಬಲೇಶ್ವರದಲ್ಲೂ ಜಗದೇವಪ್ಪನ ಸಮಾಧಿಯಾಗಲಿ, ಆತ ಕಲ್ಯಾಣದಿಂದ ಹಿಂತಿರುಗಿ ಬಂದನೆಂಬ ಕನಿಷ್ಠ ಮೌಖಿಕ ಮಾಹಿತಿಯಾಗಲಿ ಉಳಿದುಬಂದಿಲ್ಲ. ಹೀಗಾಗಿ ಪಾಲ್ಕುರಿಕೆ ಸೋಮನಾಥನು ತನ್ನ ತೆಲಗು ಬಸವ ಪುರಾಣದಲ್ಲಿ ಹೇಳಿರುವಂತೆ, ಜಗದೇವಪ್ಪನು ಬಿಜ್ಜಳನ ಹತ್ಯೆ ಮಾಡಿ ಮನೆಗೆ ಬಂದು, ತಾಯಿಯ ಮುಂದೆ ಪ್ರಾಣಾರ್ಪಣೆ ಮಾಡಿಕೊಂಡನೆಂಬ ಸಂಗತಿ ಹಾಗೇ ಉಳಿದುಕೊಳ್ಳುತ್ತದೆ. ಜಗದೇವಪ್ಪನ ಕುಟುಂಬದವರನ್ನು ಬಿಜ್ಜಳನ ಸೈನಿಕರು ಹತ್ಯೆಗೈದರೆಂದು ನಂಬಬಹುದಾಗಿದೆ. ಹೀಗಾಗಿ ಕಲ್ಯಾಣಕ್ಕೆ ಹೋದ ಜಗದೇವಪ್ಪನ ಕುಟುಂಬದ ಸಂಗತಿಗಳು ಅವರ ಸ್ವಗ್ರಾಮವಾದ ಬಬಲೇಶ್ವರದಲ್ಲಾಗಲಿ, ಮೊಲ್ಲೆಬೊಮ್ಮಯ್ಯನಿಗೆ ಸಂಬಂಧಿಸಿದ ರ್‍ಯಾವಣಕಿ ಹಾಗೂ ಕಲ್ಲೂರಿನಲ್ಲಾಗಲಿ ಇಲ್ಲದಿರುವುದು ಸಹಜವೆನಿಸುತ್ತದೆ.

ಆದರೆ ಕಲ್ಲೂರಿನ ಕಲ್ಲೇಶ್ವರ ದೇವಸ್ಥಾನದ ನವರಂಗದ ದ್ವಾರದ ಬಲದಲ್ಲಿ ಜಗದೇವಪ್ಪನ ಹಾಗೂ ಎಡದಲ್ಲಿ ಮೊಲ್ಲೆಬೊಮ್ಮಯ್ಯ ಇವರ ಹೆಸರಿನ ಶಿವಲಿಂಗಗಳಿದ್ದು, ಅವು ಇವತ್ತಿಗೂ ಪೂಜೆಗೊಳ್ಳುತ್ತಿವೆ. ಮೊಲ್ಲೆಬೊಮ್ಮಯ್ಯ ಈ ದೇವಾಲಯದಲ್ಲಿ ದೀರ್ಘಕಾಲದವರೆಗೆ ಸೇವೆ ಸಲ್ಲಿಸಿದವನು. ಜಗದೇವಪ್ಪನ ಜೊತೆಗೂಡಿ ಶರಣರಿಗೆ ಹಿಂಸೆ ಕೊಟ್ಟ ಬಿಜ್ಜಳನ ಹತ್ಯೆಗೈದುದರಿಂದ ಮೊಲ್ಲೆಬೊಮ್ಮಯ್ಯನ ಜೊತೆಗೆ ಜಗದೇವಪ್ಪನ ಸ್ಮರಣೆಗಾಗಿ ಈ ಶಿವಲಿಂಗಗಳ ಸ್ಥಾಪನೆಯಾಗಿರುವ ಸಾಧ್ಯತೆ ಇದೆ. ಜಗದೇವಪ್ಪನ ಸ್ಮರಣೆಗಾಗಿ ಮೊಲ್ಲೆಬೊಮ್ಮಯ್ಯನೇ ಒಂದು ಶಿವಲಿಂಗವನ್ನು ಸ್ಥಾಪಿಸಿರಲೂ ಬಹುದು. ಮೊಲ್ಲೆಬೊಮ್ಮಯ್ಯನವರು ಲಿಂಗೈಕ್ಯರಾದ ನಂತರ ಅವರ ಸ್ಮರಣೆಗಾಗಿ ಭಕ್ತರು ಕಲ್ಲೇಶ್ವರನ ದೇವಾಲಯದಲ್ಲಿ ಜಗದೇವಪ್ಪನ ಶಿವಲಿಂಗದ ಎದುರಿನಲ್ಲಿ ಇನ್ನೊಂದು ಶಿವಲಿಂಗವನ್ನು ಸ್ಥಾಪಿಸಿರಬೇಕು. ಮೊಲ್ಲೆಬೊಮ್ಮಯ್ಯನ ಶವಸಂಸ್ಕಾರ ಅವರ ಸ್ವಂತಗ್ರಾಮವಾದ ರ್‍ಯಾವಣಕಿಯಲ್ಲಿ ಆದಂತಿದೆ. ಅಲ್ಲಿಯ ಕಲ್ಲೇಶ್ವರ ದೇವಾಲಯದ ಹಿಂಬದಿಯಲ್ಲಿ ಅವರ ಸಮಾಧಿಯನ್ನು ಸ್ಥಳೀಯರು ತೋರಿಸುತ್ತಾರೆ.

ಕಲ್ಲೇಶ್ವರ ದೇವಸ್ಥಾನವು ಮೊದಲಿನಿಂದಲೂ ಕಾಳಾಮುಖ ಶೈವಪರಂಪರೆಯ ಕೇಂದ್ರವಾಗಿದ್ದಂತೆ ಕಂಡುಬರುತ್ತದೆ. ಕ್ರಿ. ಶ. ೧೧೯೮ರ ಶಾಸನದಲ್ಲಿಯೇ ಈ ಬಗೆಗೆ ಸೂಚನೆಗಳು ದೊರೆಯುತ್ತವೆ. ಆಗಲೇ ಶಿವಶಕ್ತಿಪಂಡಿತ ಎಂಬ ಕಾಳಾಮುಖಯತಿ ಈ ದೇವಸ್ಥಾನದಲ್ಲಿ ಇದ್ದರು. ನಂತರ ರುದ್ರಶಕ್ತಿಪಂಡಿತ (ಕ್ರಿ. ಶ. ೧೧೨೫), ಕ್ರಿ. ಶ. ೧೧೩೭ರ ಇನ್ನೊಂದು ಶಾಸನದಲ್ಲಿ ಕಾಳಾಮುಖಯತಿ ಇದ್ದನೆಂದು ಹೆಸರು ಹೇಳುವಲ್ಲಿ ಶಾಸನದ ಅಕ್ಷರಗಳು ನಾಶವಾಗಿವೆ. ಸೋಮೇಶ್ವರ ಪಂಡಿತನನ್ನು (ಕ್ರಿ. ಶ. ೧೧೮೫) ಎರಡು ಶಾಸನಗಳು ಉಲ್ಲೇಖಿಸಿದ್ದು, ಒಂದರ ಕಾಲ ತಿಳಿಯುತ್ತಿಲ್ಲ. ಈ ಭಾಗದ ಆಡಳಿತಗಾರರು ಆಗಾಗ ಕಲ್ಲೇಶ್ವರ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಮತ್ತು ಅಲ್ಲಿರುವ ಕಾಳಾಮುಖ ಯತಿಗಳ ತಪೋಧನರಾಹಾರದಾನಕ್ಕೆಂದು ದತ್ತಿಗಳನ್ನು ಬಿಡುತ್ತ ಬಂದಿದ್ದಾರೆ. ಇದನ್ನು ಗಮನಿಸಿದರೆ ಮೊಲ್ಲೆಬೊಮ್ಮಯ್ಯನು ಕಾಳಾಮುಖ ಶೈವಪಂಥದ ಅನುಯಾಯಿಯಾಗಿದ್ದು, ಈ ದೇವಾಲಯದಲ್ಲಿರುವ ಯತಿಗಳ ಜೊತೆಗೆ ಧರ್ಮಪಾಲನೆಯ ಕೆಲಸದಲ್ಲಿ ನಿರತನಾಗಿದ್ದಂತೆ ಇದೆ. ಹೀಗಾಗಿಯೇ ಆತ ಇನ್ನೂ ಚಿಕ್ಕವಯಸ್ಸಿನಲ್ಲಿಯೇ ಧಾರ್ಮಿಕ ಶಿಕ್ಷಣವನ್ನು ಪಡೆಯಲು ಕಲ್ಲೂರ ಕಲ್ಲಿನಾಥ ದೇವಾಲಯದಲ್ಲಿ ಉಳಿದಿದ್ದಂತೆ ತೋರುತ್ತದೆ. ಈ ಹಿನ್ನಲೆಯಲ್ಲಿಯೇ ಅವನಿಗೆ ಸಂದ ಎರಡೂ ಶಾಸನಗಳನ್ನು ಅರ್ಥೈಸಿಕೊಳ್ಳಬೇಕು.

ಯಾವ ಉದ್ದೇಶಕ್ಕಾಗಿ ಮೊಲ್ಲೆಬೊಮ್ಮಯ್ಯನಿಗೆ ದಾನಗಳನ್ನು ಕೊಡಲಾಯಿತು? ಎಂಬುದಕ್ಕೆ ಎರಡೂ ಶಾಸನಗಳಲ್ಲಿ ಒಂದೊಂದು ವಿಶೇಷ ಪದಗಳು ಬಳಕೆಯಾಗಿವೆ. ಒಂದನೇ ಶಾಸನದಲ್ಲಿ ಚಾವುಂಡರಾಯನ ಹೆಂಡತಿಯು ಆರು ಮತ್ತರು ಭೂಮಿಯನ್ನು 'ಬೊಮ್ಮಯ್ಯಂಗೆ

ದೇಹಾತವ್ರಿತ್ತಿಯಾಗಿ' ದಾನ ಕೊಡುತ್ತಾಳೆ. 'ದೇಹಾತವೃತ್ತಿ' ಎಂಬ ಪದ ವಿಶೇಷವಾಗಿದೆ. ವೃತ್ತಿ ಎಂದರೆ ಭೂಮಿ. ಆಕೆ ದಾನವಾಗಿ ಕೊಟ್ಟಿದ್ದು ಆರು ಮತ್ತರು ಭೂಮಿಯನ್ನು. ಯಾವುದಕ್ಕಾಗಿ ಎಂದರೆ 'ದೇಹಾತವೃತ್ತಿ'ಗಾಗಿ ಅಂದರೆ ಮೊಲ್ಲೆಬೊಮ್ಮಯ್ಯನು ಜೀವನಪರ್ಯಂತವಾಗಿ ತನ್ನ ಉಪಜೀವನಕ್ಕಾಗಿ ಆ ಭೂಮಿಯನ್ನು ಬಳಸಿಕೊಳ್ಳಲು ದಾನ ಮಾಡಿದ್ದಾಳೆ.

ಮೊಲ್ಲೆಬೊಮ್ಮಯ್ಯನು ಎಂತಹ ಜೀವನ ಸಾಗಿಸುತ್ತಿದ್ದನು ಎಂಬುದು ಇದರಿಂದ ತಿಳಿದುಬರುತ್ತದೆ. ಆತ ಕಲ್ಲಯ್ಯನ ಭಕ್ತನಾಗಿ ಸೇವೆ ಮಾಡುತ್ತಿದ್ದಾನೆ. ಆತನು ಸಲ್ಲಿಸುತ್ತಿರುವ ಸೇವೆಗಾಗಿ ಅವನ ಜೀವನೋಪಭೋಗಕ್ಕಾಗಿ ರಾಣಿ ಈ ಭೂಮಿಯನ್ನು, ಒಂದು ಮನೆಯನ್ನು ಕೊಟ್ಟು ಅವನ ಸೇವೆ ನಿರಂತರವಾಗಿ ಮುಂದುವರೆಯಲು ಸಹಾಯ ಮಾಡಿದ್ದಾಳೆ. ಈ ಅವಧಿಯಲ್ಲಿ ಅವನು ಕೇವಲ ಭಕ್ತನಾಗಿರುವುದಕ್ಕಿಂತ ಕಾಳಾಮುಖ ಶೈವಧರ್ಮದ ವಿದ್ವಾಂಸನಾಗಿ ಆತ ಸಾಮಾಜಿಕರಿಗೆ ಧರ್ಮಬೋಧಿಸುವ ಕೆಲಸವನ್ನೂ ಮಾಡುತ್ತಿರಬೇಕೆನಿಸುತ್ತದೆ.

ಇನ್ನು ಎರಡನೆಯ ಶಾಸನದಲ್ಲಿ ಚಾವುಂಡರಾಯನ ಮಗ ಕ್ರಿ. ಶ. ೧೧೮೬ರಲ್ಲಿ ೨೦೦ ಮತ್ತರು ಭೂಮಿಯನ್ನು ದಾನವಾಗಿ ಕೊಡುತ್ತಾನೆ. ಚಾವುಂಡರಾಯನ ಹೆಂಡತಿ ಮೂವತ್ತೆರಡು ವರ್ಷಗಳ ಹಿಂದೆ ಕ್ರಿ. ಶ. ೧೧೫೪ರಲ್ಲಿ ದಾನವಾಗಿ ಕೊಟ್ಟದ್ದು ಕೇವಲ ಆರು ಮತ್ತರು ಭೂಮಿಯನ್ನು; ಮೊಲ್ಲೆಬೊಮ್ಮಯ್ಯನು ಜೀವಂತವಿರುವವರೆಗೆ ತನ್ನ ಉಪಜೀವನಕ್ಕಾಗಿ ಬಳಸಿಕೊಳ್ಳಲು. ಅದೇ ಚಾವುಂಡರಾಯನ ಮಗ ವೀರಬಿಜ್ಜಲ ದಾನವಾಗಿ ಕೊಟ್ಟದ್ದು ೨೦೦ ಮತ್ತರು ಭೂಮಿಯನ್ನು, 'ಮೊಲ್ಲೆಯಬೊಮ್ಮಯ್ಯಂಗೆ ಪ್ರಮಥವ್ರಿತ್ತಿಯಾಗಿ ಗಣಮತಕ್ಕೆ' ಬಳಸಿಕೊಳ್ಳಲು.

ಮೊಲ್ಲೆಬೊಮ್ಮಯ್ಯನು ಈಗ ಬೆಳೆದು ನಿಂತ ಶರಣನಾಗಿದ್ದಾನೆ. ನಿತ್ಯವೂ ಅವನಲ್ಲಿಗೆ ಬರುವ ಗಣಂಗಳ ಸಂಖ್ಯೆ ಜಾಸ್ತಿಯಾಗಿದೆ. ಈ ಪ್ರಮಥ ಗಣಂಗಳ ಸೇವೆಗಾಗಿ ೨೦೦ ಮತ್ತರು ಭೂಮಿಯನ್ನು ವೀರಬಿಜ್ಜಲನಿಂದ ಪಡೆದಿದ್ದಾನೆ. ಅಂದರೆ ಮೊಲ್ಲೆಬೊಮ್ಮಣ್ಣ ಕಲ್ಯಾಣಕ್ರಾಂತಿಯ ನಂತರ ತಿರುಗಿ ಕಲ್ಲೂರಿಗೆ ಬಂದಿದ್ದಾನೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಮತ್ತೆ ಆತ ಕಲ್ಲೇಶ್ವರನ ಭಕ್ತನಾಗಿ, ಶರಣ ಬಳಗದ ನೇತಾರನಾಗಿ, ಧಾರ್ಮಿಕ ಕೆಲಸ ಮಾಡುತ್ತಿದ್ದಾನೆಂಬುದು ಸ್ಪಷ್ಟವಾಗುತ್ತದೆ. ಇದರಿಂದ ಬೊಮ್ಮಯ್ಯ ಲಿಂಗೈಕ್ಯನಾಗುವವರೆಗೆ ಕಲ್ಲಿನಾಥನ ಸೇವೆಯಲ್ಲಿದ್ದನೆಂಬುದು ಖಚಿತವಾಗುತ್ತದೆ.

ಮೊಲ್ಲೆಬೊಮ್ಮಯ್ಯ ಧಾರ್ಮಿಕ ಮತ್ತು ಆಧ್ಯಾತ್ಮಿಕ ದೃಷ್ಟಿವುಳ್ಳವನು ಎಂಬುದು ಇದರಿಂದ ವೇದ್ಯವಾಗುತ್ತದೆ. ಕ್ರಿ. ಶ. ೧೧೮೬ ರಲ್ಲಿ ೨೦೦ ಮತ್ತರು ಭೂಮಿಯನ್ನು ಪ್ರಮಥರ ಆರೋಗಣೆಗಾಗಿ ದಾನ ಪಡೆಯುತ್ತಾನೆಂದರೆ ಸಾರ್ವಜನಿಕ ಜೀವನದಲ್ಲಿ ಆತ ಪೂಜ್ಯಸ್ಥಾನವನ್ನು ಹೊಂದಿದ್ದಾನೆಂದೇ ಅರ್ಥ. ಕ್ರಿ. ಶ. ೧೧೫೪ರಲ್ಲಿ ಆತನಿಗೆ ೨೦-೨೫ವರ್ಷ ವಯಸ್ಸಿರಬೇಕು. ಮುಂದೆ ೧೩-೧೪ ವರ್ಷಗಳಲ್ಲಿ ಕಲ್ಯಾಣದ ಕ್ರಾಂತಿಯ ಕಾಲಕ್ಕೆ (ಕ್ರಿ. ಶ. ೧೧೬೭-೬೮) ಆತನಿಗೆ ೩೫ ರಿಂದ ೪೦ ವರ್ಷಗಳಿರಬೇಕು. ಇದಕ್ಕಿಂತ ಹೆಚ್ಚಿನ ವಯಸ್ಸಿನಲ್ಲಿ ಒಬ್ಬ ಅರಸನನ್ನು ಕೊಲೆಮಾಡುವಂಥ ಕೆಲಸಕ್ಕೆ ಕೈಹಾಕಲು ಧೈರ್ಯಸಾಲದು. ಮುಂದೆ ಕ್ರಾಂತಿಯ ನಂತರ ಹಿಂತಿರುಗಿ ಬಂದು ಆತ ತನ್ನ ಪ್ರಭಾವವನ್ನು ಸಮಾಜದ ಮೇಲೆ ಬೀರುತ್ತ, ಆಡಳಿತಗಾರರ ಗಮನಸೆಳೆಯುತ್ತ ಹೋಗಿರುವುದು ಸಾಮಾನ್ಯ ಸಂಗತಿಯಲ್ಲ. ಅಂತಲೇ ಮುಂದೆ ಕ್ರಿ. ಶ. ೧೧೮೬ರಲ್ಲಿ, ಅಂದರೆ ಕಲ್ಯಾಣ ಕ್ರಾಂತಿಯ ನಂತರ ೧೬ ವರ್ಷಗಳ ಬಳಿಕ, ತನ್ನ ವಯಸ್ಸು ಸುಮಾರು ೫೫-೫೬ ವರ್ಷವಿದ್ದಾಗ ವೀರಬಿಜ್ಜಲನಿಂದ ೨೦೦ ಮತ್ತರು ಭೂಮಿಯನ್ನು ದಾನವಾಗಿ ಪಡೆದಿದ್ದಾರೆಂದರೆ ಅವರಿಗೆ ಸೇವೆಸಲ್ಲಿಸುವ ವಯಸ್ಸು ಇನ್ನೂ ಇದೆ ಎಂದೇ ಭಾವಿಸಬೇಕಾಗುತ್ತದೆ. ಆ ಮುಂದೆ ಕನಿಷ್ಠವೆಂದರು ೩೦-೪೦ ವರ್ಷ ಅವರು ಸೇವೆಸಲ್ಲಿಸಿ, ಲಿಂಗೈಕ್ಯರಾಗಿಬೇಕು.

ಕ್ರಿ. ಶ. ೧೧೫೪ರ ಶಾಸನದಲ್ಲಿ ರಾಣಿ ಮಹಾದೇವಿ ಅವರು ೬ ಮತ್ತರು ಭೂಮಿಯ ಜೊತೆಗೆ, ಬೊಮ್ಮಯ್ಯನವರು ವಾಸಿಸಲು ಒಂದು ಮನೆಯನ್ನೂ ದಾನವಾಗಿ ಕೊಡುತ್ತಾರೆ. ಮೇಲಾಗಿ ಕಲ್ಲಿನಾಥೇಶ್ವರ ದೇವಾಲಯ ಮೊದಲಿನಿಂದಲೂ ಕಾಳಾಮುಖ ಶೈವಪರಂಪರೆಯ ಕೇಂದ್ರವಾಗಿ, ಅಲ್ಲಿ ಅನೇಕ ಜನ ಕಾಳಾಮುಖ ಯತಿಗಳಾಗಿ ಹೋಗಿರುವುದನ್ನು ಶಾಸನಗಳು ಸ್ಪಷ್ಟಪಡಿಸುತ್ತವೆ. ಇವರ ಜೊತೆಗೆ ಅನೇಕ ಜನ ಶಿಕ್ಷಣಾರ್ಥಿಗಳು ಅಲ್ಲಿರುವ ಸಾಧ್ಯತೆ ಇದೆ. ಇದನ್ನು ಗಮನಿಸಿದರೆ ಇವರೆಲ್ಲ ವಾಸ ಮಾಡಲು ಮನೆ-ಮಠಗಳ

ವ್ಯವಸ್ಥೆ ಇರಲೇ ಬೇಕು. ಕಲ್ಲೂರಿನಲ್ಲಿ ಉಳಿದು ಬಂದ ಮೌಖಿಕ ಮಾಹಿತಿಗಳು ಈ ಬಗೆಗೆ ಒಂದಿಷ್ಟು ಸಂಗತಿಗಳನ್ನು ಒದಗಿಸುತ್ತವೆ. ಕಲ್ಲಿನಾಥೇಶ್ವರ ದೇವಾಲಯದ ಹಿಂದೆ ಪಶ್ಚಿಮದಿಕ್ಕಿನಲ್ಲಿ ಈಗಲೂ ನಾಲ್ಕು ಎಕರೆಯಷ್ಟು ಸ್ಥಳ ದೇವಾಲಯಕ್ಕೆ ಸೇರಿದೆ. ಆ ವಿಶಾಲವಾದ ಆವರಣದಲ್ಲಿ ಒಂದು ಹಳೆಯ ಕಟ್ಟಡದ ಬಾವಿ, ಒಂದು ದ್ವಾರಬಾಗಿಲ, ಜೊತೆಗೆ ಸುತ್ತಲೂ ಗೋಡೆ ಇರಬಹುದಾದ ಗುರುತುಗಳು ಕಾಣಿಸುತ್ತವೆ. ಇವುಗಳನ್ನು ಗಮನಿಸಿದರೆ ಕಾಳಾಮುಖ ಯತಿಗಳು, ಮೋಲ್ಲೆಬೊಮ್ಮಯ್ಯ ಮತ್ತು ಅನೇಕರು ವಾಸಿಸುವ ವ್ಯವಸ್ಥೆ ಮತ್ತು ದಾಸೋಹ ಮನೆಗಳು ಈ ಸ್ಥಳದಲ್ಲಿ ಇದ್ದಿರಬಹುದೆಂದು ಗ್ರಹಿಸಬಹುದಾಗಿದೆ.

ಕಲ್ಲೂರಿನಿಂದ ಸಮೀಪದಲ್ಲಿರುವ ಕೋಡಿಕೊಪ್ಪದ ಎರಡು ಶಾಸನಗಳಲ್ಲಿ ಮೋಲ್ಲೆಬೊಮ್ಮಯ್ಯನ ಹೆಸರು ಉಲ್ಲೇಖವಾಗುತ್ತದೆ. ಅವುಗಳಲ್ಲಿ ಒಂದು ಕ್ರಿ. ಶ. ೧೧೨೦–೨೧ನೇ ವರ್ಷಕ್ಕೆ ಸಂಬಂಧಪಟ್ಟುದು. ಇನ್ನೊಂದು ಶಾಸನ ಕ್ರಿ. ಶ. ೧೧೪೪ನೇ ವರ್ಷದ್ದಾಗಿದೆ. ೧೧೨೦ರ ಶಾಸನದ ಮೋಲ್ಲೆಬೊಮ್ಮಯ್ಯ ಮಲ್ಲಯ್ಯನ ಭಕ್ತನಾದರೆ, ಕ್ರಿ. ಶ. ೧೧೪೪ನೇ ವರ್ಷದ ಬೊಮ್ಮಯ್ಯ ಮೂಲಬ್ರಹ್ಮೇಶ್ವರನ ಭಕ್ತನಾಗಿದ್ದಾನೆ. ಮೇಲಾಗಿ ಈ ಎರಡೂ ಶಾಸನಗಳಲ್ಲಿ ಉಲ್ಲೇಖವಾಗುವ ಮೋಲ್ಲೆಬೊಮ್ಮಯ್ಯ ದಾನವನ್ನು ಕೊಡುತ್ತಾನೆ. ಹೀಗಾಗಿ ಈ ಇಬ್ಬರು ಬೊಮ್ಮಯ್ಯಗಳು ಕಲ್ಲಿನಾಥನ ಭಕ್ತನಾದ ಮೋಲ್ಲೆಬೊಮ್ಮಯ ಆಗಿರಲಿಕ್ಕಿಲ್ಲವೆನಿಸುತ್ತದೆ. ಡಾ. ಎಂ.ಎಂ.ಕಲಬುರ್ಗಿ ಅವರು ಅಭಿಪ್ರಾಯಪಡುವಂತೆ ಮೋಲ್ಲೆಬೊಮ್ಮಯ್ಯ ಎಂಬ ಹೆಸರಿಡುವುದು ಆಗಿನ ಕಾಲಕ್ಕೆ, ಆ ಪ್ರದೇಶದಲ್ಲಿ ಸಾಮಾನ್ಯವಾಗಿರುವ ಸಂಗತಿಯಾಗಿರ ಬಹುದಾಗಿದೆ (ನೋಡಿ, ಮಾರ್ಗ–೪, ಪು. ೪೪೬).

ಡಾ. ಬಿ. ವಿ. ಶಿರೂರ ಅವರು 'ಕೋಡಿಕೊಪ್ಪದ ಎರಡೂ ಶಾಸನ, ಕಲ್ಲೂರ ಎರಡೂ ಶಾಸನ ಮತ್ತು ಮೋಲ್ಲೆಬೊಮ್ಮಯ್ಯಗಳ ಕಾವ್ಯ ಉಲ್ಲೇಖಿಸುವ ಮೋಲ್ಲೆಬೊಮ್ಮಯ್ಯ ಒಬ್ಬನೇ ಎಂಬುದು ಸ್ಪಷ್ಟವಾಗುತ್ತದೆ' ಎನ್ನುತ್ತಾರೆ. ಅಲ್ಲದೆ ಕ್ರಿ. ಶ. ೧೧೨೦–೨೧ 'ಶಾಸನದ ಕಾಲದಲ್ಲಿ ಅವನ ವಯಸ್ಸು ೨೦ ಎಂದಿಟ್ಟುಕೊಂಡರೆ ಮೇಲಿನ (ಕ್ರಿ. ಶ. ೧೧೪೪ರ) ಕೋಡಿಕೊಪ್ಪ ಶಾಸನದ ಕಾಲಕ್ಕೆ ಅವನಿಗೆ ೪೪ ವರುಷ. ಬಿಜ್ಜಳನ ಕೊಲೆಯ ಕಾಲಕ್ಕೆ (ಕ್ರಿ. ಶ. ೧೧೬೮) ೬೮ ವರುಷ ಇರಬೇಕೆಂದು ಊಹಿಸಬಹುದಾಗಿದೆ' (ಕಲ್ಲೂರ ಶ್ರೀ ಕಲ್ಲಿನಾಥೇಶ್ವರ, ಪು.೨೭) ಎನ್ನುತ್ತಾರೆ. ಒಬ್ಬನು ತನ್ನ ೬೮ನೇ ವಯಸ್ಸಿನಲ್ಲಿ ಕೊಲೆಮಾಡಲು ಅಷ್ಟೊಂದು ಉತ್ಸುಕನಾಗುವುದು, ಅರಮನೆಯನ್ನು ಹೊಕ್ಕು ಅರಸನ ಕೊಲೆಮಾಡುವಲ್ಲಿ ಭಾಗಿಯಾಗುವುದು ದುಸ್ತರವೆನಿಸುತ್ತದೆ.

**ಸಹಾಯಕ ಗ್ರಂಥಗಳು :**


೧. ಮೋಲ್ಲೆಬೊಮ್ಮಯ್ಯಗಳ ಕಾವ್ಯ, ಸಂ. ಬಿ. ವ್ಹಿ. ಶಿರೂರ, ಜ. ತೋಂಟದಾರ್ಯ ಮಠ, ಗದಗ, ೧೯೮೭.

೨. ಕಲ್ಲೂರಿನ ಕಲ್ಲಿನಾಥೇಶ್ವರ, ಸಂ. ಬಿ. ವ್ಹಿ. ಶಿರೂರ, ಶ್ರೀ ಕಲ್ಲಿನಾಥೇಶ್ವರ ಟ್ರಸ್ಟ್ ಕಮೀಟಿ, ಕಲ್ಲೂರ, ೨೦೦೬.

೩. ಬಸವೇಶ್ವರ ಮತ್ತು ಅವನ ಕಾಲ, ಪಿ.ಬಿ.ದೇಸಾಯಿ, ಅನು. ಪ್ರೊ. ಸದಾನಂದ ಕನವಳ್ಳಿ, ಸಂ. ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ, –ಡಾ. ಎಂ. ಎಂ. ಕಲಬುರ್ಗಿ ಅಧ್ಯಯನ ಸಂಸ್ಥೆ, ಜ. ತೋಂಟದಾರ್ಯ ಮಠ, ಗದಗ, ೨೦೧೭.

೪. ಪಾಲ್ಕುರಿಕೆ ಸೋಮನಾಥನ ಬಸವ ಪುರಾಣ, ಅನು. ಡಾ. ಪಿ. ವಿ. ನಾರಾಯಣ, ತರಳಬಾಳು ಪ್ರಕಾಶನ, ಅಣ್ಣನ ಬಳಗ, ಸಿರಿಗೆರೆ, ೧೯೮೨.

೫. ಭೀಮಕವಿ ಬಸವ ಪುರಾಣ, ಸಂ. ಐ.ಎಸ್.ಪಾವಟೆ, ಕೆ. ಎಂ. ಬಂದಮ್ಮನವರ, ವ್ಹಿ.ಎಂ.ಮಲ್ಲಾಬಾದಿ, –ಸಾಹಿತ್ಯ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ, ೧೯೬೯.

೬. ಮಾರ್ಗ–೪, ಡಾ. ಎಂ. ಎಂ. ಕಲಬುರ್ಗಿ, –ಸಪ್ನ ಬುಕ್ ಹೌಸ್, ತುಂಗಾ ಕಾಂಪ್ಲೆಕ್ಸ್, ಗಾಂಧಿನಗರ, ಬೆಂಗಳೂರು, ೨೦೦೪.


■■

# ಮನ ಕಟ್ಟಿ, ಮದ ಮೆಟ್ಟಿದ ಹಡಪದಪ್ಪಣ್ಣ

● ವೆಂಕಟೇಶ ಕೆ. ಜನಾದ್ರಿ

ಹನ್ನೆರಡನೇ ಶತಮಾನದಲ್ಲಿ ಅಸಮಾನತೆ, ಕಂದಾಚಾರ ಮೌಢ್ಯತೆಗಳು ತುಂಬಿಕೊಂಡು ವ್ಯವಸ್ಥೆ ಅವ್ಯವಸ್ಥೆಯ ಆಗರವಾಗಿತ್ತು. ಇದೇ ಸಂದರ್ಭದಲ್ಲಿ ಬಸವಾದಿ ಪ್ರಮಥರು ಇಂಥ ಅವ್ಯವಸ್ಥೆಯನ್ನು ಸರಿಪಡಿಸಿ ಸಮಸಮಾಜ ನಿರ್ಮಾಣದತ್ತ ಯೋಚಿಸಿದರು. ಬಸವಣ್ಣನಂತೂ ಬರೀ ಪ್ರಗತಿಪರವಾಗಿ ಯೋಚಿಸಿ ವಚನ ರಚಿಸಲಿಲ್ಲ. ಅವರು ಪ್ರಾಯೋಗಿಕವಾಗಿಯೇ ಮೌಢ್ಯತೆಯನ್ನು ತೊಲಗಿಸಲು ತಮ್ಮಿಂದಲೇ ಆರಂಭಿಸಿದರು. ಅಂದಿನ 'ಪುರುಷ ಶ್ರೇಷ್ಠ ಮಹಿಳೆ ಕನಿಷ್ಠ' ಎಂಬ ಮೌಢ್ಯತೆಗೆ ಉತ್ತರವಾಗಿ ಇಷ್ಟಲಿಂಗವನ್ನು ಮಹಿಳೆಗೂ ಪೂಜಿಸಿಕೊಳ್ಳಲು ಕೊಟ್ಟರು.

'ಬಲಗೈ ಶ್ರೇಷ್ಠ ಎಡಗೈ ಕನಿಷ್ಠ' ಎಂಬ ಮತ್ತೊಂದು ಮೌಢ್ಯತೆಗುತ್ತರವಾಗಿ ಎಡಗೈಯಲ್ಲಿಯೇ ಇಷ್ಟಲಿಂಗವನ್ನಿಡಿದು ಪೂಜಿಸಿಕೊಳ್ಳಲು ತಿಳಿಸಿದರು. ಇಂಥದ್ದೊಂದು ಅವ್ಯವಸ್ಥೆಯಲ್ಲಿ ಹಡಪದ ಕಾಯಕದ ವ್ಯಕ್ತಿ ಬೆಳಿಗ್ಗೆ ಎದುರುಗಡೆ ಬಂದರೆ ಅದೊಂದು ದರಿದ್ರ ಆ ದಿನವೆಲ್ಲ ಕೇಡಾಗುತ್ತದೆಂಬುದೊಂದು ಪೆಡಂಭೂತ ಮೌಢ್ಯವಾಗಿತ್ತು. ಈ ಮೌಢ್ಯತೆಯಲ್ಲಿ ಹುರುಳಿಲ್ಲವೆಂಬುದನ್ನು ಸಾಬೀತುಪಡಿಸಲು ಹಡಪದ ಜನಾಂಗದವರೇ ಆದ ಅಪ್ಪಣ್ಣನವರನ್ನು ತಮ್ಮ ಆಪ್ತ ಕಾರ್ಯದರ್ಶಿ/ಸಹಾಯಕರನ್ನಾಗಿ ನೇಮಿಸಿಕೊಂಡಿದ್ದರು. ದಿನ ಬೆಳಗಾದರೆ ಬಸವಣ್ಣನವರು ಹಡಪದ ಅಪ್ಪಣ್ಣನವರ ಮುಖವನ್ನೇ ನೋಡಿ ಅವರ ಮೂಲಕವೇ ಅಂದಿನ ಕಾರ್ಯ ಯೋಜನೆಗಳನ್ನು ರೂಪಿಸಿಕೊಳ್ಳಬೇಕಾದ ಬಹು ಮುಖ್ಯವಾದ ಕಾರ್ಯಭಾರವನ್ನು ಅವರಿಗೆ ವಹಿಸುವ ಮೂಲಕ ಅಂದಿನ ಮೌಢ್ಯತೆಗಳನ್ನು ಕಂದಾಚರಣೆಗಳನ್ನು ನಿವಾಳಿಸಿ ಬಿಸಾಕಲು ಮೊದಲು ತಾವೇ ಪ್ರಾಯೋಗಿಕವಾಗಿ ಪ್ರಯತ್ನಿಸಿ ಮಾದರಿಯಾದರು. ನುಡಿದಂತೆ ನಡೆಯುವ ಸಿದ್ಧಾಂತವಿಲ್ಲಿ ಪ್ರಾಯೋಗವಾಗಿತ್ತು. ಇದು ಕೊರಡನ್ನೂ ಕೊನರಿಸುವಂಥ ಕ್ರಾಂತಿಯಾಗಿತ್ತು.

ಬಸವಣ್ಣನವರು ಹಡಪದ ಅಪ್ಪಣ್ಣನವರನ್ನು ಕೇವಲ ತಮ್ಮ ಸಹಾಯಕರೆಂದೆಣಿಸದೇ ಅವರಲ್ಲಿ ಒಬ್ಬ ಶಿವಶರಣನನ್ನು ಕಂಡು ಅವರಿಗೆ ಗೌರವ ನೀಡಿ ಅವರ ಸಲಹೆಗಳನ್ನು ಅಕ್ಷರಶಃ ಪಾಲಿಸುತ್ತಿದ್ದರು. ಬಸವಣ್ಣನವರ ಮಾನಸಪುತ್ರರಾಗಿ, ಆಪ್ತನಾಗಿ, ಕಟ್ಟಕಡೆಯವರೆಗೂ ಮನಃಪೂರ್ವಕವಾದ ಸೇವೆಯನ್ನು ಸಲ್ಲಿಸಿದ್ದರು. ಲೌಕಿಕ ಮಾತ್ರವಲ್ಲ ಪಾರಮಾರ್ಥದಲ್ಲಿಯೂ ಅಪ್ಪಣ್ಣ ಬಸವಣ್ಣನವರಿಗೆ ಆಪ್ತ ಸಹಾಯಕರಾಗಿದ್ದರು. ಕ್ರಿ.ಶ. ೧೧೬೦ರಲ್ಲಿ ಹಡಪದ ಅಪ್ಪಣ್ಣ ಜನಸಿರಬಹುದೆಂಬುದೊಂದು ಅಂದಾಜಿದೆ. ಇವರು ರಚಿಸಿದ ಹಲವಾರು ವಚನಗಳಲ್ಲಿ ನಮಗಿಂದು "ಬಸವಪ್ರಿಯ ಕೂಡಲ ಚೆನ್ನಬಸವಣ್ಣ" ಎಂಬ ಅಂಕಿತದಲ್ಲಿ ಲಭ್ಯವಿದ್ದದ್ದು ಸುಮಾರು ೨೪೬ ವಚನಗಳು ಮಾತ್ರ. ಇವರದ್ದು ಹಡಪದ ಕಾಯಕ ಎಂದು ಗುರುತಿಸಲಾಗಿದೆ. ಹಡಪ ಎಂದರೆ "ಕ್ಷೌರಿಕ ಸಾಮಾನುಗಳ ಪೆಟ್ಟಿಗೆ" ಎಂಬ ಅರ್ಥವಿದೆ. "ತಾಂಬೂಲದ ಚೀಲ" ಎಂಬ ಅರ್ಥವೂ ಇದೆ. ಹಡಪದ ಅಪ್ಪಣ್ಣನವರು ಕ್ಷೌರಿಕ ಅಥವಾ ತಾಂಬೂಲ ಕಟ್ಟಿಕೊಡುವ ಒಂದು ಕಾಯಕದಲ್ಲಿದ್ದರೆಂದು ತಿಳಿದುಕೊಳ್ಳಬೇಕಾಗುತ್ತದೆ. ಶರಣ ಪರಂಪರೆಯಲ್ಲಿ, ಶರಣರ ಕಾಯಕಕ್ಕೆ ಮಹತ್ವವಿತ್ತೇ ವಿನಃ ಇಂಥದ್ದೇ ಕಾಯಕ ಎಂಬುದಕ್ಕಿರಲಿಲ್ಲ. ಎಲ್ಲಾ ಬಗೆಯ ಕಾಯಕದವರು ಸಮಾನರಾಗಿದ್ದರು. 'ದೇವ ಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡೊಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ತಲೆದಂಡ ತಲೆದಂಡ' ಎನ್ನುತ್ತಿದ್ದರು. ಇಲ್ಲಿ ಕಾಯಕಕ್ಕೆ ದೇವನ ಮಾನ್ಯತೆಯನ್ನು ಕೊಟ್ಟಿದ್ದನ್ನು ಕಾಣಬಹುದು. ಹೀಗೆ ಹಡಪದ ಅಪ್ಪಣ್ಣನವರು ಕಾಯಕ ಮಾಡುತ್ತಾ, ನಂತರದಲ್ಲಿ ಬಸವಣ್ಣನವರ ಆಪ್ತ ಸಹಾಯಕರಾಗಿ ಪ್ರಮುಖ ಪಾತ್ರವಹಿಸುತ್ತಾರೆ.

**ಎನ್ನ ತನು ನಿಮ್ಮ ಸೇವೆಯಲ್ಲಿ ಸವೆದು, ಎನ್ನ ಮನ ನಿಮ್ಮ ನೆನಹಿನಲ್ಲಿ ಸವೆದು, ಎನ್ನ ಅರಿವು ನಿಮ್ಮ ಘನದೊಳಗೆ ಸವೆದು, ನಿಶ್ಚಲ ನಿಜೈಕ್ಯವಾಗಿ ಬಸವಪ್ರಿಯ ಕೂಡಲ ಸಂಗಯ್ಯ**

ಎಂಬ ತಮ್ಮದೊಂದು ವಚನದಲ್ಲಿ ಬಸವಣ್ಣನವರ ಜೊತೆ ಕ್ಷಣಕ್ಷಣವೂ ಇದ್ದು ಕಾಯಾ ವಾಚಾ ಮನಸಾ ಏಕನಿಷ್ಠೆಯಿಂದ ಕೊನೆಯವರೆಗೂ ಆಪ್ತ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದವರು. ಇವರ ಈ ಕಾಯಕ ಇಂದಿನ ಆಪ್ತ ಕಾರ್ಯದರ್ಶಿ ಹುದ್ದೆಯಲ್ಲಿರುವವರಿಗೆ ಆದರ್ಶವಾಗಿದೆ.

**ಲೆಕ್ಕಪತ್ರ ಅಧೀಕ್ಷಕ, ಈಕರಸಾ.ಸಂಸ್ಥೆ , ಕೇಂದ್ರ ಕಛೇರಿ, ಕಲಬುರ್ಗಿ-೫೮೫೧೦೨ ಮೊ: ೯೪೫೩೩೦೪೯೨**

**ಕಟ್ಟಬೇಕು ಮನವ, ಮೆಟ್ಟಬೇಕು ಮದವ, ಸುಟ್ಟುರುಹಬೇಕು ಸಪ್ತ ವ್ಯಸನಂಗಳ. ಆ ತೊಟ್ಟಿಲ ಮುರಿದು, ಕಣ್ಣಿಯ ಹರಿದು, ಆ ಬಟ್ಟ ಬಯಲಲ್ಲಿ ನಿಂದಿರೆ, ಬಸವಪ್ರಿಯ ಕೂಡಲಚೆನ್ನಬಸವಣ್ಣ**

ಎಂಬ ತಮ್ಮ ವಚನದಲ್ಲಿ ನಮ್ಮ ಮನದೊಳಗೇ ಇದ್ದು ಪ್ರತಿಕ್ಷಣವೂ ನಮ್ಮ ದಾರಿಗಡ್ಡಿಯಾಗುವ ಸಪ್ತವ್ಯಸನಗಳನ್ನು ಯಾವ ಬಗೆಯಲ್ಲಿ ಸುಟ್ಟು ಹಾಕಬೇಕು. ಎಲ್ಲದಕ್ಕೂ ಮನದ ಮುಂದಿನ ಆಶೆಯೇ ಕಾರಣವಾಗಿರುವುದರಿಂದ ಇಂಥ ಮನವನ್ನು ಆಶೆಯೆಂಬ ಪಾಶದಿಂದ ಬಂಧಿಸಿಕೊಳ್ಳದೇ ಆದರ್ಶವಾಗಿ ಹೇಗೆ ಕಟ್ಟಿಕೊಳ್ಳಬೇಕು. ನಮ್ಮೊಳಗಿನ ಮದವನ್ನು ಮಟ್ಟ ಹಾಕುವ ಮೂಲಕ, ಸಪ್ತ ವ್ಯಸನಗಳನ್ನು ಸುಟ್ಟು ಹಾಕುವದಷ್ಟೇ ಅಲ್ಲ ಈ ಭ್ರಮೆಯೆಂಬ ತೊಟ್ಟಿಲನ್ನೇ ಮುರಿದು, ಕಣ್ಣಿಯನ್ನು ಹರಿದು ಬಟ್ಟಬಯಲಲ್ಲಿ ನಿರಾಳವಾಗಿ ನಿಲ್ಲುವವರಾಗಿರಬೇಕೆಂಬ ಸರಳವಾದ ಬದುಕನ್ನು ಇಲ್ಲಿ ಅನಾವರಣಗೊಳಿಸಿದ್ದಾರೆ.

ಸಿದ್ದರಾಮ ಶರಣರೊಮ್ಮೆ ಪ್ರಭುದೇವರೊಂದಿಗೆ ಬಸವಣ್ಣನ ಮನೆಗೆ ಬಂದಾಗ ಅಪ್ಪಣ್ಣನವರು ಇವರುಗಳ ಘನವ್ಯಕ್ತಿತ್ವವನ್ನು ಮನವರಿಕೆ ಮಾಡಿಕೊಡುವ ಮೂಲಕ ಪೂಜೆ ಮಾಡಿಕೊಳ್ಳುತ್ತಿರುವ ಬಸವಣ್ಣನನ್ನು ಎಚ್ಚರಿಸಿ, ಅವರೇ ಹೊರಗೆ ಬಂದು, ಬಂದಿರುವ ಶರಣರನ್ನು ಸ್ವಾಗತಿಸಲು ಸನ್ನದ್ಧರನ್ನಾಗಿಸುವಂತೆ ಮಾಡುತ್ತಾರೆ. ಇಂಥ ಸೂಕ್ಷ್ಮ ಸ್ಥಿತಿಯನ್ನು ನಿಭಾಯಿಸುವಲ್ಲಿ ಅಪ್ಪಣ್ಣನವರ ಚಾಣಾಕ್ಷತನವನ್ನರಿಯಬಹುದು. ಲಿಂಗಪೂಜೆಗೂ ಜಂಗಮ ಪುರಸ್ಕಾರಕ್ಕೂ ಭೇದವಿಲ್ಲವೆನ್ನುವದನ್ನು ನಿರೂಪಿಸುತ್ತಾರೆ ಲಿಂಗಪೂಜೆಗಿಂತಲೂ ಬಂದ ಜಂಗಮರನ್ನು ಸತ್ಕರಿಸುವುದೇ ಮುಖ್ಯವೆನ್ನುವ ಭಾವವಿಲ್ಲಿದೆ. ಅದಕ್ಕೆ ಇರಬೇಕು "ಕಾಯಕವೇ ಭಕ್ತ, ಪ್ರಾಣವೇ ಜಂಗಮ, ಆವುದು ಘನವೆಂಬೆ ಆವುದು ಕಿರಿದೆಂಬೆ?, ಕೂಡಲ ಸಂಗನ ಶರಣರು ಬಂದರೆ, ಉಪಚಾರಕ್ಕೆ ಇಂಬಿಲ್ಲ ಕರುಣದಿಂ ಬರಹೇಳಾ ಅಪ್ಪಣ್ಣಾ" ಎಂದು ಬಸವಣ್ಣನವರೇ ಹೇಳುವಂತೆ ಮಾಡುವ ಮೂಲಕ ಗಂಭೀರ ಪರಿಸ್ಥಿತಿಯನ್ನು ಅಪ್ಪಣ್ಣನವರು ತಿಳಿಗೊಳಿಸುತ್ತಾರೆ. ಅಲ್ಲದೇ "ನೀವೇ ಎದ್ದುಹೋಗಿ ಅವರನ್ನು ಕರೆಯಬೇಕು" ಎಂದು ಸ್ಪಷ್ಟವಾಗಿ ಬಸವಣ್ಣನಿಗೆ ಹೇಳಿಬಿಡುತ್ತಾರೆ. ಅಪ್ಪಣ್ಣನವರ ಕೆಲವು ವಚನಗಳನ್ನು ಗಮನಿಸಿದಾಗ ಅವುಗಳಲ್ಲಿ ಅಗಾಧವಾದ ಜೀವನಾನುಭವ ಅಡಗಿರುವುದು ವೇದ್ಯವಾಗುತ್ತದೆ.

**ಹಸಿವಿಗಾಗಿ ಅಶನವ ಕೊಂಬರು, ವಿಷಯದಾಸೆಗೆ ಹುಸಿಯ ನುಡಿವರು, ಹಸನಾಗಿ ವ್ಯಸನವ ಹೊತ್ತು ಭಸಿತವ ಹೂಸಿ ವಿಶ್ವವ ತಿರುಗಿದರು, ಈ ಹುಸಿಯ ಬಿಟ್ಟು ಮಾಯೆಯ ಮಸಕವ ಆಣ್ಬಲ್ಲದೆ ನಮ್ಮ ಬಸವ ಪ್ರಿಯ ಕೂಡಲ ಚೆನ್ನಬಸವಣ್ಣನ ಕೂಡ**

ಎಂಬ ವಚನದಲ್ಲಿ ಸಾಮಾನ್ಯರು ತಮ್ಮ ಹಸಿವಿಗಾಗಿ ವಿಷಯದಾಸೆಗಾಗಿ ಸುಳ್ಳನ್ನು ನುಡಿಯುತ್ತಿರುವರು. ಇದೇ ವ್ಯಸನದಲ್ಲಿ ವಿಶ್ವವನ್ನೇ ತಿರುಗಿಬಿಡಬಲ್ಲರು. ಇಂಥ ಭ್ರಮೆಗಳನ್ನು ಬಿಟ್ಟು ಮಾಯೆಯ ಸೆಳೆತಕ್ಕೆ ಸಿಲುಕದೇ ದೇವನೊಲಿಸುವ ಪರಿಯನ್ನು ತಿಳಿಯುವತ್ತ ಯೋಚಿಸಬೇಕೆನ್ನುತ್ತಾರೆ. ಆಸೆಯೆಂಬ ಪಾಶದಲ್ಲಿ ಸಿಲುಕಿ ಒದ್ದಾಡುತ್ತಿರುವವರ ಸಂಕಟಗಳ ಬಗ್ಗೆ ಸೂಕ್ಷ್ಮವಾಗಿ ಎಚ್ಚರಿಸಿ ಅವರು ಹೇಗೆಲ್ಲ ಬದುಕಿದರೆ ದೇವನಿಗೆ ಪ್ರೀಯವಾಗಬಲ್ಲರೆಂಬುದನ್ನು ಇಲ್ಲಿ ಬಿಂಬಿಸಿದ್ದಾರೆ.

**ಮನವನರಿದವಂಗೆ ಮತದ ಹಂಗೇಕೊ? ನಿತ್ಯವನರಿದವಂಗೆ ತೀರ್ಥದ ಹಂಗೇಕೊ?, ಪರಮಾರ್ಥವನರಿದವಂಗೆ ಪ್ರಸಾದದ ಹಂಗೇಕೊ? ಜ್ಯೋತಿಯನವರಿದವಂಗೆ ಕತ್ತಲೆಯ ಹಂಗೇಕೊ? ಲೋಕವನರಿದವಂಗೆ ವ್ಯಾಕುಲದ ಹಂಗೇಕೊ? ಈ ತೆರನನರಿದವಂಗೆ ಮುಂದಾವ ಭೀತಿಯುಂಟು ಹೇಳಾ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ**

ಸಕಲ ಜೀವಿಗಳಲ್ಲಿರುವ ಜೀವಾತ್ಮವೆಂಬ ಮನವನ್ನು ಚೆನ್ನಾಗಿ ಅರಿತವಂಗೆ ಆ ಮತ ಈ ಮತ, ಆ ಕುಲ ಈ ಕುಲವೆಂಬ ಭೇದವಿರದು. ಪರಮಾತನನ್ನೇ ತನ್ನೊಳಗಣ ಆತ್ಮನನ್ನಾಗಿಸಿಕೊಂಡಿರುವಾಗ ಮತ–ಕುಲದ ಹಂಗೆಲ್ಲಿದೆ? ತಮ್ಮ ನಿತ್ಯದ ಚಟುವಟಿಕೆ ಜೀವಜಲದ ತೀರ್ಥವೇ ತಾನಾಗಿರುವಾಗ ಬೇರೊಂದು ತೀರ್ಥದ ಹಂಗೇಕೆ? ಇಂಥ ಪರಮಾರ್ಥವನ್ನು ಅರಿತವನಿಗೆ ದೇವರ ಹೆಸರಿನ ಪ್ರಸಾದದ ಹಂಗೂ ಇರುವುದಿಲ್ಲ. ತನ್ನ ಕಾಯಕದಿಂದ ಬಂದ ಪ್ರತಿಫಲವೇ ತನ್ನ ಪ್ರಸಾದವೆಂದರಿತಿರುತ್ತಾನೆ. ಎಂಬುದು ಅಪ್ಪಣ್ಣನ ವಿಚಾರ. ಹಾಗೆಯೇ ಬೆಳಕಿನ ಸಂಭ್ರಮವನ್ನರಿತವನಿಗೆ ಕತ್ತಲೆಯ ಭಯವಾಗಲೀ ಆತಂಕದ ಅವಶ್ಯಕತೆಯಾಗಲಿ ಇರದು. ಲೋಕದ ವ್ಯವಹಾರ ನೀತಿ–ಅನೀತಿ, ಸುಖ–ದುಃಖ...ಇವುಗಳನ್ನರಿತವಂಗೆ ವ್ಯಾಕುಲದ ಹಂಗೇಕೆ ಎನ್ನುತ್ತಲೇ ಇಂಥವರಿಗೆ ಮುಂದಾಗುವ ಭೀತಿಯ ಭಯವೂ ಇರದು. ಭೀತಿಯೇ ಇರದೆಂದು ಇಲ್ಲಿ ಬದುಕಿನ ಅಗವ್ಯುದ ವಾಸ್ತವತೆಯನ್ನು ತುಂಬಾ ಮಾರ್ಮಿಕವಾಗಿ ಅಪ್ಪಣ್ಣನವರು ಬಿಂಬಿಸಿದ್ದಾರೆ.

**ಆಸೆಯಳಿದು, ನಿರಾಸೆಯಲ್ಲಿ ನಿಂದು, ವೇಷವ ಜರೆದು, ಸರ್ವವ ಮರೆದು, ಈ ಗುಣತ್ರಯಮಂ ತೊರೆದು, ನಿರಾಸೆಯ ಮೇಲೆ ನಿಂದರೆ, ಅದೇ ಶರಣಂಗೆ ಸರಿ ಎಂಬೆ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ**

ಇಂದಿನ ಸ್ಪರ್ಧಾತ್ಮಕ ಲೋಕದಲ್ಲಿ ಆಸೆಗಳಿಗೆ ಮಿತಿಯೇ ಇಲ್ಲ. ಅಲ್ಲಮ ಹೇಳುವಂತೆ ಮನದ ಮುಂದಣ ಆಸೆಯೇ ಮಾಯೆಯಾಗಿ ಈ ಮಾಯಾ ಪಾಷದಲ್ಲಿ ಸಿಲುಕಿಕೊಂಡವರನ್ನು ಕುಬ್ಜರನ್ನಾಗಿಸಿಬಿಡುತ್ತದೆ. ಇಂಥ ಆಶೆಗಳ ಈಡೇರಿಕೆಗಾಗಿ ವಿಧವಿಧದ ವೇಷ ತೊಡಬೇಕಾಗುತ್ತದೆ. ಏನೆಲ್ಲವನ್ನು ಮಾಡಬೇಕಾಗುತ್ತದೆ. ಆದರೆ ಇಂಥ ಅತಿಯಾದ ಆಸೆಗಳಿಗೆ ಮನಸೋಲದೇ ಆಸೆಯಳಿದು ನಿರಾಳತೆಯಲ್ಲಿದ್ದ ಸರಳ ವ್ಯಕ್ತಿಗೆ ನಿಜಕ್ಕೂ ಶರಣತ್ವವೇ

ಪ್ರಾಪ್ತಿಯಾಗುತ್ತದೆ ಎನ್ನುತ್ತಾರೆ. ಇಲ್ಲಿ ಅಪ್ಪಣ್ಣನವರೂ ಸಹ ಎಲ್ಲ ಶರಣರಂತೆ ಸರಳತೆಯ ಬದುಕಿನಲ್ಲಿರುವ ಸಂತೃಪ್ತಿಯ ಕುರಿತು ಮನದುಂಬಿ ಹೇಳಿದ್ದಾರೆ. ಅಪ್ಪಣ್ಣನವರು ವಿನೀತ ಭಾವದಿಂದಲೇ ಬಸವಣ್ಣನವರಷ್ಟೇ ಅಲ್ಲ ಮತ್ತಿತರ ಶರಣರಿಗೆ ವಿಚಾರ ವಿನಿಮಯ ಮತ್ತು ಸಂಪರ್ಕದಲ್ಲಿ ಆಪ್ತರಾಗಿದ್ದರು. ಸಹಕಾರ ಮತ್ತು ಸಮನ್ವಯದ ಅವಶ್ಯಕತೆ ಇರುವ ವ್ಯಾವಹಾರಿಕ ಮತ್ತಿತರ ವ್ಯವಸ್ಥಾಪನೆಯಲ್ಲಿ ಒಳ್ಳೆಯ ಪ್ರಾಮಾಣಿಕ ಮತ್ತು ನಿಷ್ಠಾವಂತ ವ್ಯವಸ್ಥಾಪಕ ಹೇಗಿರಬೇಕೆಂಬುದಕ್ಕೆ ಇಂದಿನವರಿಗೂ ಸಹ ಅಪ್ಪಣ್ಣನವರು ಮಾದರಿ.

**ಅಂಗದ ಲಯ ಲಿಂಗದೊಳಗೆ, ಲಿಂಗದ ಲಯ ಅಂಗದೊಳಗೆ, ಇವೆರಡರ ಸಂಗ ಸುಖ ಜಂಗಮದೊಳಗೆ ಏಕವಾಯಿತ್ತು, ಅಂದೆ ಪ್ರಸಾದದಿಂದ ರೂಪಾಯಿತ್ತು. ಮುಂದೆ ಪ್ರಸಾದದಲ್ಲಿ ಪರಿಪೂರ್ಣವಾಯಿತ್ತು, ಇದರಂದವ ಬಲ್ಲ ಶರಣರೆ ಎನ್ನ ತಂದೆಗಳಾಗಿಪ್ಪರು ಕಾಣಾ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ**

ಪ್ರತಿಯೊಂದು ಜೀವಿಯ ಅಂಗವು ಲಿಂಗದೊಳಗೆ ಲಯವಾಗುತ್ತದೆ. ಆ ಲಿಂಗದ ಲಯ ಆ ಜೀವಿಯ ಅಂಗದೊಳಗೆ ಇರುತ್ತದೆ. ಇವೆರಡರ ಸಂಗ ಸುಖವಿದ್ದಾಗ ಜಂಗಮದೊಳಗೆ ಕೂಡಿಕೊಳ್ಳುತ್ತದೆ. ಇಲ್ಲಿ ಅಂಗ ಮತ್ತು ಲಿಂಗ ಒಂದಾದಾಗ ಜಂಗಮತ್ವವಾಗಿ ಲಿಂಗಾಂಗವೆಲ್ಲವೂ ಸತ್ವಾತ್ರಕ್ಕೆ ಸಲ್ಲಿಕೆಯಾಗುತ್ತದೆ. ಹೀಗೆ ಜಂಗಮಕ್ಕೆ ಸಲ್ಲಿಕೆಯಾದದ್ದೇ ಪ್ರಸಾದವಾಗಿ ಆತನೇ ಪ್ರಸಾದಿಯಾಗುತ್ತಾನೆ. ಆ ಲಿಂಗಾಂಗ ಯೋಗಿಯ ಬದುಕು ಶರಣತ್ವ ಪಡೆಯುತ್ತದೆ. ಆತನೇ ಶಿವಯೋಗಿಯಾಗುತ್ತಾನೆ ಎಂಬ ಮರ್ಮವನ್ನಿಲ್ಲಿ ಅಪ್ಪಣ್ಣನವರು ಬಿಂಬಿಸಿದ್ದಾರೆ. ಅಪ್ಪಣ್ಣನ ಪತ್ನಿ ಹಡಪದ ಲಿಂಗಮ್ಮ ಸಹ ಶರಣೆ. ಲಭ್ಯವಿರುವ ಸುಮಾರು ೧೧೩ ವಚನಗಳನ್ನು "ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣ" ಅಂಕಿತದಲ್ಲಿ ರಚಿಸಿದ್ದಾರೆ. ಇವೆಲ್ಲ ಬೋಧೆಯ ವಚನಗಳು. ಅಪ್ಪಣ್ಣನವರ ಕುರಿತು ಒಂದು ಘಟನೆಯನ್ನು ಹೇಳದಿದ್ದರೆ ಲೇಖನದ ಆಶಯ ಈಡೇರದು. ಅದೆಂದರೆ, ಬಸವಕಲ್ಯಾಣದಿಂದ ಕಪ್ಪಡಿಗೆ ಹೋಗಿ ಕೂಡಲ ಸಂಗಮದಲ್ಲಿ ಐಕ್ಯವಾಗುವಾಗಲೂ ನೀಲಾಂಬಿಕೆಯ ಜೊತೆ ಎಲ್ಲರನ್ನೂ, ಎಲ್ಲವನ್ನೂ ಬಿಟ್ಟು ಹೊರಡಲನುವಾಗುತ್ತಾರೆ ಆದರೆ ಅಪ್ಪಣ್ಣನನ್ನು ಬಿಡಲಿಲ್ಲ. ಅಪ್ಪಣ್ಣ ಮಾತ್ರ ಬಸವಣ್ಣನೊಂದಿಗೆ ಅಂತಿಮ ಹೆಜ್ಜೆಯಲ್ಲಿ ಭಾಗಿಯಾಗುತ್ತಾರೆ. ಬಸವಣ್ಣನವರು ಲಿಂಗೈಕ್ಯರಾದ ನಂತರ ಹಲವಾರು ದಿನಗಳ ಅಂತರದಲ್ಲಿ ನೀಲಾಂಬಿಕೆ ಮತ್ತು ಅಪ್ಪಣ್ಣ ಲಿಂಗೈಕ್ಯರಾಗುತ್ತಾರೆಂದು ಪ್ರತೀತಿಯೊಂದಿದೆ. ಇನ್ನೊಂದು ವಿಚಾರದ ಪ್ರಕಾರ ಬಸವಣ್ಣನವರ ಆಪ್ತ ಕಾರ್ಯದರ್ಶಿಯಾಗಿ ಅವರ ತನು-ಮನದೊಂದಿಗೆ ಆಪ್ತವಾಗಿದ್ದ ಅಪ್ಪಣ್ಣನವರು ಬಸವಣ್ಣನಿಲ್ಲದ ಸ್ಥಿತಿಯನ್ನು ಅನುಭವಿಸಲಾರರೆಂಬಂತೆ ಬಸವಣ್ಣನವರಿಗಿಂತ ಮೊದಲೇ ಅಪ್ಪಣ್ಣನವರು ಮಹಾಘನದಲ್ಲಿ ಒಂದಾಗುವ ಸಂದರ್ಭ ಪ್ರಸ್ತಾಪವಾಗಿರುವುದು ವಿಚಿತ್ರವಾಗಿದೆ. ಈ ಎರಡು ಘಟನೆಗಳಲ್ಲಿ ಯಾವುದು ವಾಸ್ತವ ಎನ್ನುವುದಕ್ಕಿಂತ ಘಟನಾವಳಿಯ ಹಿಂದಿನ ನೆಲೆ ಮತ್ತು ತಾತ್ವಿಕ ಸಿದ್ಧಾಂತವನ್ನಷ್ಟೇ ಪರಿಗಣಿಸಿಕೊಳ್ಳಬೇಕಿದೆ. ಅದು ಹೀಗಿದೆ.

ಬಸವಣ್ಣ ತಮ್ಮ ಕೊನೆಯ ದಿನದಲ್ಲಿ ಅಪ್ಪಣ್ಣನವರಿಗೆ ತಿಳಿಸಿದಂತೆ ನೀಲಾಂಬಿಕೆಯನ್ನು ಕರೆತರಲು ಹೋಗಿ ತಾವೊಬ್ಬರೇ ಹಿಂದಿರುಗಿ ಬರುತ್ತಾರೆ. ಹಾಗೆ ಬಂದವರು, ನೀಲಾಂಬಿಕೆ ಹೇಳಿದಂತೆ "ಸಂಗಮನಾಥನನ್ನು ಹುಡುಕಿಕೊಂಡು ಕಪ್ಪಡಿಗೆ ಹೋಗಬೇಕೇಕೆ? ತನ್ನ ಕರದ ಇಷ್ಟಲಿಂಗದಲ್ಲಿಯೇ ಸಂಗಮನಾಥನಿರುವನಲ್ಲವೇ?" ಇಲ್ಲಿರುವ ಸಂಗನೇ ಅಲ್ಲಿರುವನು ಎಂದು ಹೇಳುತ್ತಲೇ ನೀಲಾಂಬಿಕೆ ಬಯಲಾದ ವಿಷಯ ತಿಳಿಸುತ್ತಾರೆ. ಆಗ ಬಸವಣ್ಣ ಆಶ್ಚರ್ಯಚಕಿತರಾಗಿ "ಏನು ಅಪ್ಪಣ್ಣ ನೀವು ಹಾಸ್ಯ ಮಾಡುತ್ತೀರಾ?! ಅದ್ಹೇಗೆ ಸಾಧ್ಯ?!!!" ಎಂದು ಕೇಳುತ್ತಾರೆ. ಆಗ ಅಪ್ಪಣ್ಣನವರು "ನೀಲಾಂಬಿಕೆಯವರು ಹೇಗೆ ಇಷ್ಟಲಿಂಗ ಪೂಜೆ" ಮಾಡಿಕೊಳ್ಳುತ್ತಲೇ ಲಿಂಗೈಕ್ಯರಾದರೆಂದು ಪ್ರಾತ್ಯಕ್ಷಿಕೆಯಾಗಿ ಮಾಡಿ ತೋರಿಸುತ್ತಲೇ "ಇಗೋ ಈ ತೆರ"ದಲ್ಲಿ ಇಷ್ಟಲಿಂಗವನ್ನು ಕರದಲ್ಲಿಡಿದು ಇಷ್ಟಲಿಂಗದಲ್ಲಿ ಉಸಿರು ಮತ್ತು ದೃಷ್ಟಿಯನ್ನು ಕೇಂದ್ರೀಕರಿಸಿ ಶ್ವಾಸೋಚ್ಛ್ವಾಸಗಳ ನಿಲುಗಡೆಯ ರೀತಿ ನೀಲಮ್ಮ ಮಾಡುತ್ತಿದ್ದರೆಂದು ತೋರಿಸುತ್ತಾರೆ.

ಈ ಬಗೆಯಲ್ಲಿ ಅಪ್ಪಣ್ಣನವರು ತೋರಿಸುತ್ತಾ, ಈ ಸಂದರ್ಭದಲ್ಲಿ ತಮ್ಮ ಲಿಂಗಾಂಗವನ್ನು ಬಯಲ ಲಿಂಗದಲ್ಲಿ ತಲ್ಲೀನಗೊಳಿಸಿಬಿಟ್ಟಿರುತ್ತಾರೆ. ಹಾಗೆ ತೋರಿಸುತ್ತಲೇ ಮಾತು ಮಿದುವಾಗಿ ಪ್ರಾಣವನ್ನು ಜೀವ(ಪರಮಾತ್ಮ/ಬಯಲು)ದಲ್ಲಿಯೂ ಬೆರೆಸಿಬಿಡುತ್ತಾರೆ. ಆಗ ಅಪ್ಪಣ್ಣನವರ ಆ ಆತ್ಮ ಜೀವನಾಗಿ ಪರಮನಾಗಿ, ತಾನೇ ಶಿವನೋ, ಶಿವನೇ ತಾನೋ ಎಂಬಂತೆ ತಾನೇ ತಾನಾಗುತ್ತಾರೆ. ಬಯಲೊಳಗಣ ಬಯಲಾಗಿ ಪರಮಸ್ಥಿತಿಯನ್ನು ಮಹಾಶರಣ ಅಪ್ಪಣ್ಣನವರು ಮುಟ್ಟಿಬಿಡುತ್ತಾರೆ. ಇಂದಿಗೂ ಬಾಗಲಕೋಟೆ ಜಿಲ್ಲೆಯ ತಂಗಡಗಿಯಲ್ಲಿ ನೀಲಾಂಬಿಕೆಯ ಸ್ಮಾರಕದ ಜೊತೆಯಲ್ಲಿ ಅಪ್ಪಣ್ಣನ ನೆನಹು ಸುಳಿದಾಡುತ್ತಲಿದೆ. ಅಲ್ಲಿ ನಡೆದಾಡುತ್ತಿದ್ದರೆ ಅಪ್ಪಣ್ಣ, ಬಸವಣ್ಣ ಹಾಗೂ ನೀಲಾಂಬಿಕೆಯರ ಈ ಭಾವನಾತ್ಮಕ ನಂಟಿನ ಎಳೆ ನಮ್ಮನ್ನಾವರಿಸುತ್ತದೆ. ಅರೆಕ್ಷಣ ಭಾವುಕರಾದರೆ ಆಶ್ಚರ್ಯವಿಲ್ಲ. ಹೀಗೆ ಮನವನ್ನು ಕಟ್ಟಿ, ಮದ ಮೆಟ್ಟಿದ ಹಡಪದ ಅಪ್ಪಣ್ಣನವರ ಅದ್ಭುತ ಸಾಧನೆಯಿಂದ ಬಸವಣ್ಣ ಬೆರಗಾಗುತ್ತಾನೆ. ಅಪ್ಪಣ್ಣನ ನಡೆಗೆ ಸ್ವತಃ ಬಸವಣ್ಣ ಹೌದಹುದೆನ್ನುತ್ತಾನೆ. ಹೀಗೆ ಸಾಧಕರ ನುಡಿ ಗೌಣವಾದ ನಡೆಗೆ ಅವರೊಳಗಣ ಲಿಂಗವೇ ಮೆಚ್ಚಿ ಹೌದಹುದೆನ್ನಬೇಕು. ಸಾಧನೆಗೆ ಯಾವುದೇ ಮಿತಿ ತಡೆಯಾಗದು, ಮನವೆಂಬ ಅದ್ಭುತದ ಅರಿವನ್ನು ಅರಿತು ನಡೆದಡೆ ನಮ್ಮೊಳಗಣ ಲಿಂಗಮೆಚ್ಚಿ ಹೌದಹುದೆನ್ನದಿರದೆ?.

■■

# ಹಿಂದಿನ ಧರ್ಮಗಳ ತಾತ್ವಿಕತೆಯ ಪ್ರತಿರೋಧ

• ಡಾ. ಬಸವರಾಜ ಸಬರದ

ಹನ್ನೆರಡನೇ ಶತಮಾನದಲ್ಲಿ ಲಿಂಗಾಯತ ಧರ್ಮವು ಬಸವಾದಿ ಶಿವಶರಣರಿಂದ ಸ್ಥಾಪನೆಯಾಯಿತು. ಬಸವಣ್ಣನ ನೇತೃತ್ವದಲ್ಲಿ ಈ ಧರ್ಮ ಹುಟ್ಟಿದ್ದರಿಂದ ಇದಕ್ಕೆ ಬಸವಧರ್ಮವೆಂದೂ, ಇಷ್ಟಲಿಂಗ ಧಾರಣೆ ಕಡ್ಡಾಯವಾಗಿದ್ದರಿಂದ ಲಿಂಗಾಯತ ಧರ್ಮವೆಂದೂ ಕರೆಯುತ್ತಾರೆ. ಲಿಂಗಾಯತ ಧರ್ಮ ಅಸ್ತಿತ್ವಕ್ಕೆ ಬರುವ ಮೊದಲು ಕನ್ನಡನಾಡಿನಲ್ಲಿ ಅನೇಕ ಧರ್ಮಗಳು ಮತ್ತು ಧರ್ಮಾನುಯಾಯಿಗಳು ಇದ್ದರು. ಧರ್ಮ–ಧರ್ಮಗಳಲ್ಲಿ ಗಲಭೆಗಳೇಳುತ್ತಿದ್ದವು. ಬ್ರಹ್ಮಶಿವನ "ಸಮಯ ಪರೀಕ್ಷೆ" ಕೃತಿಯಲ್ಲಿ ಅಂದಿನ ಧಾರ್ಮಿಕ ವಾತಾವರಣ ಹೇಗೆ ಹದಗೆಟ್ಟುಹೋಗಿತ್ತೆಂಬುದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಗಂಗರ ಆಳ್ವಿಕೆಯಲ್ಲಿ ಬೌದ್ಧ–ಜೈನ–ಶೈವ ಮೊದಲಾದ ಧರ್ಮಗಳು ಪ್ರಚಲಿತವಿದ್ದ ಬಗ್ಗೆ ಇತಿಹಾಸದಲ್ಲಿ ಉಲ್ಲೇಖಗಳಿವೆ. ಕ್ರಿಸ್ತ ಶಕ ಪೂರ್ವದಲ್ಲಿಯೇ ಈ ಧರ್ಮಗಳು ಕನ್ನಡನಾಡನ್ನು ಪ್ರವೇಶಿಸಿದ್ದವು. ಈ ಧರ್ಮಗಳು ಮೊದಲಬಾರಿಗೆ ಚಾತುರ್ವರ್ಣ ವ್ಯವಸ್ಥೆಯ ವಿರುದ್ಧ, ವೈದಿಕ ಧರ್ಮದ ಕರ್ಮಟತನದ ಬಗ್ಗೆ ದನಿಯೆತ್ತಿದ್ದವು. ಇದಕ್ಕೆ ಅಶೋಕನ ಶಾಸನಗಳಲ್ಲಿ ಉಲ್ಲೇಖಗಳಿವೆ. ಬಸವಣ್ಣನ ಕಾಲಕ್ಕೆ ಬೌದ್ಧಧರ್ಮ ಭಾರತದಿಂದಲೇ ಕಣ್ಮರೆಯಾಗತೊಡಗಿತ್ತು. ಉಳಿದ ಬೌದ್ಧಾನುಯಾಯಿಗಳು ವಜ್ರಯಾನ ಪಂಥದ ಅನುಯಾಯಿಗಳಾಗಿ ತಾಂತ್ರಿಕ ಆಚರಣೆಯಲ್ಲಿ ತೊಡಗಿದ್ದರು. ಜೈನಧರ್ಮದ ಅನುಯಾಯಿಗಳು ಬರುಬರುತ್ತ ವೈದಿಕರ ಪುನರ್ಜನ್ಮದ ನಂಬಿಕೆಗಳನ್ನು ತಾವೂ ನಂಬಿದರು. ಜೈನರ ಕಠಿಣವಾದ ಆಚರಣೆಗಳಿಂದ ಆ ಧರ್ಮಕ್ಕೆ ಜನರು ಆಕರ್ಷಿತರಾಗಲಿಲ್ಲ. ಇನ್ನು ಶೈವಧರ್ಮದ ಕಾಪಾಲಿಕ–ಕಾಳಾಮುಖ–ಪಾಶುಪತ ಮತ್ತು ಲಕುಲೀಶ ಈ ನಾಲ್ಕು ಶಾಖೆಗಳ ಭಕ್ತರಲ್ಲಿ ಪ್ರತಿರೋಧವಿತ್ತು. ಕಾಪಾಲಿಕರು ಉಗ್ರಗಾಮಿಗಳಾಗಿ ವಾಮಾಚಾರಗಳನ್ನು ಮಾಡುತ್ತಿದ್ದರು, ಗುಡ್ಡಬೆಟ್ಟಗಳಲ್ಲಿ ತಮ್ಮ ಧಾರ್ಮಿಕ ಕೇಂದ್ರಗಳನ್ನು ಸ್ಥಾಪಿಸಿಕೊಂಡಿದ್ದರು. ಕಾಳಾಮುಖರು ಊರುಗಳಲ್ಲೇ ಇದ್ದರೂ ಅನೇಕ ಮೌಢ್ಯಾಚರಣೆಗಳನ್ನು ಆಚರಿಸುತ್ತಿದ್ದರು. ಕ್ರಿ.ಶ. ೫ನೇ ಶತಮಾನದಿಂದ ೯ನೇ ಶತಮಾನದ ಕಾಲವನ್ನು ಶೈವಧರ್ಮದ ಬೆಳವಣಿಗೆಯ ಕಾಲವೆಂದು ಗುರುತಿಸಲಾಗಿದೆ. ಕಾಪಾಲಿಕರು ಉಗ್ರಗಾಮಿಗಳಾಗಿದ್ದರು, ವರ್ಣಾಶ್ರಮ ಧರ್ಮದ ವಿರುದ್ಧ ವೈದಿಕರ ಕರ್ಮಸಿದ್ಧಾಂತದ ವಿರುದ್ಧ ಬಂಡಾಯವೆದ್ದರು.

## ೧

ವರ್ಣಾಶ್ರಮದ ಬಗ್ಗೆ ಕಾಪಾಲಿಕರಿಗಿದ್ದ ಸಿಟ್ಟಿನಿಂದಲೇ, ರಾಮಾನುಜಾಚಾರ್ಯರು ಇವರನ್ನು ತಿರಸ್ಕರಿಸಿದರು. ಕಾಪಾಲಿಕರ ನಾಯಕನಾದ ಉನ್ಮತ್ತ ಭೈರವನಿಗೂ, ಶಂಕರಾಚಾರ್ಯರಿಗೂ ವಾಗ್ವಾದ ಉಂಟಾದ ವಿಷಯ ಆನಂದಗಿರಿಯ "ಶಂಕರವಿಜಯ" ದಿಂದ ತಿಳಿದುಬರುತ್ತದೆ. ರಾಮಾನುಜಾಚಾರ್ಯರು ಕಾಳಾಮುಖರನ್ನು ವೇದವಿರೋಧಿಗಳೆಂದು ಕರೆದಿದ್ದಾರೆ. ಆದರೆ ಕಾಳಾಮುಖರಿಗೆ ವರ್ಣಾಶ್ರಮ ಧರ್ಮದ ಬಗ್ಗೆ ಗೌರವವಿತ್ತೆಂದು ಕರ್ನಾಟಕದ ಶಾಸನಗಳು ಹೇಳುತ್ತವೆ. ಇದಕ್ಕೆ ಬಳ್ಳಿಗಾವೆಯ ಶಾಸನಗಳನ್ನು ಉದಾಹರಿಸಬಹುದಾಗಿದೆ.

ವರ್ಣಾಶ್ರಮ ಧರ್ಮದ ವಿರುದ್ಧ ಬಂಡಾಯವೆದ್ದ ಕಾಪಾಲಿಕರ ಅಸ್ತಿತ್ವವನ್ನೇ ಸಂಪ್ರದಾಯ ಶಕ್ತಿಗಳು ನಾಶಪಡಿಸಿದವು. ಹೀಗಾಗಿ ನಾಥರು–ಸಿದ್ಧರು ಕನ್ನಡನಾಡನ್ನೇ ಬಿಟ್ಟು ಹೊರಟು ಹೋದರು. ಹೀಗಾಗಿ ಬಸವ ಪೂರ್ವಯುಗದಲ್ಲಿ ಸಂಪ್ರದಾಯ ಶಕ್ತಿಗಳು ಪ್ರಬಲವಾಗಿದ್ದವು. ಬಸವ ಪೂರ್ವಯುಗದಲ್ಲಿ ಸ್ಥಾವರಲಿಂಗಕ್ಕೆ ಪ್ರಾಧಾನ್ಯತೆ ನೀಡಲಾಗಿತ್ತು. ಸಾಂಪ್ರದಾಯಿಕ ಜಾತಿ ಜಂಗಮರು ವರ್ಣಾಶ್ರಮ ಧರ್ಮದ ವಿರೋಧಿಯಾಗಿರಲಿಲ್ಲ. ಜನಿವಾರದ ಬ್ರಾಹ್ಮಣರಂತೆ, ಲಿಂಗಿಬ್ರಾಹ್ಮಣರು ಇದ್ದರು. ಅನೇಕ ಶೈವ

'ವಿಜಯಶ್ರೀ ನಿಲಯ' # ೧, ೨ನೇ ಮೇನ್, ೨ನೇ ಕ್ರಾಸ್, ಅಮರಜ್ಯೋತಿ ಲೇಔಟ್ ಕುಪ್ಪಸ್ವಾಮಿ ಪಾರ್ಕ, ಆರ್. ಟಿ. ನಗರ, ಅಂಚೆ: ಹೆಬ್ಬಾಳ, ಬೆಂಗಳೂರು–೫೬೦೦೩೨, ಮೊ–೯೧೧೦೨೦೫೪೫೫

ಸಂಪ್ರದಾಯದ ಆಚರಣೆಗಳು ಹಾಗೆಯೇ ಉಳಿದುಕೊಂಡಿದ್ದವು. ಮರ, ಮಡಿಕೆ, ಕಲ್ಲು, ಮಣ್ಣು ದೇವರುಗಳಾಗಿದ್ದವು. ಮಾರಯ್ಯ, ಬೀರಯ್ಯ, ಕೇತಯ್ಯ, ಕಾಳಯ್ಯರ ಕಾಟ ಅಂದು ಅತಿಯಾಗಿತ್ತು. ವೇದವನ್ನು ಓದುವ, ಕೇಳುವ ಹಕ್ಕು ಜನಸಾಮಾನ್ಯರಿಗಿರಲಿಲ್ಲ. ಮಾಟ-ಮಂತ್ರಗಳು ಮನೆಮಾಡಿಕೊಂಡಿದ್ದವು.

ಧರ್ಮವೆಂದ ಕೂಡಲೇ ಎಲ್ಲರ ಬಾಯಿಯಲ್ಲಿ ಕೇಳಿಬರುವುದು ಹಿಂದೂ ಧರ್ಮವೆಂದು. ಆದರೆ "ಹಿಂದೂ" ಎಂಬುದು ಧರ್ಮವೇ ಅಲ್ಲ. ಅದು ಪ್ರದೇಶದ ಹೆಸರು. ಸಿಂಧೂಪ್ರದೇಶದಲ್ಲಿ ಹಿಂದಿನ ಕಾಲದಲ್ಲಿದ್ದ ಜನಸಮುದಾಯಕ್ಕೆ ಸಿಂಧೂಗಳೆಂದು ಕರೆಯುತ್ತಿದ್ದರು. "ಸಿಂದೂ" ಪದ ಕಾಲಾಂತರದಲ್ಲಿ "ಹಿಂದೂ" ಆಯಿತು. ಹೀಗಾಗಿ ಸಿಂದೂ ಪ್ರದೇಶವೇ ಹಿಂದೂ ಪ್ರದೇಶವಾಯಿತು. ಹಿಂದೂ ಪ್ರದೇಶವೆಂದರೆ ಭಾರತ ಪ್ರದೇಶವೆಂತಲೇ ಅರ್ಥ. "ಜೈಹಿಂದ" ಎಂದರೆ "ಜೈ ಭಾರತ" ಎಂದೇ ಅರ್ಥ. ಸತ್ಯಸ್ಥಿತಿ ಹೀಗಿರುವಾಗ "ಹಿಂದೂ" ಪ್ರದೇಶದ ಪದ "ಹಿಂದೂ" ಧರ್ಮದ ಪದ ಹೇಗಾಗುತ್ತದೆ? ಹಿಂದಿನ ವೇದ-ಆಗಮ-ಸ್ಮೃತಿಗಳಲ್ಲಿ ಹಿಂದೂ ಧರ್ಮವೆಂಬ ಪದವೇ ಇಲ್ಲ. ಮುಸ್ಲೀಂರು-ಕ್ರಿಶ್ಚಿಯನ್ನರು ಈ ದೇಶಕ್ಕೆ ಬಂದ ನಂತರ ಹಿಂದೂ ಪ್ರದೇಶ-ಹಿಂದೂ ಧರ್ಮ ಎಂಬ ಪದಗಳು ಬಳಕೆಗೆ ಬಂದವು. ಮುಸ್ಲೀಮ್‌ರದು ಇಸ್ಲಾಂ ಧರ್ಮ, ಕ್ರಿಶ್ಚಿಯನ್‌ರದು ಕ್ರೈಸ್ತಧರ್ಮವಾಗಿರುವಂತೆ, (ಭಾರತೀಯರದು) ಹಿಂದೂಗಳದು ಹಿಂದೂ ಧರ್ಮ ಎಂದು ಕರೆಯಲಾಯಿತು. ಹಿಂದೂ ದೇಶದಲ್ಲಿ ಅನೇಕ ಧರ್ಮಗಳಿದ್ದವು ಅನೇಕ ಜಾತಿ-ಮತ-ಪಂಥಗಳಿದ್ದವು. ಆದರೆ ಹೊರಗಿನಿಂದ ಬಂದ ಮುಸ್ಲೀಂರಿಗೆ ಮತ್ತು ಕ್ರಿಶ್ಚಿಯನ್‌ರಿಗೆ ಒಕ್ಕಟ್ಟು ತೋರಿಸಲೆಂದು ಹಿಂದೂ ಧರ್ಮ, ಹಿಂದೂ ದೇಶದಂತಹ ಪದಗಳು ಜನಪ್ರಿಯವಾದವು. ನಿಜವಾಗಿ ನೋಡಿದರೆ ಹಿಂದೂ ಧರ್ಮವೆಂಬುದು, ಯಾವುದೂ ಇಲ್ಲ.

೨

ಹಿಂದೂ ಪ್ರದೇಶದಲ್ಲಿ ಅನೇಕ ಧರ್ಮಗಳಿದ್ದವು, ಅನೇಕ ಧರ್ಮ ಸಂಸ್ಥಾಪಕರಿದ್ದರು, ಅನೇಕ ಮತ-ಪಂಥಗಳಿದ್ದವು. ಭಾರತದಲ್ಲಿ ಶೈವ-ಬೌದ್ಧ-ಜೈನ ಧರ್ಮಗಳ ಜತೆಗೆ ಸಿಖ್, ಕ್ರೈಸ್ತ ಧರ್ಮಗಳಿದ್ದವು. ವೇದ-ಸ್ಮೃತಿಗಳ ಮೇಲೆ ನಿಂತ ವೈದಿಕ ಧರ್ಮವಿತ್ತು. ಈ ಎಲ್ಲ ಧರ್ಮಗಳು ಇದೇ ದೇಶದಲ್ಲಿ ಹುಟ್ಟಿ ಬೆಳೆದವುಗಳಾಗಿದ್ದವು. ಆದ್ದರಿಂದ ಹಿಂದೂ ಧರ್ಮವೆಂದರೆ ಈ ಎಲ್ಲ ಧರ್ಮಗಳೆಂದು ಅರ್ಥವಾಗುತ್ತದೆಯೇ ಹೊರತು, ಯಾವುದೇ ಒಂದು ಧರ್ಮವೆಂದು ಅರ್ಥವಾಗುವದಿಲ್ಲ.

ಈ ದೇಶಕ್ಕೆ ಸ್ವಾತಂತ್ರ್ಯ ದೊರೆತ ನಂತರ ಹಿಂದೂಗಳೆಲ್ಲ ಬಹುಸಂಖ್ಯಾತರಾದರು. ಮುಸ್ಲೀಂ-ಕ್ರಿಶ್ಚಿಯನ್‌ರೆಲ್ಲಾ ಅಲ್ಪಸಂಖ್ಯಾತರಾದರು. ಕಾಂಗ್ರೆಸ್ ಪಕ್ಷ ಅಲ್ಪಸಂಖ್ಯಾತರನ್ನು ತನ್ನ ವೋಟ್‌ಬ್ಯಾಂಕ್ ಮಾಡಿಕೊಂಡಾಗ ಈ ದೇಶದಲ್ಲಿ ಭಾರತೀಯ ಜನಸಂಘವು ಹಿಂದೂಗಳನ್ನು ತನ್ನ ಓಟ್‌ಬ್ಯಾಂಕ್ ಮಾಡಿಕೊಂಡಿತು. ಮುಂದೆ ಅದೇ ಭಾರತೀಯ ಜನತಾ ಪಕ್ಷವಾಗಿ ಬೆಳೆದು ಹಿಂದುತ್ವವನ್ನೇ ತನ್ನ ಮುಖ್ಯಪ್ರಣಾಳಿಕೆಯನ್ನಾಗಿ ಮಾಡಿಕೊಂಡಿತು. ಹೀಗೆ ಹಿಂದೂ ಧರ್ಮವೆಂಬುದು ಚುನಾವಣೆಯ ತಂತ್ರಗಾರಿಕೆಯಾಯಿತೇ ಹೊರತು "ಹಿಂದೂ" ಎಂದು ಕರೆಯಿಸಿಕೊಳ್ಳುವ ಯಾವ ಧರ್ಮವೂ ಭಾರತದಲ್ಲಿರಲಿಲ್ಲ. ಹಿಂದಿನ ಕಾಲದಲ್ಲಿ ಶ್ರುತಿ ಹಾಗೂ ಸ್ಮೃತಿಗಳು ವೈದಿಕ ಧರ್ಮದ ನೆಲೆಗಳಾಗಿ ನಿಂತು ತಮ್ಮದೇ ಶ್ರೇಷ್ಠ ಧರ್ಮವೆಂದು ಹೇಳಿಕೊಳ್ಳುತ್ತಿದ್ದವು. ಇದನ್ನೇ ಆಧುನಿಕ ಕಾಲದಲ್ಲಿ ಮುಂದುವರಿಸಿದ ಹಿಂದುತ್ವ ಕೇಂದ್ರಿತ ರಾಜಕೀಯ ಪಕ್ಷಗಳು ಹಿಂದೂ ಧರ್ಮವೆಂದು ಹೇಳುತ್ತಾ, ವೈದಿಕ ಧರ್ಮವೇ ಹಿಂದೂಧರ್ಮವೆಂದು ಜನಸಾಮಾನ್ಯರನ್ನು ದಿಕ್ಕು ತಪ್ಪಿಸಿದವು. ಈ ದೇಶದಲ್ಲಿ ನಡೆದ ಮುಸ್ಲೀಂ ದಾಳಿಗಳಲ್ಲಿ ತತ್ತರಗೊಂಡ ಈ ದೇಶದ ಜನಸಾಮಾನ್ಯರು ಈ "ಹಿಂದೂ ಧರ್ಮ"ವೆಂಬ ಹುಸಿ ಧರ್ಮಕ್ಕೆ ಸಹಜವಾಗಿಯೇ ಮಾರುಹೋದರು. ತಾವು ಹಿಂದೂ ಧರ್ಮೀಯರೆಂದು ಹೆಮ್ಮೆಯಿಂದ ಹೇಳಿಕೊಳ್ಳತೊಡಗಿದರು. ಹೀಗೆ ಹಿಂದೂ ಧರ್ಮವೆಂಬುದು ಜನಪ್ರಿಯವಾಯಿತು.

ಶ್ರುತಿಯೆಂದರೆ ವೇದ, ಸ್ಮೃತಿ ಎಂದರೆ ಧರ್ಮಶಾಸ್ತ್ರ. ಈ ದೇಶದ ಎಲ್ಲ ಆಗು ಹೋಗುಗಳಲ್ಲಿ ಶ್ರುತಿ ಮತ್ತು ಸ್ಮೃತಿಗಳೇ ಪ್ರಧಾನಪಾತ್ರವಹಿಸಿವೆ. ಶ್ರುತಿಯೇ ಇಲ್ಲಿ ಸ್ಮೃತಿಯಾಯಿತು. ಅಂದರೆ ವೇದವೇ ಇಲ್ಲಿ ಧರ್ಮಶಾಸ್ತ್ರವಾಯಿತು. ಇಂತಹ ವೇದಗಳ ತಳಹದಿಯ ಮೇಲೆ ಕಟ್ಟಿದ ಧರ್ಮವೇ ಹಿಂದೂ ಧರ್ಮವೆಂದು ಮನಸ್ಮೃತಿವಾದಿಗಳು ಪ್ರಚಾರ ಮಾಡಿದರು. ಹೀಗಾಗಿ ಹಿಂದೂ ಧರ್ಮವೆಂಬ ಪದ ಇಲ್ಲಿ ಜನಮನದಲ್ಲಿ ಬೇರೂರಿತು.

ವೇದಗಳ ಸಾರವನ್ನೇ ಪ್ರತಿಪಾದಿಸುವ ಮನುಸ್ಮೃತಿಯು ಚಾತುರ್ವರ್ಣ ವ್ಯವಸ್ಥೆಯನ್ನು ಸೃಷ್ಟಿಸಿತು. ಮನುಷ್ಯ-ಮನುಷ್ಯರಲ್ಲಿಯೇ ಭೇದವನ್ನು ಹುಟ್ಟುಹಾಕಿತು.

**ಲೋಕಾನಾಂ ತು ವಿವೃದ್ಧ್ಯರ್ಥಂ ಮುಖಬಾಹೂರುಪಾದತಃ**
**।ಬ್ರಾಹ್ಮಣಂ ಕ್ಷತ್ರಿಯಂ ವೈಶ್ಯಂ ಶೂದ್ರಂ ಚ ನಿರವರ್ತಯತ್।**

(ಮನುಸ್ಮೃತಿ ಅಧ್ಯಾಯ-೧, ಶ್ಲೋಕ-೩೧)

೩

ಈ ಲೋಕಕಲ್ಯಾಣಕ್ಕಾಗಿ ಬ್ರಹ್ಮನು ತನ್ನ ಮುಖದಿಂದ ಬ್ರಾಹ್ಮಣನನ್ನು, ಭುಜದಿಂದ ಕ್ಷತ್ರಿಯನನ್ನು, ತೊಡೆಯಿಂದ ವೈಶ್ಯನನ್ನು, ಪಾದದಿಂದ ಶೂದ್ರನನ್ನು ನಿರ್ಮಿಸಿದನೆಂದು ಮನು ತನ್ನ ಮನುಸ್ಮೃತಿಯಲ್ಲಿ ಸ್ಪಷ್ಟಪಡಿಸಿದ್ದಾನೆ. ಋಗ್ವೇದದ ಪುರುಷ ಸೂಕ್ತದಲ್ಲಿಯೂ ಕೂಡ ಇದೇ ವಿಚಾರ ವ್ಯಕ್ತವಾಗಿರುವುದನ್ನು ಕಾಣಬಹುದಾಗಿದೆ. ಮನುಸ್ಮೃತಿಯ ಮುಂದಿನ ಶ್ಲೋಕಗಳಲ್ಲಿ ಈ ನಾಲ್ಕೂ ವರ್ಣಗಳಲ್ಲಿ ಹಂಚಿಹೋಗಿರುವ ಜನರ ಧರ್ಮಪಾಲನೆ-ಕರ್ತವ್ಯಗಳನ್ನು ತಿಳಿಸಲಾಗಿದೆ. ಬ್ರಾಹ್ಮಣರು-ಕ್ಷತ್ರಿಯರು-ವೈಶ್ಯರು ಮಾತ್ರ ಜನಿವಾರ ಧರಿಸಲು ಅರ್ಹರಾದರು. ಶೂದ್ರರು ಮತ್ತು ಎಲ್ಲ ಮಹಿಳೆಯರು ಇಂತಹ ಧಾರ್ಮಿಕ ವಿಧಿ-ವಿಧಾನಗಳಿಂದ ದೂರವುಳಿದರು. ಈ ಮೂರು ವರ್ಗಗಳ ಸೇವೆ ಮಾಡುವುದೇ ಶೂದ್ರರ ಕರ್ತವ್ಯವಾಯಿತು. ಈ ಚಾತುರ್ವರ್ಣ ವ್ಯವಸ್ಥೆಯಲ್ಲಿ ಬ್ರಾಹ್ಮಣರು ಹುಟ್ಟಿನಿಂದಲೇ ಶ್ರೇಷ್ಠರಾದರೆ, ಶೂದ್ರರು ಹುಟ್ಟಿನಿಂದಲೇ ಕನಿಷ್ಠರಾದರು. ಇನ್ನು ಅಸ್ಪೃಶ್ಯರಂತೂ ಈ ಚಾತುರ್ವರ್ಣ ವ್ಯವಸ್ಥೆಯಲ್ಲಿ ಪ್ರವೇಶ ಪಡೆಯದೇ ಪಂಚಮರಾಗಿ ಹೊರಗೇ ಉಳಿದರು. ಮತ್ತೆ ಬ್ರಾಹ್ಮಣ-ಕ್ಷತ್ರಿಯರಲ್ಲಿ ಭೇದ ಹುಟ್ಟು ಹಾಕಿದ ಮನುಸ್ಮೃತಿಯು ಬ್ರಾಹ್ಮಣನೇ ಎಲ್ಲರಿಗಿಂತಲೂ ಶ್ರೇಷ್ಠ, ಬ್ರಾಹ್ಮಣನೇ ಧರ್ಮದ ಮೂಲವೆಂದು ಹೇಳಿತು. ದೇಶವನ್ನು ಆಳುವ ರಾಜನಿಗಿಂತಲೂ ಬ್ರಾಹ್ಮಣ ಶ್ರೇಷ್ಠನೆಂದು ಸ್ಮೃತಿ ಸಾರಿತು.

**ಬ್ರಾಹ್ಮಣಂ ದಶವರ್ಷಂ ತು ಶತವರ್ಷಂ ಭೂಮಿಪಂ।**
**ಪಿತಾಪುತ್ರೌ ವಿಜಾನೀಯಾದ್ಬ್ರಾಹ್ಮಣಸ್ತುತಯೋಃ ಪಿತಾ ॥**
(ಮನುಸ್ಮೃತಿ ಅಧ್ಯಾಯ-೨, ಶ್ಲೋಕ-೧೩೫)

ಹತ್ತು ವರ್ಷ ವಯೋಮಾನದ ಬ್ರಾಹ್ಮಣನು, ನೂರುವರ್ಷ ವಯೋಮಾನದ ಹಿರಿಯನಾದ ಕ್ಷತ್ರಿಯನಿಗೆ ಸಮಾನನೆಂದು ಹೇಳಿದ ಮನುಸ್ಮೃತಿಯು ವಯಸ್ಸಿನಿಂದ ಸಣ್ಣವನಾದ ಬ್ರಾಹ್ಮಣನೇ ತಂದೆ, ಕ್ಷತ್ರಿಯನೇ ಮಗನು ಎಂದು ಹೇಳಿತು.

**ಸರ್ವಸ್ವಂ ಬ್ರಾಹ್ಮಣಸ್ಯೇದಂ ಯತ್ಕಿಂಚಿಜ್ಜಗತೀಗತಂ।**
**ಶ್ರೇಷ್ಠ್ಯೇನಾಭಿಜನೇನೇದಂ ಸರ್ವಂ ವೈ**
**ಬ್ರಾಹ್ಮಣೋಽರ್ಹತಿಃ ॥**
(ಮನುಸ್ಮೃತಿ ಅಧ್ಯಾಯ-೧, ಶ್ಲೋಕ-೯೬)

ಇಲ್ಲಿರುವ ಎಲ್ಲ ಸರ್ವಸ್ವವೂ ಬ್ರಾಹ್ಮಣನದಾಗಿದೆ. ಅವನು ಹುಟ್ಟುತ್ತಲೇ ಶ್ರೇಷ್ಠನಾಗಿದ್ದಾನೆ. ಹೀಗೆ ಶ್ರೇಷ್ಠ ಜನ್ಮದಲ್ಲಿ ಹುಟ್ಟಿದ್ದರಿಂದ ಈ ಸರ್ವಸ್ವವನ್ನು ಹೊಂದಲು ಅವನು ಅರ್ಹನಾಗುತ್ತಾನೆಂದು ಸ್ಪಷ್ಟಪಡಿಸಿದ ಮನುಸ್ಮೃತಿ ಈ ಜಗತ್ತನ್ನೇ ಬ್ರಾಹ್ಮಣರ ಸೊತ್ತು ಎಂದು ಹೇಳಿತು. ಶೂದ್ರನಿಗೆ ಧರ್ಮೋಪದೇಶ ಮಾಡಬಾರದು. ಅವನಿಗೆ ಜಿಗುಪ್ಸಾ ಸೂಚಕವಾದ ಹೆಸರುಗಳನ್ನಿಡಬೇಕು. ಶೂದ್ರನಿಗೆ ವ್ರತಾಚರಣೆಗಳನ್ನು ಹೇಳಿಕೊಡುವವನು ನರಕಕ್ಕೆ ಹೋಗುತ್ತಾನೆಂದು ಭಯ ಹುಟ್ಟಿಸಲಾಯಿತು. ಸಿಟ್ಟಿಗೆದ್ದರೆ ಬ್ರಾಹ್ಮಣರು ಹೊಸ ಜಗತ್ತನ್ನೇ ಸೃಷ್ಟಿಸಬಲ್ಲರು. ದೇವತೆಗಳ ದೇವತ್ವವನ್ನೇ ಅಳಿಸಬಲ್ಲರೆಂದು ೯ನೇ ಅಧ್ಯಾಯದ ೩೧೫ನೇ ಶ್ಲೋಕದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. "ಧರ್ಮಸ್ಯ ಬ್ರಾಹ್ಮಣೋ ಮೂಲಂ" ಎಂದು ೧೧ನೇ ಅಧ್ಯಾಯದ ೮೩ನೇ ಶ್ಲೋಕದಲ್ಲಿ ಮನುಸ್ಮೃತಿಯಲ್ಲಿ ಹೇಳಲಾಗಿದೆ.

೪

**ಬ್ರಾಹ್ಮಣಃ ಸಂಭವೇನೈವ ದೇವಾನಾಮಪಿ ದೈವತಂ।**
**ಪ್ರಮಾಣಂ ಚೈವ ಲೋಕಸ್ಯ ಬ್ರಹ್ಮಾತ್ರೈವಹಿ ಕಾರಣಂ ॥**
(ಮನುಸ್ಮೃತಿ ಅಧ್ಯಾಯ-೧೧, ಶ್ಲೋಕ-೮೩)

ಬ್ರಾಹ್ಮಣನು ಹುಟ್ಟಿನಿಂದಲೇ ದೇವತೆಗಳಿಗೂ ದೇವತೆಯಾಗಿರುತ್ತಾನೆ. ಈ ಲೋಕದ ಧರ್ಮ ಸಾಧನೆಗೆ ಬ್ರಾಹ್ಮಣನೇ ಪ್ರತ್ಯಕ್ಷ ಪ್ರಮಾಣವಾಗಿರುತ್ತಾನೆಂದು ಹೇಳಿದ ಮನುಸ್ಮೃತಿಯು, ಚಾತುರ್ವರ್ಣದೊಳಗಡೆಯೇ ಇದ್ದ ಇತರ ಮೂರು ವರ್ಣಗಳನ್ನು ತುಚ್ಛೀಕರಿಸಿತು. ಬ್ರಹ್ಮನೇ ಬ್ರಾಹ್ಮಣನಾಗಿರುವುದರಿಂದ ಎಲ್ಲ ದೇವತೆಗಳು ಸಹಿತ ಅವನ ಅಧೀನವಾಗಿವೆಯೆಂದು ಸ್ಪಷ್ಟಪಡಿಸಿತು.

ಇಂತಹ ಶ್ರುತಿ-ಸ್ಮೃತಿಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದ ಶರಣರು ಪ್ರಥಮವಾಗಿ ಇವುಗಳ ವಿರುದ್ಧವೇ ಹೋರಾಟಕ್ಕಿಳಿದರು. ವಿಪ್ರರು ಶ್ರೇಷ್ಠರೆಂದು ಮನುಸ್ಮೃತಿ ಹೇಳಿದರೆ. "ವಿಪ್ರರು ಕೀಳು ನೋಡಾ ಜಗವೆಲ್ಲ ಅರಿಯಲು" ಎಂದು ಬಸವಣ್ಣನವರು ಮೊದಲು ಪ್ರತಿಕ್ರಿಯಿಸಿದರು. ಹಸಿಸುಳ್ಳುಗಳನ್ನು ಹೇಳುವ ವೇದ-ಸ್ಮೃತಿಗಳನ್ನು ಮೊಟ್ಟಮೊದಲು ನೇರವಾಗಿ ತಿರಸ್ಕರಿಸಿದ ಕೀರ್ತಿ ೧೨ನೇ ಶತಮಾನದ ಶರಣರಿಗೆ ಸಲ್ಲುತ್ತದೆ. ಅದುವರೆಗೆ ಚಾತುರ್ವರ್ಣದ ಬಗ್ಗೆ, ಬ್ರಾಹ್ಮಣರ ವಿರುದ್ಧ, ಯಾರೂ ದನಿಯೆತ್ತಿರಲಿಲ್ಲ. ಎಲ್ಲವನ್ನೂ ಅಧ್ಯಯನ ಮಾಡಿ ಮೋಸದ ಮನುಸ್ಮೃತಿಯನ್ನು ಹನ್ನೆರಡನೇ ಶತಮಾನದಲ್ಲಿ ಶರಣರು ತಿರಸ್ಕರಿಸಿದರೆ, ಇಪ್ಪತ್ತನೇ ಶತಮಾನದಲ್ಲಿ ಬಾಬಾಸಾಹೇಬ ಅಂಬೇಡಕರ್ ಅವರು ಮನುಸ್ಮೃತಿಯನ್ನೇ ಸುಟ್ಟು ಹಾಕಿದರು.

ಹೀಗೆ ಬ್ರಾಹ್ಮಣ-ಬ್ರಾಹ್ಮಣ್ಯ-ಶ್ರುತಿ-ಸ್ಮೃತಿಗಳ ವಿರುದ್ಧ ಹನ್ನೆರಡನೇ ಶತಮಾನದಲ್ಲಿ ಶರಣರಿಂದ ಪ್ರಾರಂಭವಾದ ಹೋರಾಟ, ಇಪ್ಪತ್ತನೇ ಶತಮಾನದ ಹೊತ್ತಿಗೆ ಅಂಬೇಡಕರ್‌ರಿಂದ ಹೊಸ ಆಯಾಮ ಪಡೆದುಕೊಂಡಿತು.

ಹನ್ನೆರಡನೇ ಶತಮಾನದ ಶರಣರು ಸುಮ್ಮಸುಮ್ಮನೆ ಬ್ರಾಹ್ಮಣರನ್ನು ವಿಡಂಬಿಸಲಿಲ್ಲ, ಸುಮ್ಮಸುಮ್ಮನೇ ವೇದಗಳನ್ನು ತಿರಸ್ಕರಿಸಲಿಲ್ಲ. ಶತಶತಮಾನಗಳಿಂದ ಶೋಷಣೆಗೆ ಕಾರಣವಾಗಿದ್ದ ವೇದ-ಆಗಮ-ಪುರಾಣ-ಸ್ಮೃತಿ-ಚಾತುರ್ವರ್ಣ ವ್ಯವಸ್ಥೆಗಳ ವಿರುದ್ಧ ಶರಣರು ಸೈದ್ಧಾಂತಿಕ ಹೋರಾಟ ಪ್ರಾರಂಭಿಸಿದರು. ಅವರ ಸಿಟ್ಟು ಇದ್ದದ್ದು ಬ್ರಾಹ್ಮಣರ ಮೇಲಲ್ಲ ಬ್ರಾಹ್ಮಣತ್ವದ ಮೇಲೆ; ಅವರ ಸಿಟ್ಟು ಇದ್ದದ್ದು ಯಾವ ಧರ್ಮದ ಮೇಲೂ ಅಲ್ಲ, ಎಲ್ಲ ಧರ್ಮಗಳಲ್ಲಿರುವ ಮೌಢ್ಯತೆಯ ಮೇಲೆ. ಅಂತೆಯೇ ಅವರು ಮೊಟ್ಟಮೊದಲು ಚಾತುರ್ವರ್ಣ ವ್ಯವಸ್ಥೆಯನ್ನು ತೆಗೆದು ಹಾಕಲು ಪ್ರಯುತ್ನಿಸಿದರು. ಜಾತಿ-ಮತಗಳಲ್ಲಿರುವ ಮೇಲು ಕೀಳುಗಳನ್ನಳಿಸಿ ಹಾಕಲು ಪ್ರಯತ್ನಿಸಿದರು.

**ಹೊಲೆಯ ಹೊಲೆಯ ಎಂದಡೆ ಹೊಲೆಯರೆಂತಪ್ಪರಯ್ಯಾ ಹೊಲೆಯ ಊರೊಳಗಿಲ್ಲವೆ ಅಯ್ಯಾ?**

(ಅಂಬಿಗರ ಚೌಡಯ್ಯ)

**ಆ ಜಾತಿ ಈ ಜಾತಿಯವರೆನಬೇಡ ಹದಿನೆಂಟು ಜಾತಿಯೊಳಗಾವ ಜಾತಿಯಾದಡೂ ಆಗಲಿ**

(ಮಡಿವಾಳ ಮಾಚಿದೇವ)

ಜ

**ಕುಲಜರೆಂದು ಹುಟ್ಟಿ, ಅಂತ್ಯಜರಾದರು ನೋಡಾ ದ್ವಿಜರು....**

(ಸಂಗಮೇಶ ಅಪ್ಪಣ್ಣ)

**ಊರ ಒಳಗಣ ಬಯಲು, ಊರ ಹೊರಗಣ ಬಯಲೆಂದುಂಟೆ? ಊರೊಳಗೆ ಬ್ರಾಹ್ಮಣ ಬಯಲು, ಊರಹೊರಗೆ ಹೊಲೆಬಯಲೆಂದುಂಟೆ? ಎಲ್ಲಿ ನೋಡಿದಡೆಯೂ ಬಯಲೊಂದು!**

-(ಬೊಂತಾದೇವಿ)

ಬ್ರಾಹ್ಮಣರೇ ಶ್ರೇಷ್ಠ, ಮನುಸ್ಮೃತಿಯೇ ಮುಖ್ಯವೆಂದು ಶತಮಾನಗಳಿಂದ ನಂಬಿಕೊಂಡು ಬಂದಿದ್ದ ಜನತೆಗೆ ಶರಣರು ಹಿಂದಿದ್ದ ಧರ್ಮಗಳ ಪೊಳ್ಳುತನವನ್ನು ಬಯಲಿಗೆಳೆದರು.

ಬಸವಣ್ಣ ಮೊದಲಾದ ಶರಣರಿಗೆ ಲಿಂಗಾಯತ ಧರ್ಮವನ್ನು ಸ್ಥಾಪಿಸುವ ಮೊದಲು ಎರಡು ದೊಡ್ಡ ಸವಾಲುಗಳಿದ್ದವು. ಶತಮಾನಗಳಿಂದ ಚಾತುರ್ವರ್ಣ ವ್ಯವಸ್ಥೆಯನ್ನು ಮುಂದುವರಿಸಿಕೊಂಡು, ಸಮಾಜದಲ್ಲಿ ಅಸಮಾನತೆಯನ್ನು ಹುಟ್ಟು ಹಾಕಿದ್ದ ಪುರೋಹಿತಶಾಹಿಗಳು ಮತ್ತು ವೈದಿಕಧರ್ಮ ಒಂದು ಕಡೆಯಿದ್ದರೆ, ಶೈವದ ಕಾಳಾಮುಖರು ಮತ್ತು ಲಿಂಗಿಬ್ರಾಹ್ಮಣರು ಹುಟ್ಟು ಹಾಕಿದ್ದ ಅನೇಕ ಮೌಢ್ಯತೆಗಳು ಮತ್ತೊಂದು ಕಡೆ ಇದ್ದವು. ಅಸಮಾನತೆ ಮತ್ತು ಮೌಢ್ಯತೆಗಳನ್ನು ಹೊಡೆದೋಡಿಸಲು ಶರಣರು ಏಕಕಾಲಕ್ಕೆ ಪುರೋಹಿತಶಾಹಿ ವಿರುದ್ಧ, ಶೈವ ಮೌಢ್ಯಾಚಾರಣೆಗಳ ವಿರುದ್ಧ ಬಂಡಾಯವೇಳಬೇಕಾಯಿತು. ಹೀಗಾಗಿ ಅವರು ವೈದಿಕ ಧರ್ಮದ ತಾತ್ವಿಕತೆಯನ್ನು ವಿರೋಧಿಬೇಕಾಯಿತು. ಇದಕ್ಕೆ ಪೂರಕವಾಗಿದ್ದ ವೇದ-ಆಗಮ-ಸ್ಮೃತಿ-ಪುರಾಣಗಳ ವಿರುದ್ಧ ದನಿಯೆತ್ತಬೇಕಾಯಿತು. ಹೀಗೆ ಶರಣರಿಗೆ ಹೊರಗಿನ ಹಾಗೂ ಒಳಗಿನ ವೈರಿಗಳ ವಿರುದ್ಧ ಬಂಡಾಯವೇಳುವ ಅನಿವಾರ್ಯತೆಯಿತ್ತು. ಹೀಗಾಗಿ ಅವರಿಗೆ ಹೊಸ ಧರ್ಮ ಸ್ಥಾಪಿಸಲು ಸಾಧ್ಯವಾಯಿತು.

"ನಾಲ್ಕು ವೇದ, ಆರು ಶಾಸ್ತ್ರ, ಹದಿನೆಂಟು ಪುರಾಣ, ಇಪ್ಪತ್ತೆಂಟು ದಿವ್ಯಾಗಮಗಳನ್ನು ಯಾಕೆ ನಿರ್ಮಾಣ ಮಾಡಿದಿರಿ?" ಎಂದು ಶರಣನೊಬ್ಬ ಪ್ರಶ್ನಿಸುತ್ತಾನೆ. "ವೇದವೆಂಬುದು ಓದಿನ ಮಾತು, ಶಾಸ್ತ್ರವೆಂಬುದು ಸಂತೆಯ ಸುದ್ದಿ ಪುರಾಣವೆಂಬುದು ಪುಂಡರಗೋಷ್ಠಿ"ಯೆಂದು ಅಲ್ಲಮಪ್ರಭು ಸ್ಪಷ್ಟಪಡಿಸಿದರೆ...., "ವೇದಂಗಳೆಲ್ಲ ಬ್ರಹ್ಮನೆಂಜಲು, ಶಾಸ್ತ್ರಂಗಳೆಲ್ಲ ಸರಸ್ವತಿಯೆಂಜಲು, ಆಗಮಂಗಳೆಲ್ಲ ರುದ್ರನೆಂಜಲು, ಪುರಾಣಗಳೆಲ್ಲ ವಿಷ್ಣುವಿನೆಂಜಲೆಂದು" ಅಂಬಿಗರ ಚೌಡಯ್ಯ ವಿವರಿಸಿದ. "ಶಾಸ್ತ್ರ ಘನವೆಂಬೆನೆ ಕರ್ಮವಭಜಿಸುತ್ತದೆ. ವೇದ ಘನವೆಂಬೆನೆ ಪ್ರಾಣಿವಧೆ ಹೇಳುತ್ತದೆ, ಶ್ರುತಿ ಘನವೆಂಬೆನೆ ಮುಂದಿಟ್ಟು ಅರಸುತ್ತದೆ" ಎಂದು ಬಸವಣ್ಣ ಸ್ಪಷ್ಟಪಡಿಸಿದರೆ, "ಓದಿಓದಿ ವೇದ ವಾದಕ್ಕಿಕ್ಕಿತ್ತು, ಕೇಳಿಕೇಳಿ ಶಾಸ್ತ್ರ ಸಂದೇಹಕ್ಕಿಕ್ಕಿತ್ತು" ಎಂದು ಅಕ್ಕ ಹೇಳಿದಳು."ವೇದಗಳ ಹಿಂದೆ ಹರಿಯದಿರು, ಶಾಸ್ತ್ರಂಗಳ ಹಿಂದೆ ಸುಳಿಯದಿರು, ಪುರಾಣಗಳ ಹಿಂದೆ ಬಳಸದಿರು, ಆಗಮಗಳ ಹಿಂದೆ ತೊಳಲದಿರು" ಎಂದು ಆದಯ್ಯ ಹೇಳಿದರೆ' "ವೇದದಲ್ಲಿ ಕಂಡುದಿಲ್ಲ ಅದು ಮಾತಿನ ಮನೆ, ಶಾಸ್ತ್ರವ ಕೇಳಿ ಮನ ಸಂತೈಸುವುದಿಲ್ಲ, ಪುರಾಣವನೋದಿದರೆ ಪುಣ್ಯಬರುವದಿಲ್ಲವೆಂದು" ವಚನ ಭಂಡಾರಿ ಶಾಂತರಸ ಸ್ಪಷ್ಟಪಡಿಸಿದ.

### ೬

‘ಶಾಸ್ತ್ರವೆಂಬುದು ಮನ್ಮಥ ಶಾಸ್ತ್ರವಯ್ಯ, ವೇದಾಂತವೆಂಬುದು ಮೂಲಮನೋವ್ಯಾಧಿಯಯ್ಯ, ಪುರಾಣವೆಂಬುದು ಮೃತರಾದವರ ಗಿರಾಣವಯ್ಯಾ, ತರ್ಕವೆಂಬುದು ಮರ್ಕಟಾಟವಯ್ಯ, ಆಗಮವೆಂಬುದು ಯೋಗದ ಘೋರವಯ್ಯ...’ ಎಂದು ಸಿದ್ಧರಾಮ ಇವುಗಳ ಅಂತರಂಗವನ್ನು ಬಿಚ್ಚಿಟ್ಟ. “ವೇಧಿಸಿದ ವೇದಂಗಳೆಲ್ಲ ಉರಿದುರಿದುನಿಂದವು, ಸಾಧಿಸಿದ ಶಾಸ್ತ್ರಂಗಳೆಲ್ಲ ಸೋಹೋ ಎಂದಡಗಿದವು.” ಎಂದು ಬಹುರೂಪಿ ಚೌಡಯ್ಯ ಹೇಳಿದ. “ವೇದ ಪ್ರಣವದ ಶೇಷ, ಶಾಸ್ತ್ರ ಸಂಕಲ್ಪದ ಸಂದು, ಪುರಾಣ ಒಣಗಿದ ತಪ್ಪಲು” ಎಂದು ಗುಪ್ತಮಂಚಣ್ಣ ಹೇಳಿದರೆ; “ವೇದದಿಂದ, ಶಾಸ್ತ್ರದಿಂದ, ಯೋಗದಿಂದ, ಅರಿದಿಹೆನೆಂಬಿರಿ ಕೇಳಿರಣ್ಣಾ, ಯೋಗ–ವೇದ–ಶಾಸ್ತ್ರದಂತಲ್ಲ ಶರಣಸ್ಥಲ, ಇಲ್ಲಿ ಗಂಡಳಿದು ಹೆಣ್ಣಾಗಬೇಕೆಂದು” ವಿವರಿಸಿದ ಹಡಪದಪ್ಪಣ್ಣ ನಿಜವಾದ ಸತ್ಯವನ್ನು ಬಯಲಿಗಿಟ್ಟ. “ವೇದವ ಕಲಿತಲ್ಲಿ ಪಾತಕನಲ್ಲದೆ ಜ್ಞಾನಿಯಲ್ಲ, ಶಾಸ್ತ್ರ–ಪುರಾಣವನೋದಿದಲ್ಲಿ ಪಂಡಿತನಲ್ಲದೆ ಜ್ಞಾನಿಯಲ್ಲ” ಎಂದು ಮನಸಂದ ಮಾರಿತಂದೆ ಹೇಳಿದ. “ವೇದಶಾಸ್ತ್ರವನೋದುವದಕ್ಕೆ ಹಾರುವನಲ್ಲ, ಇರಿದು ಮೆರೆವುದಕ್ಕೆ ಕ್ಷತ್ರಿಯನಲ್ಲ, ವ್ಯವಹಾರ ಮಾಡುವದಕ್ಕೆ ವೈಶ್ಯನಲ್ಲ, ಉಳುವ ಒಕ್ಕಲು ಮಗ ನಾನು ನೋಡಯ್ಯ” ಎಂದು ಒಕ್ಕಲಿಗ ಮುದ್ದಣ್ಣ ತಿಳಿಸಿದ. “ನಾಲ್ಕು ವೇದಗಳು ಭೇದಿಸಲರಿಯದೆ, ಹದಿನಾರು ಶಾಸ್ತ್ರ ಶಾಂತಿಯನರಿಯದೆ, ಇಪ್ಪತ್ತೆಂಟು ಪುರಾಣ ಪುಣ್ಯದ ಪುಂಗವನರಿಯದೆ ತೊಳಲಿ ಬಳಲುತ್ತಿವೆಯೆಂದು” ಮನುಮುನಿ ಗುಮ್ಮಟದೇವ ಸ್ಪಷ್ಟಪಡಿಸಿದ. “ಹೊಲೆಹದಿನೆಂಟು ಜಾತಿಯೆಂಬ ಕುಲವಿಲ್ಲ”ವೆಂದು ಮಾದಾರ ಚೆನ್ನಯ್ಯ ಹೇಳಿದ.

ಹೀಗೆ ಅನೇಕ ವಚನಕಾರರು ವೇದ–ಆಗಮ–ಶಾಸ್ತ್ರ–ಪುರಾಣಗಳನ್ನು ವಿರೋಧಿಸುತ್ತ, ಅವುಗಳ ಹುಸಿತನವನ್ನು ಮೊದಲು ಬಾರಿಗೆ ಬಯಲಿಗೆಳೆದರು. ಇವೆಲ್ಲಾ ಚಾತುರ್ವರ್ಣ ಧರ್ಮದ ಮೂಲ ನೆಲೆಗಳಾಗಿದ್ದವು. ಆ ಕಾರಣಕ್ಕೆ ಶರಣರು ಇವುಗಳ ದ್ವಂದ್ವ ನೀತಿಯನ್ನು ಸ್ಪಷ್ಟಪಡಿಸಿದರು. ಪುರೋಹಿತಶಾಹಿ ಎಂದಿಗೂ ನೇರವಾಗಿ ಯುದ್ಧ ಮಾಡುವದಿಲ್ಲ, ಅದು ವೇದ–ಶಾಸ್ತ್ರಗಳೆಂಬ ಶಸ್ತ್ರಾಸ್ತ್ರಗಳ ಮೂಲಕ ಸಮಾಜದಲ್ಲಿ ತನ್ನ ಹಿಡಿತವನ್ನು ಸಾಧಿಸುತ್ತದೆ. ವೇದಗಳನ್ನು ಸ್ವತಃ ದೇವರೇ ಹೇಳಿದನೆಂದು ಹಸಿಸುಳ್ಳುಗಳ ಜಾಲವನ್ನು ಕಟ್ಟಿ ಜನಸಾಮಾನ್ಯರನ್ನು ಮೌಢ್ಯತೆಯ ಕಡೆ ಕರೆದೊಯ್ಯುತ್ತದೆ.

‘ವೇದ ಹೋತಿಂಗೆ ಮಾರಿ, ರಾಮಪುರಾಣ ರಕ್ಕಸಂಗೆ ಮಾರಿ, ಭಾರತ ಪುರಾಣ ಗೋತ್ರಕ್ಕೆ ಮಾರಿ, ಎಲ್ಲಾ ಪುರಾಣ ಕರ್ಮಕ್ಕೆ ಮೊದಲು’ ಎಂದು ಹೇಳಿರುವ ಬಸವಣ್ಣ ವೇದ–ಪುರಾಣಗಳ ಬೌದ್ಧಿಕ ದಿವಾಳಿತನವನ್ನು ಬಯಲು ಮಾಡುತ್ತಲೇ, ವೇದಾದಿಗಳು ಯಜ್ಞಯಾಗಾದಿಗಳ ಮೂಲಕ ಹೇಳುವ ಪ್ರಾಣಿವಧೆಯನ್ನು ಖಂಡಿಸಿದ. ರಾಮಾಯಣ–ಮಹಾಭಾರತಗಳ ಯುದ್ಧದ ಭೀಕರತೆಯನ್ನು, ಪುರಾಣಗಳು ಹೇಳುವ ಕರ್ಮಸಿದ್ಧಾಂತವನ್ನು ಏಕಕಾಲಕ್ಕೆ ತಿರಸ್ಕರಿಸಿದ. “ವೇದಶಾಸ್ತ್ರ ಆಗಮ ಪುರಾಣಗಳು ಕೊಟ್ಟಣ ಕುಟ್ಟಿದ ನುಚ್ಚು ತೌಡು” ಎಂದ ಅಕ್ಕಮಹಾದೇವಿ ಟೀಕಿಸಿದಳು. ಬ್ರಾಹ್ಮಣರು ಯಜ್ಞಯಾಗಾದಿಗಳ ಹೆಸರಿನಲ್ಲಿ ಪ್ರಾಣಿವಧೆ ಮಾಡುವದನ್ನು ಬಸವಣ್ಣ ನೇರವಾಗಿ ವಿರೋಧಿಸುತ್ತಾನೆ.

### ೭

‘ಹೋಮದ ನೆಪದಲ್ಲಿ ಹೋತನ ಕೊಂದು ತಿನ್ನುವ ಅನಾಮಿಕರು ನೀವು” ಎಂದು ವಿಡಂಬಿಸುತ್ತಾನೆ. “ಅಜನೆಂಬ ಹೋತನ ತಿಂದು ವಿಪ್ರರು ಅನಂತ ಪ್ರಾಣಿವಧೆ ಮಾಡಿದರೆಂದು’ ಮೋಳಿಗೆ ಮಾರಯ್ಯ ಖಂಡಿಸುತ್ತಾನೆ. ವೇದನಡುಗಿ, ಶಾಸ್ತ್ರ ಕೆಲಕ್ಕೆ ಸಾರಿ, ತರ್ಕ ಮೂಗುಕಟ್ಟಿ, ಆಗಮ ತೊಲಗಬೇಕಾದರೆ, ಕೂಡಲಸಂಗ ಮಾದಾರ ಚೆನ್ನಯ್ಯನ ಮನೆಯಲ್ಲುಣ್ಣಬೇಕೆಂದು ಹೇಳಿದ ಬಸವಣ್ಣ, ಗೋತ್ರವಾವುದೆಂದು ಕೇಳಿದರೆ ಮಾದಾರ ಚೆನ್ನಯ್ಯನ ಗೋತ್ರವೆಂದು ತಿಳಿಸಿ ಎಂದು ಹೇಳುತ್ತಾನೆ.

ಈ ಸೃಷ್ಟಿ–ಸ್ಥಿತಿ–ಲಯಗಳಿಗೆ ಬ್ರಹ್ಮ–ವಿಷ್ಣು–ರುದ್ರರೇ ಕಾರಣವೆಂಬ ನಂಬಿಕೆಯನ್ನು ಪುರೋಹಿತಶಾಹಿ ಜನಮನದಲ್ಲಿ ಬಿತ್ತಿತ್ತು. ಇದನ್ನು ಶರಣರು ಪ್ರಪ್ರಥಮವಾಗಿ ಅಲ್ಲಗಳೆದರು.

**ಹುಟ್ಟಿಸುವಾತ ಬ್ರಹ್ಮನೆಂಬರು**
**ರಕ್ಷಿಸುವಾತ ವಿಷ್ಣುವೆಂಬರು ನೋಡಾ**
**ಬ್ರಹ್ಮ ತನ್ನ ಶಿರವನೇತಕ್ಕೆ ಹುಟ್ಟಿಸಲಾರ?**
**ವಿಷ್ಣು ತನ್ನ ಮಗನನೇತಕ್ಕೆ ರಕ್ಷಿಸಲಾರ?**

–ಬಸವಣ್ಣ(ಸ,ವ.ಸಂ.೧,ವ:೫೪೭)

ಎಂದು ಪ್ರಶ್ನಿಸುವದರ ಮೂಲಕ ಬಸವಣ್ಣ ಧಾರ್ಮಿಕ ಕ್ಷೇತ್ರದಲ್ಲಿ ದೊಡ್ಡಕ್ರಾಂತಿಯನ್ನೇ ಮಾಡಿದ. ಇದೇ ದಾರಿಯಲ್ಲಿ ಮುನ್ನಡೆದ ಉಳಿದ ಶರಣರು ಅಂದಿನ ಬೂಟಾಟಿಕೆಯ ಧರ್ಮ–ದೇವರುಗಳ ಅಸಲಿತನವನ್ನು ಬಯಲು ಮಾಡಿದರು.

**ಎರಡನುಡಿದ ವಿಷ್ಣುವೇನಾದ? ಎರಡನುಡಿದ ಬ್ರಹ್ಮನೇನಾದ? ಎರಡನುಡಿದ ಇಂದ್ರನೇನಾದ? ಎರಡನುಡಿದ ದಕ್ಷನೇನಾದ?'**

–ಉರಿಲಿಂಗಪೆದ್ದಿ(ಸ.ವ.ಸಂ.೬,ವ:೧೩೩೯)

ಎಂದು ಪ್ರಶ್ನಿಸಿರುವ ಉರಿಲಿಂಗಪೆದ್ದಿ, ಎರಡೆರಡು ನುಡಿದ ಈ ದ್ವೈತಿಗಳ ಮಾತ ನಂಬಬಾರದೆಂದು ಹೇಳುತ್ತಾನೆ. ಎರಡ ನುಡಿದ ಇವರು ತಕ್ಕಶಾಸ್ತಿಗೊಳಗಾದರೆಂದುತನ್ನ ವಚನದಲ್ಲಿ ವಿವರಿಸಿದ್ದಾನೆ. ಉರಿಲಿಂಗಪೆದ್ದಿ ತನ್ನ ಇನ್ನೊಂದು ವಚನದಲ್ಲಿ ವೇದವನ್ನೇ ದೈವವೆಂದು ನಂಬಿದವರ ಪಾಡೇನಾಯಿತೆಂಬುದನ್ನು ಸ್ಪಷ್ಟಪಡಿಸಿದ್ದಾನೆ.

**ವೇದಂಗಳು ದೈವವೆಂಬ**
**ವಿಪ್ರರಂತಹ ಮರುಳರುಂಟೇ ತ್ರಿಜಗದಲ್ಲಿ?**
**ವೇದವೆಂಬುದೊಂದು ಸಾಧಕ–ಸಂಪತ್ತು**
**ವೇದಂಗಳು ಶ್ವೇತ, ಅಗಸ್ತ್ಯ, ವಿಶ್ವಾಮಿತ್ರ ಮುನಿಗಳಿಂದಾದವು.**
**ಕುಲಮದದಿಂದ ಬ್ರಹ್ಮಕೆಟ್ಟ, ಛಲಮದದಿಂದ ಇಂದ್ರಕೆಟ್ಟ**
**ದೈವಮದದಿಂದ ರುದ್ರಕೆಟ್ಟ, ಬಲಮದದಿಂದ ವಿಷ್ಣುಕೆಟ್ಟ**
**ಇಂತೀ ನಾಲ್ಕು ಶ್ರುತಿಗಳು ತಮ್ಮ ಗರ್ವದಿಂದ**
**ನೂಂಕಿಸಿಕೊಂಡವು ಶಿವನ ಅರಮನೆಯ ಬಾಗಿಲಲ್ಲಿ......**

ಉರಿಲಿಂಗ ಪೆದ್ದಿ (ಸ.ವ.ಸಂ.೬,ವ:೧೩೪೦)

೮

ವಿಪ್ರರು ಜಾಣರು, ಹುಟ್ಟುತ್ತಲೇ ಅವರು ಪ್ರತಿಭಾವಂತರೆಂಬ" ಜನಮನದ ನಂಬಿಕೆಯನ್ನು ಉರಿಲಿಂಗಪೆದ್ದಿ ಮೊದಲಬಾರಿಗೆ ಅಳಿಸಿಹಾಕಿದ. ವಿಪ್ರರಂತಹ ಮರುಳರು ಈ ಮೂರು ಜಗತ್ತಿನಲ್ಲಿಲ್ಲವೆಂದು ತಿಳಿಸಿದ. ಕುಲ–ಛಲ–ಬಲ ಮದಗಳಿಂದ ಬ್ರಹ್ಮ–ವಿಷ್ಣು–ರುದ್ರರು ಕೆಟ್ಟು ಹೋದರೆಂದು ವಿವರಿಸಿ ಹೇಳಿದ.

ಇಂತವರ ಮಾತು ಕೇಳಿ ದೇವರು–ದೇವರು ಎಂದು ಬ್ರಹ್ಮಾಂಡದ ಜನರೆಲ್ಲ ಬಳಲುತ್ತಿದ್ದಾರೆ, ತಾನೇ ದೇವರೆಂಬ ಸತ್ಯ ಈ ಮನುಜರಿಗೇಕೆ ತಿಳಿಯುವುದಿಲ್ಲ ಎಂದು ಶರಣರು, ದೇವರ ಕಲ್ಪನೆಯನ್ನು ಬೇರೆ ರೀತಿಯಲ್ಲಿ ವಿವರಿಸಿ ಹೇಳಿದರು.

ಕಲ್ಲು–ಮಣ್ಣು–ಮರ–ಮಡಿಕೆಗಳು ದೇವರಲ್ಲವೆಂದು ಶರಣರು ಸ್ಪಷ್ಟವಾಗಿ ಹೇಳಿದರು. ಕಲ್ಲುದೇವರೆಂಬಿರಿ, ಕಲ್ಲುದೇವರಾದಡೆ ಅದು ವಜ್ರಾಯುಧದಿಂದ ನಾಶವೇಕಾಗುತ್ತದೆ? ಕಟ್ಟಿಗೆ ದೇವರೆಂಬಿರಿ, ಕಟ್ಟಿಗೆ ದೇವರಾದರೆ ಅದು ಅಗ್ನಿಯಿಂದ ಏಕೆ ಸುಟ್ಟು ಹೋಗುತ್ತದೆ? ಮಣ್ಣು ದೇವರೆಂಬಿರಿ, ಮಣ್ಣು ದೇವರಾದರೆ ಅದು ಜಲದಿಂದ ಪ್ರಳಯವೇಕಾಗುತ್ತದೆ? ಎನ್ನುವಂತಹ ಪ್ರಶ್ನೆಗಳನ್ನೆತ್ತುವದರ ಮೂಲಕ ತನ್ನತಾ ತಿಳಿದಡೆ ತಾನೇ ದೇವರು ಎಂದು ಸ್ಪಷ್ಟಪಡಿಸಿದರು. ಬ್ರಹ್ಮ ಸೃಷ್ಟಿಸಿದ್ದು ಮೊದಲನೇ ಸುಳ್ಳು, ವಿಷ್ಣು ರಕ್ಷಿಸಿದ್ದು ಎರಡನೇ ಸುಳ್ಳು, ದೇವೇಂದ್ರ ಅಧಿಪತಿಯೆಂಬುದು ಮೂರನೇ ಸುಳ್ಳು ಎಂದು ತಿಳಿಸಿ ಹೇಳಿದರು. ದೇವತೆಗಳಾದ ಇಂದ್ರ ಅಹಲ್ಯೆಯ ಶೀಲಕೆಡಿಸಿದ್ದೇಕೆ? ಎಂದು ಪ್ರಶ್ನಿಸುವದರ ಮೂಲಕ ಈ ದೇವತೆಗಳ ಹುನ್ನಾರವನ್ನು ಶರಣರು ಬಯಲಿಗೆಳೆದರು.

**ವಿಷ್ಣುವ ಪೂಜಿಸಿ ಮುಡುಹ ಸುಡಿಸಿಕೊಂಬುದ ಕಂಡೆ,**
**ಜಿನನ ಪೂಜಿಸಿ ಬತ್ತಲೆಯಿಪ್ಪುದ ಕಂಡೆ,**
**ಮೈಲಾರನ ಪೂಜಿಸಿ ನಾಯಾಗಿ ಬೊಗಳುವುದು ಕಂಡೆ......**

ಬಸವಣ್ಣ (ಸ.ವ.ಸಂ.೧,ವ:೫೬೯)

**ವಿಷ್ಣು ಬಲ್ಲಿದನೆಂಬೆನೆ**
**ದಶಾವತಾರದಲ್ಲಿ ಭಂಗಬಟ್ಟುದಕ್ಕೆ ಕಡೆಯಿಲ್ಲ**
**ಬ್ರಹ್ಮ ಬಲ್ಲಿದನೆಂಬೆನೆ**
**ಶಿರ ಹೋಗಿ ನಾನಾ ವಿಧಿಯಾದ......,**

ಬಸವಣ್ಣ(ಸ.ವ.ಸಂ.೧, ವ:೫೫೧)

ಬಸವಣ್ಣನು, ಈ ಎರಡು ವಚನಗಳಲ್ಲಿ ಬ್ರಹ್ಮ–ವಿಷ್ಣು–ಜಿನರನ್ನು ಪೂಜಿಸುವದರಿಂದ ಎಂತೆಂತಹ ಅನಾಹುತಗಳಾದವೆಂಬುದನ್ನು ಉದಾಹರಣೆ ಸಹಿತ ವಿವರಿಸಿದ್ದಾನೆ. ಹರಿ–ಹರ ಒಂದೇಯಾಗಲು ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸಿದ ಬಸವಣ್ಣ; ಹರಿಗೆ ಹತ್ತು ಪ್ರಳಯವಾದರೆ, ಬ್ರಹ್ಮಂಗೆ ಅನಂತ ಪ್ರಳಯವೆಂದು ಹೇಳಿ ಹರಂಗೆ ಪ್ರಳಯ ಉಂಟೆಂಬುದ ಬಲ್ಲಡೆ ನೀವು ಹೇಳಿರೆ? ಎಂದು ಸವಾಲು ಹಾಕುತ್ತಾನೆ.

೯

**ಬ್ರಹ್ಮ ವಿಷ್ಣು ಸ್ವತಂತ್ರರಾದರೆ ಬ್ರಹ್ಮನ ತಲೆ ಹೋಗಲೇತಕ್ಕೆ? ಸರಸ್ವತಿಯ ಮೂಗು ಹೋಗಲೇತಕ್ಕೆ? ಬ್ರಹ್ಮನ ಮಗ ಸನತ್ಕುಮಾರ ಒಂಟಿಯಾಗಲೇತಕ್ಕೆ? ಹರಿಯ ಮಗ ಕಾಮ ಉರಿದು ಹೋಗಲೇತಕ್ಕೆ? ನಾರಸಿಂಹನು ವಧೆಗೆ ಒಳಗಾಗಲೇತಕ್ಕೆ? ಕೃಷ್ಣನ ಹದಿನಾರು ಸಾವಿರ ಸ್ತ್ರೀಯರ ಮೇಲೆ ಬೇಡರು ನೆರೆಯಲೇತಕ್ಕೆ ಕಾಳುಬೇಡನ ಬಾಣತಾಗಿ ಕೃಷ್ಣ ಗೋಳುಗುಟ್ಟಿ ಸಾಯಲೇತಕ್ಕೆ?**

ಉರಿಲಿಂಗಪೆದ್ದಿ(ಸ.ವ.ಸಂ.೬,ವ:೧೪೬೪)

ಹೀಗೆ ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಕೇಳುತ್ತಾ ಪುರಾಣ ಪುರುಷರ ಪೊಳ್ಳುತನವನ್ನು ಉರಿಲಿಂಗಪೆದ್ದಿ ಬಯಲಿಗೆಳೆಯುತ್ತಾನೆ. ಅನೇಕ ಸಾಕ್ಷ್ಯಾಧಾರಗಳೊಂದಿಗೆ ತಿಳಿಸಿ ಹೇಳುತ್ತಾನೆ.

ಈ ಜಗದಲ್ಲಿ ಕಾಲಿಡಲು ಇಂಬಿಲ್ಲದಷ್ಟು ದೇವರುಗಳನ್ನು ಪುರೋಹಿತಶಾಹಿ ಹುಟ್ಟುಹಾಕಿದ್ದನ್ನು ಶರಣರು ಖಂಡಿಸಿದರು. ಅನೇಕ ದೇವಾಲಯುಗಳು ಸುಲಿಗೆ ಕೇಂದ್ರಗಳಾಗಿದ್ದವು. ದೇವರ ಹೆಸರಿನಲ್ಲಿ ಕೊಲೆ–ಸುಲಿಗೆಗಳು ನಿತ್ಯ ನಿರಂತರವಾಗಿದ್ದವು. ಇಂತಹ ದೇವರು–ದೈವಗಳನ್ನು ಕಂಡು ಶರಣರು ಸಿಡಿದೆದ್ದರು.

**ಅರಗು ತಿಂದು ಕರಗುವ ದೈವವನೆಂತು ಸರಿಯೆಂಬೆನಯ್ಯಾ? ಉರಿಯಕಂಡಡೆ ಮುರುಟುವ ದೈವವನೆಂತು ಸರಿಯೆಂಬೆನಯ್ಯಾ? ಅವಸರ ಬಂದಡೆ ಮಾರುವ ದೈವವನೆಂತು ಸರಿಯೆಂಬೆನಯ್ಯಾ? ಅಂಜಿಕೆಯಾದಡೆ ಹೂಳುವ ದೈವವನೆಂತು ಸರಿಯೆಂಬೆನಯ್ಯಾ?**

ಬಸವಣ್ಣ (ಸ.ವ.ಸಂ.೧,ವ:೫೫೭)

**ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವರ ಮನೆಯಲಿ ಕಿಚ್ಚೆದ್ದು ಸುಡುವಾಗ ಬಚ್ಚಲನೀರು, ಬೀದಿಯ ಧೂಳ ಹೊಯ್ದು ಬೊಬ್ಬಿಟ್ಟೆಲ್ಲರ ಕರೆವರಯ್ಯಾ.....**

ಬಸವಣ್ಣ (ಸ.ವ.ಸಂ.೧,ವ:೫೮೫)

ಹೀಗೆ ನೂರಾರು ದೈವಗಳನ್ನು ತಿರಸ್ಕರಿಸಿದ ಬಸವಣ್ಣ, ಮಡಕೆ, ಮೊರ,ಕಲ್ಲು, ಮಣ್ಣು, ಕೊಳಗ ದೈವಗಳಲ್ಲವೆಂದು ವಿವರಿಸಿ ಹೇಳಿದ್ದಾನೆ. ಪುರೋಹಿತರ ಮಾತುಗಳನ್ನು ಕೇಳಿ ಇಂತಹ ದೈವಗಳಿಗೆರಗಬಾರದೆಂದು ತಿಳಿಹೇಳಿದ್ದಾನೆ. ಲೋಗರ ಬೇಡಿಕೊಂಬ ಈ ದೈವಗಳು ನಾಯಿಗಿಂತಲೂ ಕಡೆಯಾಗಿವೆಯೆಂದು ವಿಡಂಬಿಸಿದ್ದಾನೆ.

**ಗಂಗಾಧರ ಗೌರೀಶ ದೇವರಲ್ಲ, ಶಂಕರ ಶಶಿಧರ ದೇವರಲ್ಲ ಪಂಚಮುಖ, ದಶಭುಜನುಳ್ಳ ನಂದಿವಾಹನರು ದೇವರಲ್ಲ ತ್ರಿಶೂಲ, ಖಟ್ವಾಂಗಧರರು ದೇವರಲ್ಲ. ಬ್ರಹ್ಮಕಪಾಲ ವಿಷ್ಣು ಕಂಕಾಳ ದಂಡವ ಹಿಡಿದ ಪ್ರಳಯಕಾಲ ರುದ್ರ ದೇವರಲ್ಲ........**

ಬಾಲಸಂಗಯ್ಯ (ಸ.ವ.ಸಂ.೧೩ ವ:೯೦೪)

೧೦

**ಬ್ರಹ್ಮ ದೇವರಲ್ಲ, ವಿಷ್ಣು ದೇವರಲ್ಲ, ರುದ್ರ ದೇವರಲ್ಲ ಈಶ್ವರ ದೇವರಲ್ಲ, ಸದಾಶಿವ ದೇವರಲ್ಲ ಸಹಸ್ರಶಿರ, ಸಹಸ್ರಾಕ್ಷ, ಸಹಸ್ರಪಾದವನುಳ್ಳ ವಿರಾಟ್ಪುರುಷ ದೇವರಲ್ಲ ವಿಶ್ವತೋಪಾದವನುಳ್ಳ ಪರಮ ಪುರುಷ ದೇವರಲ್ಲ, ಸಹಜ ನಿರಾಲಂಬವೇ ತಾನೆಂದರಿದ ಮಹಾಶರಣ ತಾನೇ ದೇವ ನೋಡಾ ಅಪ್ರಮಾಣ ಕೂಡಲಸಂಗಮದೇವಾ.....**

ಬಾಲಸಂಗಯ್ಯ (ಸ.ವ.ಸಂ. ೧೨, ವ:೯೦೩)

ಎಂದು ಹೇಳಿರುವ ಈ ಶರಣ, ಇದುವರೆಗೆ ದೇವರೆಂದು ತಿಳಿದಿದ್ದ ದೇವರುಗಳನ್ನು ದೇವರುಗಳಲ್ಲವೆಂದು ತಿರಸ್ಕರಿಸಿ ತನಗೆ ತಾನೇ ದೇವನೋಡಾ ಎಂದು ಸ್ಪಷ್ಟಪಡಿಸಿದ್ದಾನೆ.

ದೇವಲೋಕ–ಸ್ವರ್ಗಲೋಕ, ಕೈಲಾಸ–ನರಕ ಇಂತಹ ಭೇದಗಳನ್ನು ಅಲ್ಲಗಳೆದ ಶರಣರು ಕೈಲಾಸವೆಂಬುದು ಕಾಲ್ಪನಿಕವಾದದ್ದೆಂದು ಸ್ಪಷ್ಟಪಡಿಸಿದ್ದಾರೆ.

**ಕೈಲಾಸ ಕೈಲಾಸವೆಂದು ಬಡಿದಾಡುವ ಅಣ್ಣಗಳಿರಾ, ಕೇಳಿರಯ್ಯಾ ಕೈಲಾಸವೆಂಬುದೊಂದು ಭೂಮಿಯೊಳಿರುವ ಹಾಳು ಬೆಟ್ಟ. ಅಲ್ಲಿರುವ ಮುನಿಗಳೆಲ್ಲ ಜೀವಗಳ್ಳರು ಅಲ್ಲಿರ್ದ ಚಂದ್ರಶೇಖರನು ಬಹು ಎಡ್ಡ.....**

ಸಿದ್ಧರಾಮ (ಸ.ವ.ಸಂ.೪, ವ:೧೧೬೯)

**ಕೈಲಾಸ ಮರ್ತ್ಯಲೋಕ ಎಂಬರು ಕೈಲಾಸವೆಂದಡೇನೋ, ಮರ್ತ್ಯಲೋಕವೆಂದೊಡೇನೋ? ಅಲ್ಲಿಯ ನಡೆ ನುಡಿ ಒಂದೇ, ಇಲ್ಲಿಯ ನಡೆ ನುಡಿ ಒಂದೆ.....**

ಹಡಪದ ಲಿಂಗಮ್ಮ (ಸ.ವ.ಸಂ.೫, ವ:೧೨೮೬)

ಶರಣರು ದೇವಲೋಕ–ಮರ್ತ್ಯಲೋಕದ ಹುಸಿ ಪರಿಕಲ್ಪನೆಗಳನ್ನು ನೇರವಾಗಿ ಅಲ್ಲಗಳೆದರು. ಬಸವಣ್ಣ ಇನ್ನೂ ಮುಂದುವರಿದು ದೇವಲೋಕ–ಮರ್ತ್ಯಲೋಕ ಬೇರೆ–ಬೇರೆ ಅಲ್ಲವೆಂದು ಸ್ಪಷ್ಟಪಡಿಸಿ ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕವೆಂದು ಹೊಸ ಅರ್ಥ ನೀಡಿದ. ಉಳಿದ ಶರಣರು ಸ್ವರ್ಗ–ನರಕಗಳಿಲ್ಲವೆಂದು ಹೇಳಿದರೆ, ಬಸವಣ್ಣ "ಆಚಾರವೇ ಸ್ವರ್ಗ, ಅನಾಚಾರವೇ ನರಕ" ಎಂದು ಹೊಸ ಪರಿಕಲ್ಪನೆ ಕಟ್ಟಿಕೊಟ್ಟ. ಜನರ ಮನದಲ್ಲಿ ಬೇರೂರಿದ್ದ ಈ ಪರಿಕಲ್ಪನೆಗಳು ಹುಸಿಯಲ್ಲವೆಂದು ತಿಳಿಸಿದ ಬಸವಣ್ಣ ಆ ಪದಗಳಿಗೆ ಬೇರೆ ಅರ್ಥ ನೀಡಿದ. ಹೀಗೆ ಶರಣರು ಅಂದಿನ ಧರ್ಮ–ದೇವರು–ದೇವಾಲಯಗಳ ತಾತ್ವಿಕತೆಗೆ ಪ್ರತಿರೋಧ ಒಡ್ಡಿ ಹೊಸದಾದ ದೇವರು–ಧರ್ಮ–ದೇವಾಲಯಗಳನ್ನು ಕಟ್ಟಿಕೊಂಡರು.

೧೨ನೇ ಶತಮಾನದ ಶಿವಶರಣರು ಕೇವಲ ವೈದಿಕಧರ್ಮದ ಮೌಢ್ಯಾಚರಣೆಗಳನ್ನು ಮಾತ್ರವಿರೋಧಿಸಲಿಲ್ಲ, ಅವರು ಅದಕ್ಕಿಂತ ಪೂರ್ವದಲ್ಲಿದ್ದ ಶೈವಧರ್ಮದ ಹಿಂಸಾಭಕ್ತಿಯನ್ನು, ಅಂಧಸಂಪ್ರದಾಯುಗಳನ್ನು ಸ್ಥಾವರಪೂಜೆಯನ್ನು ವಿರೋಧಿಸಿದ್ದಾರೆ.

೧೧

ವೈದಿಕರ ವಿರೋಧಿಗಳೆಂದು ಭಾವಿಸಬೇಕಾಗಿಲ್ಲ ಮೌಢ್ಯತೆ–ಅಂಧಸಂಪ್ರದಾಯಗಳು ಎಲ್ಲಿಯೇ ಇರಲಿ, ಅವು ಯಾವುದೇ ಧರ್ಮಗಳಲ್ಲಿರಲಿ ಅವುಗಳನ್ನೆಲ್ಲ ಅವರು ಖಂಡಿಸಿದ್ದಾರೆ. ಶೈವಧರ್ಮದ ಅನೇಕ ಭೇದಗಳನ್ನು ಕುರಿತು, ಅದರ ಜಡತ್ವವನ್ನು ಕುರಿತು ವಿವರವಾಗಿ ಖಂಡಿಸಿದ್ದಾರೆ. ಶೈವಧರ್ಮದಲ್ಲಿ ಪಾಶುಪತ, ಕಾಪಾಲಿಕ, ಕಾಳಾಮುಖ, ಲಾಕುಲೀಶ ಹೀಗೆ ನಾಲ್ಕು ಶೈವಗಳ ಬಗೆಗೆ ಅನೇಕರು ಹೇಳಿದ್ದಾರೆ. ಆದರೆ ಈ ವರ್ಗೀಕರಣ ನಾಲ್ಕಕ್ಕೆ ಮಾತ್ರ ಸೀಮಿತವಾಗದೆ ಇನ್ನೂ ಅನೇಕ ಶಾಖೆಗಳು ಶೈವಧರ್ಮದಲ್ಲಿದ್ದವೆಂದು ಕೆಲವು ವಚನಕಾರರು ಹೇಳಿದ್ದಾರೆ. ಶೈವಧರ್ಮದ ವಿವರಗಳನ್ನು ನೀಡಿದ ಆದಯ್ಯನ ವಚನದ ಮೂಲಕ ಈ ಚರ್ಚೆಯನ್ನು ಪ್ರಾರಂಭಿಸಬಹುದಾಗಿದೆ.

**ಶುದ್ಧ ಮಿಶ್ರ ಸಂಕೀರ್ಣಪೂರ್ವಮಾರ್ಗ ಶೈವಂಗಳಲ್ಲಿ**
**ಕರ್ಮಭಕ್ತಿಯಲ್ಲದೆ ನಿರ್ಮಳಸದ್ಭಕ್ತಿಯೆಲ್ಲಿಯದೊ?**
**ಒಮ್ಮೆಧರಿಸಿ ಒಮ್ಮೆ ಇರಿಸಿ, ಶುಚಿಯಾದೆನೆಂದು**
**ಅಶುಚಿಯಾದನೆಂದು ಭವಿಯಾಗುತ್ತೊಮ್ಮೆ,**
**ಭಕ್ತನಾಗುತ್ತೊಮ್ಮೆ ಒಪ್ಪಚ್ಚಿ ಹೊಲೆ, ಒಪ್ಪಚ್ಚಿ ಕುಲವೆಂದು**
**ತೆರನನರಿಯದಿಪ್ಪ ಬರಿಯ ಶುದ್ಧಶೈವವಂ ಬಿಟ್ಟು......**

ಆದಯ್ಯ (ಸ.ವ.ಸಂ.೬, ವ:೧೧೧೧)

ದೀರ್ಘವಾದ ಆದಯ್ಯನ ಈ ವಚನದಲ್ಲಿ ಶೈವಧರ್ಮದ ದ್ವಂದ್ವ ನೀತಿಯನ್ನು, ಕರ್ಮಠತನವನ್ನು ಮೌಢ್ಯತೆಯನ್ನು ನೇರವಾಗಿ ಖಂಡಿಸಲಾಗಿದೆ. ಶೈವರಲ್ಲಿ ಕೇವಲ ಕರ್ಮಭಕ್ತಿಯ ಪ್ರಸ್ತಾಪವೇ ಹೊರತು, ಅದು ನಿರ್ಮಲಭಕ್ತಿಯಲ್ಲವೆಂದು ಸ್ಪಷ್ಟಪಡಿಸಿದ್ದಾನೆ. ಒಮ್ಮೆ ಭವಿಯಾಗುವದು ಮತ್ತೊಮ್ಮೆ ಭಕ್ತನಾಗುವುದು ಶೈವಧರ್ಮದ ದ್ವಂದ್ವ ನೀತಿಯನ್ನು ಹೇಳುತ್ತದೆ. ಒಂದೊಂದು ಕಡೆ ಒಂದೊಂದು ರೀತಿಯ ಧಾರ್ಮಿಕಾಚರಣೆಗಳನ್ನು ಹೇಳುವ ಶೈವಧರ್ಮಕ್ಕೆ ಒಂದು ಸ್ಪಷ್ಟವಾದ ಧಾರ್ಮಿಕ ಸಿದ್ಧಾಂತವಿಲ್ಲವೆಂದು ಶರಣರು ಸ್ಪಷ್ಟಪಡಿಸಿದ್ದಾರೆ. ಇದೇ ಶೈವಧರ್ಮವು ಮುಂದಿನ ವರ್ಷಗಳಲ್ಲಿ ವೈದಿಕರೊಂದಿಗೆ ಸೇರಿಕೊಂಡಿತು. ಇಂದಿಗೂ ವೈದಿಕಧರ್ಮದಲ್ಲಿ ಶೈವಬ್ರಾಹ್ಮಣರು ಮತ್ತು ವೈಷ್ಣವ ಬ್ರಾಹ್ಮಣರು ಎಂಬ ಎರಡು ಪಂಗಡಗಳಿವೆ.

ಶೈವರು ಮೊದಲಿನಿಂದಲೂ ಮಾಡುತ್ತ ಬಂದಿದ್ದ ಸ್ಥಾವರಪೂಜೆ,ಹವನ, ಹೋಮ ಇವುಗಳನ್ನೆಲ್ಲ ಶರಣರು ನೇರವಾಗಿಯೇ ಖಂಡಿಸಿದ್ದಾರೆ.

**ಶೈವ ಸಿದ್ಧಾಂತಿಗಳಪ್ಪ ಕರ್ಮಕಾಂಡಿಗಳು**
**ಸ್ಥಾವರಲಿಂಗದೆಡೆಯಲ್ಲಿ ಹವನ ಹೋಮಾದಿ**
**ಪವಿತ್ರಕಾರ್ಯವ ಕೈಕೊಂಡೆಡೆಯಲ್ಲಿ ಉಚ್ಛಿಷ್ಟಾದಿ**
**ಪಂಚಸೂತಕಗಳೆಂಟಿದಡೆ ಅವರು ಆ ಸೂತಕವ**
**ಮಾನಿಸದೆ ಪರಿಶುದ್ಧಭಾವದಿಂದಿರ್ಪರು...**

ಚೆನ್ನಬಸವಣ್ಣ(ಸ.ವ.ಸಂ.೩, ವ:೧೬೮೭)

ಶೈವಸಿದ್ಧಾಂತಿಗಳನ್ನು ಚೆನ್ನಬಸವಣ್ಣ ಕರ್ಮಕಾಂಡಿಗಳೆಂದು ಕರೆದಿದ್ದಾನೆ. ಅವರು ಹವನ, ಹೋಮಗಳನ್ನು ಮಾಡುತ್ತಿದ್ದರೆಂದು ಸ್ಪಷ್ಟಪಡಿಸಿದ್ದಾನೆ.

೧೨

ಪಂಚಸೂತಕಗಳ ಬಗೆಗೆ ಚೆನ್ನಬಸವಣ್ಣ ವಚನದಲ್ಲಿ ವಿವರವಾಗಿ ತಿಳಿಸಿದ್ದಾನೆ. ಶೈವಾಚರಣೆ ಮಾಡುವವರೆಲ್ಲ ವ್ರತಗೇಡಿಗಳೆಂದು ಹೇಳಿದ್ದಾನೆ. ವ್ರತವೆಂಬುದು ಹೊರಗಿಲ್ಲ, ಅದು ಒಳಗಿದೆಯೆಂದು ವಿವರಿಸಿದ್ದಾನೆ, ಶೈವ ಪದವು ಚೆನ್ನಬಸವಣ್ಣನ ವಚನಗಳಲ್ಲಿಯೇ ಹೆಚ್ಚಾಗಿ ಬಳಕೆಯಾಗಿದೆ.

**ಶೈವಕ್ಕೆ ಕೈಲಾಸ, ವೈಷ್ಣವಕ್ಕೆ ವೈಕುಂಠ, ಬೌದ್ಧಂಗೆ**
**ಮೋಕ್ಷಗಾಮಿನಿಯೆಂಬ ಗೊತ್ತುಗಳು ಬೇರಾದಲ್ಲಿ, ಪೃಥ್ವಿ**
**ಅಪ್ಪು ತೇಜ ವಾಯು ಆಕಾಶ ಬೇರಾದುದಿಲ್ಲ....**

ಅರಿವಿನ ಮಾರಿತಂದೆ(ಸ.ವ.ಸಂ.೬, ವ:೫೨೭)

ಶೈವರು ಕೈಲಾಸದ ಬಗೆಗೆ ನಂಬಿಕೆಯಿಟ್ಟರೆ, ವೈಷ್ಣವರು ಅದಕ್ಕೆ ವೈಕುಂಠವೆಂದು ಕರೆಯುತ್ತಾರೆ. ಶರಣರು ಈ ಕೈಲಾಸ, ವೈಕುಂಠಗಳನ್ನು ನಂಬುವವರಲ್ಲ, ಅವರು ಕಾಯಕವೇ ಕೈಲಾಸವೆಂದು ಬಾಳಿದವರು. ಹೀಗಾಗಿ ಉಳಿದ ಧರ್ಮಗಳಿಗಿಂತ ಶರಣರು ಸ್ಥಾಪಿಸಿದ ಲಿಂಗಾಯತ ಧರ್ಮ ತುಂಬ ಭಿನ್ನವಾಗಿದೆ ಮತ್ತು ವಿಶಿಷ್ಟವಾದುದಾಗಿದೆ.

**ನವಿರೂ ನೆಳಲೂ ಇಲ್ಲದಂದು,ಷಡು ಶೈವರಿಲ್ಲದಂದು**
**ಬ್ರಹ್ಮಾಂಡ ಭಾಂಡ ಭಾಂಡಾವಳಿಗಳಿಲ್ಲದಂದು ಪಿಂಡಾಂಡ**
**ಅಂಡ ಪಿಂಡಾವಳಿಗಳಿಲ್ಲದಂದು ಅಖಂಡಿತ**
**ಜ್ಯೋತಿರ್ಮಯಲಿಂಗ ಶರಣನ ಲೀಲೆಯಿಂದಾದ**
**ಏಳುತೆರದ ಗಣಘನ? ಪಿಂಡವಂ ಕಂಡು ಅಖಂಡಿತನಾಗಿ**
**ಬದುಕಿದೆನಯ್ಯಾ ಗುಹೇಶ್ವರಾ**

ಅಲ್ಲಮಪ್ರಭು.(ಸ.ವ.ಸಂ.೨, ವ:೧೨೮೯)

ಅಲ್ಲಮಪ್ರಭು ಇಲ್ಲಿ ಶೈವರಲ್ಲಿ ಆರು ಶೈವಗಳಿವೆಯೆಂದು ಹೇಳಿದ್ದಾನೆ. ಇವು ಯಾವೂ ಇರದೇ ಇದ್ದಾಗ ಅಖಂಡ ಜ್ಯೋತಿರ್ಮಯಲಿಂಗ ಒಂದೇ ಇದ್ದಿತೆಂದು ಪ್ರಭು ಹೇಳಿದ್ದಾನೆ. ಶರಣರ ಲೀಲೆಯಿಂದ, ಶರಣರ ಕಾಯಕ ತತ್ವದಿಂದ ಬದುಕು

ಘನತೆಯಿಂದ ಕೂಡಿದ್ದೆನಿಸುತ್ತದೆ; ಅದನ್ನೇ ನಿಜವಾದ ಬೆಳಕೆಂದು ತಿಳಿಸಿದ್ದಾನೆ.

**ಆರು ಶೈವದ ಭೇದ**
**ಮೂರು ಶೈವದ ಭಜನೆ**
**ಷಡುದರ್ಶನದ ತರ್ಕ**
**ಇವನೆಲ್ಲವನುದ್ಧರಿಸ ಬಂದ ಪ್ರಭುದೇವರು.**
**ಬಸವಣ್ಣ, ಚೆನ್ನಬಸವಣ್ಣ**
**ಇವರೊಳಗಾದ ಏಳ್ನೂರೆಪ್ಪತ್ತು ಅಮರಗಣಂಗಳು**
**ಸ್ವತಂತ್ರ ಸಂಬಂಧಿಗಳಪ್ಪ ಪ್ರಥಮರು**
**ಶಿವಾಚಾರ ಚಕ್ರವರ್ತಿಗಳು**
**ಸತ್ಯರು ನಿತ್ಯರು ಸದ್ಯನ್ಮುಕ್ತರು....**

ಕಲಕೇತಯ್ಯ. (ಸ.ವ.ಸಂ.೭, ವ:೪೦)

ಕಲಕೇತಯ್ಯನ ಈ ವಚನದಿಂದ, ಅಲ್ಲಮನು ಆರು ಶೈವಗಳ ಭೇದವನ್ನರಿತಿದ್ದನೆಂಬುದು ಸ್ಪಷ್ಟವಾಗುತ್ತದೆ.

೧೩

ಷಡ್ದರ್ಶನಗಳ ಬಗೆಗೆ ಅನೇಕ ಧರ್ಮಗಳಲ್ಲಿ ಪ್ರಸ್ತಾಪವಿದೆ. ಇವೆಲ್ಲವನ್ನೂ ಶರಣರು ತಿಳಿದುಕೊಂಡು ಹೊಸ ಧರ್ಮವನ್ನು ಹುಟ್ಟುಹಾಕಿದರು. ಇದನ್ನೇ ಶರಣಧರ್ಮವೆನ್ನಬಹುದು, ವಚನಧರ್ಮವೆನ್ನಬಹುದು, ಬಸವಧರ್ಮವೆನ್ನಬಹುದು, ಲಿಂಗಾಯತ ಧರ್ಮವೆನ್ನಬಹುದು.

**ಅಂಗದ ಮೇಲೆ ಲಿಂಗದ ಧರಿಸಿ ಶಿವಭಕ್ತರೆಂದು**
**ಹೇಳಿ, ಶಿವಾಚಾರ ಮಾರ್ಗವ ಬಿಟ್ಟು ಭವಿಶೈವ ದೈವಗಳಿಗೆ**
**ಲಿಂಗವಡಿಯಾಗಿ ಅಡ್ಡಬಿದ್ದು ಶರಣೆಂಬ ಹೊಲೆಯರಿಗೆ**
**ಶಿವಭಕ್ತ ಜನ್ಮತೀರಿ ಚಂದ್ರಸೂರ್ಯರುಳ್ಳನ್ನಕ್ಕರ ಇಪ್ಪತ್ತೆಂಟು**
**ಕೋಟಿ ನರಕ ತಪ್ಪದು......**

ಗುರುಸಿದ್ಧದೇವರು. (ಸ.ವ.ಸಂ.೧೦, ವ:೬೭೮)

ಶರಣರು, ಶೈವರಿಗೆ ಭವಿಗಳೆಂದು ಕರೆದಿರುವುದು ಈ ವಚನದಿಂದ ತಿಳಿದುಬರುತ್ತದೆ. ಅಂಗದ ಮೇಲೆ ಲಿಂಗವಧರಿಸಿ ಶಿವಾಚಾರ ಮಾರ್ಗದಲ್ಲಿ ನಡೆಯಬೇಕೇ ಹೊರತು ಶೈವಮಾರ್ಗದಲ್ಲಲ್ಲವೆಂಬುದನ್ನು ಈ ವಚನಕಾರ ಸ್ಪಷ್ಟಪಡಿಸಿದ್ದಾನೆ. ಶರಣಮಾರ್ಗವನ್ನು ಬಿಟ್ಟು ಶೈವಮಾರ್ಗವನ್ನನುಸರಿಸುವರು ನರಕಕ್ಕೆ ಹೋಗುತ್ತಾರೆಂಬುದನ್ನು ಈ ವಚನಕಾರ ಹೇಳಿದ್ದಾನೆ. ಊರಹೊರಗಿರುವವರು ಹೊಲೆಯರಲ್ಲ, ಸ್ಥಾವರಗಳಿಗೆ ಅಡ್ಡಬಿದ್ದು ಶರಣೆನ್ನುವವರು ಹೊಲೆಯರೆಂದು ತಿಳಿಸಿದ್ದಾನೆ.

**ಹಾದರದ ಮಿಂಡನ ಹತ್ತಿರ ಮಡಗಿಕೊಂಡು**
**ಮನೆಯ ಗಂಡನ ಒಲ್ಲೆನೆಂದಡೆ ಒಲಿವನೆ**
**ತಾ ಶಿವಭಕ್ತನಾಗಿ, ತನ್ನಂಗದ ಮೇಲೆ ಲಿಂಗವಿದ್ದು**
**ಮತ್ತೆ ಭಿನ್ನಶೈವಕ್ಕೆರಗುವುದೆ ಹಾದರ,**
**ಕೂಡಲಸಂಗಯ್ಯನು ಅವರ ಮೂಗಕೊಯ್ಯದೆ ಮಾಣ್ಬನೆ**

ಬಸವಣ್ಣ (ಸ.ವ.ಸಂ.೧, ವ:೧೪೧೩)

ಶೈವಕ್ಕೆರಗುವುದೇ ಹಾದರವೆಂದು ವ್ಯಾಖ್ಯಾನಿಸಿರುವ ಬಸವಣ್ಣ ಈ ವಚನದಲ್ಲಿ ಶೈವಸಿದ್ಧಾಂತವನ್ನು ನೇರವಾಗಿ ಖಂಡಿಸಿದ್ದಾನೆ. ಇಷ್ಟಲಿಂಗವ ಮರೆತು ಸ್ಥಾವರವ ಪೂಜಿಸುವುದು ಗಂಡನನ್ನು ಬಿಟ್ಟು ಮಿಂಡನ ಬಳಿಗೆ ಹೋದಂತೆ; ಅದು ಹಾದರವಾಗುತ್ತದೆಂದು ಬಸವಣ್ಣ ಈ ವಚನದಲ್ಲಿ ಸ್ಪಷ್ಟಪಡಿಸಿದ್ದಾನೆ. ಇದೇ ಮಾತನ್ನು ಮಡಿವಾಳ ಮಾಚಿದೇವ ಮುಂದುವರಿಸುತ್ತಾನೆ.

**ಹರಹರ ಶಿವ ಶಿವ ಗುರುವೆ ಕರಸ್ಥಲದ ಶಾಂತಲಿಂಗ**
**ಜಂಗಮ ಭಕ್ತ ಶರಣಗಣಂಗಳ ಚರಣವ ನೆನೆಯದೆ,**
**ಧರೆಯ ಮೇಲೆ ನೆಲೆಸಿಪ್ಪ ಭವಿಶೈವದೈವಂಗಳ ನೆನೆವ**
**ನರಕಿನಾಯಿಗಳನೇನೆಂಬೆನಯ್ಯಾ ಕಲಿದೇವಯ್ಯ**

ಮಡಿವಾಳ ಮಾಚಿದೇವ (ಸ.ವ.ಸಂ.೮, ವ:೭೭೩)

ಮಡಿವಾಳ ಮಾಚಿದೇವನೂ ಕೂಡ ಶೈವ ದೈವಂಗಳ ನೆನೆವವನೇ ಭವಿಯೆಂದು ಹೇಳಿದ್ದಾನೆ. ಹೀಗೆ ಶರಣರು ಕೇವಲ ನಾಸ್ತಿಕರನ್ನು ಮಾತ್ರ ಭವಿಗಳೆಂದು ಕರೆಯುವುದಿಲ್ಲ, ಆಸ್ತಿಕರಾಗಿರುವ ಶೈವ– ವೈಷ್ಣವ ಸಂಪ್ರದಾಯವಾದಿಗಳನ್ನು, ಪುರೋಹಿತರನ್ನು ಭವಿಗಳೆಂದು ಕರೆದಿದ್ದಾರೆ, ರೇಚದ ಬಂಕಣ್ಣನೆಂಬ ಶರಣ ಶೈವರಲ್ಲಿ ಜಾತಿಶೈವರು– ಅಜಾತಿಶೈವರೆಂದು ಎರಡು ಭಾಗಮಾಡಿ ವಿವರಿಸಿದ್ದಾನೆ. ಜಾತಿಶೈವರು ಭೋಗಸ್ತ್ರೀಯರಂತಿದ್ದರೆ, ಅಜಾತಿಶೈವರು ಕುಟಿಲಸ್ತ್ರೀಯರಂತಿದ್ದಾರೆಂದು ಹೇಳಿದ್ದಾನೆ.

೧೪

ಹೀಗೆ ಶರಣರು ವೈದಿಕ ಧರ್ಮದ ಮೌಢ್ಯತೆಯನ್ನು ಖಂಡಿಸಿದಂತೆ, ಶೈವಧರ್ಮದ ಮೌಢ್ಯತೆಯನ್ನು, ಸ್ಥಾವರ ಪೂಜೆಯನ್ನು ಖಂಡಿಸಿದ್ದಾರೆ.

ತಮಗಿಂತ ತುಂಬ ಪ್ರಾಚೀನವಾಗಿದ್ದ ಶೈವ, ವೈಷ್ಣವ ಧರ್ಮಗಳ ಸಿದ್ಧಾಂತಗಳನ್ನು ವಿರೋಧಿಸಿದ ಶರಣರು ತಮ್ಮದೇ ಆದ ಲಿಂಗಾಯತವೆಂಬ ಹೊಸ ಧರ್ಮವನ್ನು ಕಟ್ಟಿಕೊಂಡರು. ಕ್ರಿ.ಶ. ೬ನೇ ಶತಮಾನದಿಂದ ೯ನೇ ಶತಮಾನದ ವರೆಗೆ ತಮಿಳುನಾಡಿನಲ್ಲಿದ್ದ ೬೩ ಪುರಾತನರು ಕೂಡ ಶೈವ

ಪರಂಪರೆಯಿಂದಲೇ ಬೆಳೆದು ಬಂದವರಾಗಿದ್ದಾರೆ. ೧೨ನೇ ಶತಮಾನದ ಶರಣರಿಗೆ ೬೩ ಪುರಾತನರ ಬಗೆಗೆ ಗೌರವವಿದೆ, ಪೂಜ್ಯಭಾವನೆಯಿದೆ. ಅದನ್ನು ಅನೇಕ ವಚನಗಳಲ್ಲಿ ವ್ಯಕ್ತಪಡಿಸಿದ್ದಾರೆ. ಆದರೆ ಅವರ ಹಿಂಸಾಭಕ್ತಿಯನ್ನು ಮೂಢ ಆಚರಣೆಗಳನ್ನು ಶರಣರು ನೇರವಾಗಿಯೇ ಖಂಡಿಸಿದ್ದಾರೆ. ಸಂಗಂ ಸಾಹಿತ್ಯದಲ್ಲಿ ಉಲ್ಲೇಖಗೊಂಡಿರುವ "ಕೋಚ್ಚಂಗಣಾನ್" ಎಂಬಾತನೇ ೧ನೇ ಪುರಾತನ ಶಿವಭಕ್ತನಾಗಿದ್ದನೆಂದು, ೯ನೇ ಶತಮಾನದಲ್ಲಿದ್ದ "ಸುಂದರಮೂರ್ತಿ" ಎಂಬಾತನೇ ೬೩ನೇ ಪುರಾತನ ಶಿವಭಕ್ತನಾಗಿದ್ದನೆಂದು ತಿಳಿದುಬರುತ್ತದೆ.

ತಮಿಳುನಾಡಿನ ಈ ೬೩ ಪುರಾತನರ ಕಥಾನಕಗಳು ೧೨ನೇ ಶತಮಾನದ ಶಿವಶರಣರ ಕಾಲದಲ್ಲಿ ಪ್ರಚಲಿತದಲ್ಲಿದ್ದವು ಅರ್ಜುನವಾಡ ಶಾಸನದಲ್ಲಿ ಹೇಳಿರುವಂತೆ, ಬಸವಣ್ಣನವರ ವಂಶಜರು "ತೇಸಷ್ಟಿ ಪುರಾತನರ ಪಾದಾರ್ಚಕರು" ಆಗಿದ್ದರೆಂದು ತಿಳಿದುಬರುತ್ತದೆ. ಆದರೆ ಬಸವಣ್ಣ ಮೊದಲಾದ ಶರಣರು ೬೩ ಪುರಾತನರ ಪಾದಾರ್ಚಕರಾಗಲಿಲ್ಲ. ಅತ್ಯಂತ ನಯವಿನಯದಿಂದಲೇ ಅವರ ಹಿಂಸಾ ಭಕ್ತಿಯನ್ನು ಬಸವಣ್ಣ ವಿರೋಧಿಸುತ್ತಾನೆ. ಇದು ಲಿಂಗಾಯತ ಧರ್ಮದ ವಿಶೇಷತೆಯಾಗಿದೆ. ಈ ೬೩ ಪುರಾತನರಲ್ಲಿ ಸಿರಿಯಾಳ, ಚಂಗಳೆ, ನಂಬಿಯಣ್ಣ, ಬಲ್ಲಾಳ, ಬೊಮ್ಮಯ್ಯ, ಕಣ್ಣಪ್ಪ, ಸಾಮವೇದಿ, ಬಾಣ, ಮಯೂರ, ಓಹಿಲಯ್ಯ, ಕೋಳೂರ ಕೊಡಗೂಸು, ದೀಪದ ಕಲಿಯಾರ ಈ ಮೊದಲಾದ ಪುರಾತನರು ಪ್ರಸಿದ್ಧರಾಗಿದ್ದಾರೆ. ಕ್ರಾಂತಿಕಾರಿ ಕವಿ ಹರಿಹರನು "ಸಾಮವೇದಿ" ಬಗೆಗೆ ರಗಳೆಕಾವ್ಯವನ್ನು ರಚಿಸಿದ್ದಾನೆ. ೬೩ ಪುರಾತನರಲ್ಲೊಬ್ಬನಾದ ಸಾಮವೇದಿಯ ಮಾಯಾಜಾಲ–ಇಂದ್ರಜಾಲದ ಭಕ್ತಿಯನ್ನು ತಿರಸ್ಕರಿಸಿದ ಶಿವ, ಶ್ವಪಚಯ್ಯನ ಮುಗ್ಧಭಕ್ತಿಗೆ ಒಲಿಯುತ್ತಾನೆ. ಭಕ್ತಿ ಮತ್ತು ಪಾಂಡಿತ್ಯದ ಅಮಲಿನಲ್ಲಿ ಮೆರೆಯುತ್ತಿದ್ದ ಸಾಮವೇದಿಯ ಅಹಂಭಾವವನ್ನು ಶಿವ ಖಂಡಿಸುತ್ತಾನೆ. ಕೊನೆಗೆ ಸಾಮವೇದಿ ಪಂಡಿತನು, ಶ್ವಪಚಯ್ಯನ ಶಿಷ್ಯನಾಗಿ ಸದ್ಭಕ್ತನಾಗುತ್ತಾನೆ. ಹರಿಹರ, ನಂಬಿಯಣ್ಣನ ಬಗೆಗೂ ರಗಳೆ ರಚಿಸಿದ್ದಾನೆ. ಆದರೆ ಶರಣರು ಮಾತ್ರ ೬೩ ಪುರಾತನರ ಹಿಂಸಾಭಕ್ತಿಯನ್ನು ನೇರವಾಗಿಯೇ ಖಂಡಿಸಿದ್ದಾರೆ.

**ಕೆರೆಯಲುಂಡು ತೊರೆಯಹೊಗಳುವರು,**
**ಅತ್ಯುತ್ಕಟದ ಪರಬ್ರಹ್ಮವನೆ ನುಡಿವರು,**
**ಸಹಜ ಪಿನಾಕಿಯ ಬಲೆಯಲ್ಲಿ ಸಿಲುಕಿ**
**ಭವವ ಹರಿಯಲರಿಯರು**
**ರುದ್ರನ ಛತ್ರವನುಂಡು ಇಲ್ಲವೆಂದು ನುಡಿವ ಹಿರಿಯರಿಗೆ**
**ಮಹದ ಮಾತೇಕೋ ಗುಹೇಶ್ವರಾ।**

ಅಲ್ಲಮಪ್ರಭು (ಸ.ವ.ಸಂ.೨, ವ:೬೧೩)

೧೫

ಅಲ್ಲಮಪ್ರಭು ಇಲ್ಲಿ ಬಳಸಿರುವ "ಹಿರಿಯರು" ಪದ ಈ ಪುರಾತರನ್ನು ಕುರಿತುದ್ದೇ ಆಗಿದೆ. ಇವರಲ್ಲಿ ಭಕ್ತಿಯೆಂದರೆ ಭಾವಾವೇಶವಾಗಿದೆ, ಭಕ್ತಿಯೆಂದರೆ ದೇಹದಂಗಾಂಗಗಳನ್ನು ದೇವರಿಗೆ ಕತ್ತರಿಸಿ ಕೊಡುವುದಾಗಿದೆ. ಇವರ ಮೇಲೆ ಶೈವರ ಪ್ರಭಾವ ನೇರವಾಗಿ ಆಗಿರುವುದರಿಂದ ಅದು ಸಹಜನೇ ಆಗಿದೆ.

ವೈದಿಕರ ಚಾತುರ್ವರ್ಣ ಪದ್ಧತಿ ಎಷ್ಟು ಅಪಾಯವೋ, ಅದಕ್ಕಿಂತ ಅಪಾಯವಾದುದು ೬೩ ಪುರಾತನರ ಈ ಮೂಢಭಕ್ತಿ ಮತ್ತು ಹಿಂಸಾಚರಣೆಗಳು. ೧೨ನೇ ಶತಮಾನದ ಶರಣರು ಇವುಗಳನ್ನು ನೇರವಾಗಿಯೇ ವಿರೋಧಿಸಿದ್ದಾರೆ. ಆದರೆ ಅಕ್ಕಮಹಾದೇವಿ, ಅಕ್ಕಮ್ಮ, ಚೆನ್ನಬಸವಣ್ಣನವರ ಕೆಲವು ವಚನಗಳಲ್ಲಿ ೬೩ ಪುರಾತನರ ಬಗೆಗೆ ಗೌರವದ ಭಾವವಿದೆ, ಪೂಜ್ಯತೆಯ ಭಾವನೆಯಿದೆ. ಇವರ ನಿಜ ವಚನಗಳಲ್ಲಿ ಹೀಗಿಲ್ಲ, ಹೆಚ್ಚಿನ ವಚನಗಳಲ್ಲಿ ಮಾತ್ರ ಇದನ್ನು ನೋಡಬಹುದಾಗಿದೆ. ಸಂಪ್ರದಾಯವಾದಿಗಳು ಮತ್ತು ಶೂನ್ಯಸಂಪಾದನೆಕಾರರು ಶರಣರ ಹೆಸರಿನಲ್ಲಿ ಇಂತಹ ವಚನಗಳನ್ನು ರಚಿಸಿ ಸೇರಿಸಿ ಮೂಢಭಕ್ತಿಗೆ ಪ್ರಾಧಾನ್ಯತೆ ನೀಡಿದ್ದಾರೆ. ಮೂಢಭಕ್ತರು ಹೆಚ್ಚಾದಷ್ಟೂ ಪುರೋಹಿತರು, ಮತ್ತು ಪೂಜಾರಿಗಳಿಗೆ ಒಳ್ಳೆಯ ಆದಾಯ. ಹೀಗಾಗಿ ಪುರೋಹಿತಶಾಹಿ ಮೊದಲಿನಿಂದಲೂ ಶರಣರನ್ನು ಕಾಡುತ್ತ, ತೊಂದರೆಕೊಡುತ್ತ ಅವರು ಹೇಳಿದ್ದನ್ನು ತಿರಚುತ್ತ, ಅವರ ಹೆಸರಿನಲ್ಲಿ ಹೊಸ ವಚನಗಳನ್ನು ಬರೆದು ಸೇರಿಸುತ್ತ ಬಂದಿದೆ. ಇದು ಶೂನ್ಯಸಂಪಾದನೆಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. (ನೋಡಿ: ಶೂನ್ಯಸಂಪಾದನೆ–ಪ್ರಸ್ತುತ ಸವಾಲುಗಳು, ಡಾ. ಬಸವರಾಜ ಸಬರದ,ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭)

ಹೆಚ್ಚಿನ ವಚನಗಳನ್ನು ಶರಣರ ಹೆಸರಿನಲ್ಲಿ ಏಕೆ ಸೇರಿಸಿದರು, ಯಾವಾಗ ಸೇರಿಸಿದರೆಂಬುದನ್ನು ನನ್ನ "ಶೂನ್ಯಸಂಪಾದನೆ....." ಕೃತಿಯಲ್ಲಿವಿವರವಾಗಿ ಬರೆದಿದ್ದೇನೆ. ಶರಣರನ್ನು ಅಧ್ಯಯನ ಮಾಡಿದವರಿಗೆ ಅವರಲ್ಲಿದ್ದ ಸೈದ್ಧಾಂತಿಕ ಬದ್ಧತೆ ಸ್ಪಷ್ಟವಾಗುತ್ತದೆ. ಯಾರು ಎಷ್ಟೇ ಕೂಟವಚನಗಳನ್ನು ಸೇರಿಸಿದರೂ, ಸತ್ಯಹೊರಬಂದೇ ಬರುತ್ತದೆ.

**ಭಕ್ತಿ ಎಂತಹದಯ್ಯಾ, ಸಿರಿಯಾಳ ಮಾಡಿದಂತಹದಯ್ಯಾ ಭಕ್ತಿ ಎಂತಹದಯ್ಯಾ, ನಮ್ಮ ಬಲ್ಲಾಳ ಮಾಡಿದಂತಹದಯ್ಯಾ**

ಬಸವಣ್ಣ (ಸ.ವ.ಸಂ.೧, ವ:೧೪೬)

ಎಂದು ತನ್ನ ವಚನವೊಂದರಲ್ಲಿ ಬಸವಣ್ಣ ಈ ಪುರಾತನರ ಭಕ್ತಿಯನ್ನು ಗೌರವಿಸುತ್ತಾನೆ. ಹೀಗೆ ಅವರ ಭಕ್ತಿಯ ಪರಿಯನ್ನು ಗೌರವಿಸುತ್ತಲೇ ಅವರ ಹಿಂಸಾಭಕ್ತಿಯನ್ನು ಕಂಡು ಭಯವಾಗುತ್ತದೆಂಬ ಸತ್ಯವನ್ನು ಮುಚ್ಚಿಡದೇ ಹೇಳಿದ್ದಾನೆ.

**ಮುನ್ನಿನವರು ಹೋದದಾರಿ ಭಯಕಾಣಿರಣ್ಣಾ, ಬಲ್ಲಾಳನ ವಧುವಿನೊಡನೆ ಸರಸವನಾಡಿದಂದಿಂದ ಭಯಕಾಣಿರಣ್ಣಾ, ಸಿರಿಯಾಳನ ಮಗನ ಬೇಡಿದಂದಿಂದ ಭಯಕಾಣಿರಣ್ಣಾ, ದಾಸನ ವಸ್ತ್ರವ ಸೀಳಿದಂದಿಂದ ಭಯಕಾಣಿರಣ್ಣಾ, ಅಘಟಿತ ಘಟಿತರು, ವಿಪರೀತ ಚರಿತ್ರರು ಕೂಡಲಸಂಗನ ಶರಣರು ನಡೆದ ದಾರಿ ಭಯಕಾಣಿರಣ್ಣಾ**

ಬಸವಣ್ಣ (ಸ.ವ.ಸಂ.೧, ವ:೧೪೭)

೧೬

ಈ ಪುರಾತನರ ಭಕ್ತಿ ಅರ್ಪಣಾಭಕ್ತಿಯಾಗಿದೆ. ಅಲ್ಲಿ ಸ್ವಾರ್ಥ–ವಂಚನೆ–ಡಾಂಭಿಕತೆ ಇರುವುದಿಲ್ಲ. ದೇವರಿಗೆ, ತನ್ನ ಇಷ್ಟಲಿಂಗಕ್ಕೆ ಮನಸ್ಸಿನಿಂದ ಅರ್ಪಿಸಿಕೊಳ್ಳಬೇಕೇ ಹೊರತು, ದೇಹದ ಅರ್ಪಣೆಯಲ್ಲ, ಹೆಂಡತಿ–ಮಕ್ಕಳಅರ್ಪಣೆಯಲ್ಲ ವೆಂಬುದು ಶರಣರ ಸ್ಪಷ್ಟನಿಲುವು. ಅಂತೆಯೆ ಅವರು "ನಾದಪ್ರಿಯನಲ್ಲ, ವೇದಪ್ರಿಯನಲ್ಲ, ಭಕ್ತಿಪ್ರಿಯ ನಮ್ಮ ಕೂಡಲಸಂಗಮದೇವಾ" ಎಂದು ಸ್ಪಷ್ಟಪಡಿಸಿದ್ದಾರೆ. ಇಲ್ಲಿಯೂ ಕೂಡ ಬಸವಣ್ಣನು ಬಲ್ಲಾಳ, ಸಿರಿಯಾಳರ ಭಕ್ತಿಯನ್ನು ಅವರ ಶ್ರದ್ಧೆ–ನಂಬಿಕೆಗಳನ್ನು ಗೌರವಿಸುತ್ತಾನೆ. ಆದರೆ ಭಕ್ತಿಯ ಹೆಸರಿನಲ್ಲಿ ಅವರು ಕೈಕೊಂಡ ನಿರ್ಣಯಗಳು ಭಯಾನಕವಾಗಿ ಕಾಣುತ್ತವೆ. ಅಂತೆಯೇ ಅಂತವರನ್ನು ಬಸವಣ್ಣ "ಅಘಟಿತ–ಘಟಿತರು" ಎಂದು ಹೇಳಿದ್ದಾನೆ. ಬಲ್ಲಾಳನ ಸತಿಯೊಂದಿಗೆ ಶಿವ ಸರಸವಾಡುವುದು, ಸಿರಿಯಾಳ ಮಗನನ್ನೇ ಹೆಚ್ಚಿ ಅಡುಗೆಮಾಡಿ ಉಣಬಡಿಸುವುದು ಇವೆಲ್ಲಾ ಹಿಂಸಾಚರಣೆಗಳಾಗಿದ್ದವು, ಮೌಢ್ಯತೆಯಿಂದ ಕೂಡಿದ್ದವು, ಭಕ್ತಿಯ ಇಂತಹ ಮಾರ್ಗಗಳು ಸರಿಯಾದವುಗಳಲ್ಲವೆಂಬುದು ಶರಣರ ಅಭಿಪ್ರಾಯ. ಶರಣರಿಗೆ ಪುರಾತನರ ಬಗೆಗೆ ಎಷ್ಟೇ ಗೌರವವಿದ್ದರೂ ಸತ್ಯಹೇಳುವುದನ್ನು ಮಾತ್ರ ಬಿಡುವುದಿಲ್ಲ.

ಬಸವಣ್ಣ ಮೊದಲಾದ ಶರಣರು ವೈದಿಕರನ್ನು ವಿರೋಧಿಸುವದಕ್ಕೂ, ಈ ಪುರಾತನರನ್ನು ವಿರೋಧಿಸುವದಕ್ಕೂ ಬಹಳ ವ್ಯತ್ಯಾಸವಿದೆ. ಈಪುರಾತನರ ನಿಷ್ಠಾಭಕ್ತಿಯನ್ನು ಶರಣರು ಒಪ್ಪಿಕೊಂಡಿದ್ದಾರೆ. ಅಂತೆಯೇ ಅವರನ್ನು ಗೌರವದಿಂದ ಕಂಡಿದ್ದಾರೆ. ಆದರೆ ಅವರ ಹಿಂಸಾಭಕ್ತಿ ಮಾತ್ರ ಅವರಿಗೆ ಒಪ್ಪಿಗೆಯಾಗಿಲ್ಲ. ಆ ಕಾರಣವನ್ನು ಅವರು ಹೇಳದೇ ಬಿಟ್ಟಿಲ್ಲ.

**ದಾಸಿದೇವ ತನ್ನ ವಸ್ತ್ರವನಿತ್ತು ತವನಿಧಿಯ ಪ್ರಸಾದವ ಪಡೆದ, ಸಿರಿಯಾಳ ತನ್ನ ಮಗನನಿತ್ತು ಪ್ರಾಣಪ್ರಸಾದವ ಪಡೆದ, ಬಲ್ಲಾಳದೇವ ತನ್ನ ವಧುವನಿತ್ತು ಸಮತೆಪ್ರಸಾದವ ಪಡೆದ, ಇವರೆಲ್ಲರೂ ತಮತಮಗೆ ಮಾಡಿ ಪಡೆದರು ಸಮ್ಯಕ್‌ಪದವಿಯನು. ನಾನೇನೂ ಅರಿಯದ ಭಕ್ತಿಯಬಡವಂಗೆ ಕರುಣಿಸು ಕೂಡಲಸಂಗಮದೇವಾ**

ಬಸವಣ್ಣ (ಸ.ವ.ಸಂ.೧, ವ:೩೨೧)

ಎಡ್ವರ್ಡ್‌ಬುಲ್ಲೋ "ಮಾನಸಿಕ ದೂರ" ಎಂಬ ಸಿದ್ಧಾಂತವನ್ನು ಮಂಡಿಸಿದ್ದಾನೆ. ಅದರಲ್ಲಿ ಅವನು ಯಾವ ಯಾವ ವಸ್ತುವಿನಿಂದ ಎಷ್ಟೆಷ್ಟು ಅಂತರವನ್ನು ಕಾಯ್ದುಕೊಳ್ಳಬೇಕೆಂಬುದನ್ನು ಹೇಳಿದ್ದಾನೆ. ಶಾಖ ಇರುವುದು ಬೆಂಕಿಯಲ್ಲಲ್ಲ, ಅಂತರದಲ್ಲಿ ಎಂದು ಬುಲ್ಲೋ ಹೇಳಿದ್ದಾನೆ. ಈ ಸಿದ್ಧಾಂತ ಇಲ್ಲಿ ಸರಿಯಾಗಿ ಅನ್ವಯಿಸುತ್ತದೆ. ಬಸವಣ್ಣನೂ ಕೂಡ ಇಲ್ಲಿ ಈ ಪುರಾತನರೊಂದಿಗೆ ಒಂದು ಅಂತರವನ್ನು ಕಾಯ್ದುಕೊಂಡಿದ್ದಾನೆ. ಬಸವಣ್ಣನ ಈ ಚಿಂತನೆ ಬಹುಮುಖ್ಯವಾದುದು. ಪುರಾತನರ ಬಗೆಗೆ, ಹಿರಿಯರ ಬಗೆಗೆ ಗೌರವವನ್ನಿಟ್ಟುಕೊಂಡೇ ಅವರಲ್ಲಿದ್ದ ಮೌಢ್ಯಾಚರಣೆಗಳನ್ನು ಕುರಿತು ವಿನಯದಿಂದಲೇ ಬಸವಣ್ಣ ತನ್ನ ವಚನಗಳಲ್ಲಿ ನೇರವಾಗಿ ಹೇಳಿರುವುದನ್ನು ಗಮನಿಸಿದರೆ, ಬಸವಣ್ಣನು ಲಿಂಗಾಯತ ಧರ್ಮದ ಸಿದ್ಧಾಂತಕ್ಕೆ ಹೇಗೆ ಬದ್ಧನಾಗಿದ್ದನೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

೧೭

ಬಸವಣ್ಣನು ಬಲ್ಲಾಳ, ಸಿರಿಯಾಳರ ವಿಷಯವನ್ನು ಇಷ್ಟಕ್ಕೇ ಬಿಡುವುದಿಲ್ಲ. ಅವರಿಗೆ ಹೇಳಬೇಕೆಂದರೆ ಅವರು ಕಣ್ಣೆದುರಿಗಿಲ್ಲ. ಉಳಿದವರಿಗೆ ಹೇಳಿದರೆ ಪ್ರಯೋಜನವಿಲ್ಲ. ಹೀಗಾಗಿ ಬಸವಣ್ಣ ಈ ವಿಷಯವನ್ನು ನೇರವಾಗಿ ದೇವರೆದುರೇ ಪ್ರಶ್ನಿಸುತ್ತಾನೆ. ಸಿರಿಯಾಳ. ಬಲ್ಲಾಳರು ಇರದಿದ್ದರೇನಾಯಿತು, ಅವರು ಪೂಜಿಸಿದ ದೇವರಿದ್ದಾನಲ್ಲ. ಆತನನ್ನುಪ್ರಶ್ನಿಸುತ್ತಲೇ ವರ್ತಮಾನದ ಜನರಿಗೆ ನಿಜವಾದ ಭಕ್ತಿಯ ಪರಿಯನ್ನು ಬಸವಣ್ಣ ತಿಳಿಸುತ್ತಾನೆ.

**ದಾಸನ ವಸ್ತ್ರವ ಬೇಡದ ಮುನ್ನ ತವನಿಧಿಯನಿತ್ತಡೆ ನಿಮ್ಮ ದೇವರೆಂಬೆ. ಸಿರಿಯಾಳನ ಮಗನ ಬೇಡದ ಮುನ್ನ ಕಂಚಿಯ ಪುರವ ಕೈಲಾಸಕ್ಕೊಯ್ದಡೆ ನಿಮ್ಮ ದೇವರೆಂಬೆ ಬಲ್ಲಾಳನ ವಧುವ ಬೇಡದ್ದ ಮುನ್ನ ಸ್ವಯಲಿಂಗವ ಮಾಡಿದಡೆ ನಿಮ್ಮ ದೇವರೆಂಬೆ. ದೇಹಿನೀನು, ವ್ಯಾಪಾರಿಗಳು ನಮ್ಮವರು ಬೇಡು, ಕೂಡಲಸಂಗಮದೇವಾ, ಎಮ್ಮವರ ಕೈಯಲು.**

ಬಸವಣ್ಣ (ಸ.ವ.ಸಂ.೧, ವ,೪೪೪)

ದೇವರಿಗೇ ಹೀಗೆ ನಿರ್ಭಿಡೆಯಿಂದ ಹೇಳುವುದು ಬಸವಣ್ಣನಂತಹ ಶಿವಶರಣರಿಗೆ ಮಾತ್ರ ಸಾಧ್ಯವಾಗುತ್ತದೆ. ಜೇಡರ ದಾಸಿಮಯ್ಯನಿಂದ ವಸ್ತ್ರವನ್ನು ಪಡೆದು ತವನಿಧಿಯನ್ನೀಯುವುದಲ್ಲ, ಸಿರಿಯಾಳನ ಮಗನನ್ನು ಪಡೆದು ಕೈಲಾಸಕ್ಕೊಯ್ಯುವುದಲ್ಲ, ಬಲ್ಲಾಳನ ವಧುವನ್ನು ಬೇಡಿ ಸ್ವಯಲಿಂಗವ ಕೊಡುವುದಲ್ಲ. ಭಕ್ತರಿಂದ ಏನೂ ಪಡೆಯದೆ ನೀನು ಅವರಿಗೆ ಕೊಡಬೇಕು ಆಗ ನಿನ್ನನ್ನು ದೇವರೆನ್ನುತ್ತೇನೆ ಎಂದು ಬಸವಣ್ಣ ಈ ವಚನದಲ್ಲಿ ದೇವರಿಗೇ ಸವಾಲು ಹಾಕಿದ್ದಾನೆ. ಒಂದುವೇಳೆ ಬೇಡುವುದನ್ನೇ ನೀನು ಮುಂದುವರಿಸಿದರೆ ನೀನು ದೇಹಿಯಾಗುವಿ, ನಮ್ಮವರು ವ್ಯಾಪಾರಿಗಳಾಗುತ್ತಾರೆ ಆಗ ಅಲ್ಲಿ ಭಕ್ತಿಯ ಬದಲು ವ್ಯಾಪಾರ ಪ್ರಾರಂಭವಾಗುತ್ತದೆಂದು ಸ್ಪಷ್ಟಪಡಿಸಿದ್ದಾನೆ. ಬಸವಣ್ಣ ಮೊದಲಾದ ಶರಣರು ಬರುವುದಕ್ಕಿಂತ ಮೊದಲು ಮತ್ತು ಬಸವಣ್ಣನವರು ಹೋದ ನಂತರವೂ ಇಲ್ಲಿ ಭಕ್ತಿಯೆಂಬುದು ವ್ಯಾಪಾರವಾಗಿದೆ, ಡಾಂಭಿಕತೆಯಾಗಿದೆ, ತೋರುಂಬುವ ಲಾಭವಾಗಿದೆ.

ಇನ್ನೊಂದು ವಚನದಲ್ಲಿ ಕೊಡುವುದರ–ತೆಗೆದುಕೊಳ್ಳುವುದರ ಬಗೆಗೆ ಬಹಳ ಸ್ಪಷ್ಟವಾಗಿ ಬಸವಣ್ಣ ಹೇಳಿದ್ದಾನೆ. ದಾಸ ವಸ್ತ್ರ ಕೊಟ್ಟನೇ ಹೊರತು ತನ್ನನ್ನು ಕೊಡಲಿಲ್ಲ, ಸಿರಿಯಾಳ ಮಗನನ್ನು ಕೊಟ್ಟನೇ ಹೊರತು ತನ್ನನ್ನು ಕೊಡಲಿಲ್ಲ, ಬಲ್ಲಾಳ ತನ್ನ ಹೆಂಡತಿಯನ್ನು ಕೊಟ್ಟನೇ ಹೊರತು ತನ್ನನ್ನು ಕೊಡಲಿಲ್ಲ, ಆದರೆ ತನ್ನನ್ನು ಕೊಟ್ಟಾತ, ತನ್ನನ್ನೇ ಭಕ್ತಿಯಿಂದ ಅರ್ಪಿಸಿಕೊಂಡಾತ "ಸಿಂಧುಮರಾಳ"ನೊಬ್ಬನೇ ಎಂದು ಬಸವಣ್ಣ ಈ ವಚನದಲ್ಲಿ ಸ್ಪಷ್ಟಪಡಿಸಿದ್ದಾನೆ. ಸಿಂಧುಮರಾಳನೂ ಕೂಡ ಒಬ್ಬ ದೊಡ್ಡ ಶಿವಭಕ್ತ. ಬಲ್ಲಾಳ, ಸಿರಿಯಾಳರ ಹಿಂಸಾಭಕ್ತಿಯನ್ನೊಪ್ಪದ ಬಸವಣ್ಣ ಅದೇ ಸಿಂಧು ಮರಾಳನ ಭಕ್ತಿಯನ್ನು ಒಪ್ಪುತ್ತಾನೆ.

### ೧೮

ಸಿಂಧು ಮರಾಳನಂತವರು ಬಹಳ ವಿರಳ. ಈತನು ಸಿಂಧು ದೇಶದ ಅರಸನಾಗಿದ್ದ, ಈತನದು ಸಮರ್ಪಣಾ ಭಕ್ತಿಯಾಗಿತ್ತು, ದೇವರಿಂದ ಏನನ್ನೂ ಬಯಸದೆ ತನ್ನನ್ನು ದೇವರಿಗರ್ಪಿಸಿಕೊಂಡ ಭಕ್ತನೀತ. ಈತನದು ಹಿಂಸಾಭಕ್ತಿಯಾಗಿರದೆ, ಶ್ರದ್ಧಾಭಕ್ತಿಯಾಗಿತ್ತು, ನಿಸ್ವಾರ್ಥ ಭಕ್ತಿಯಾಗಿತ್ತು. ಹೀಗೆ ಬಸವಣ್ಣ ಮೊದಲಾದ ಶರಣರು ೬೩ ಪುರಾತನರರನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿ ತಮ್ಮ ಅಭಿಪ್ರಾಯಗಳನ್ನು ನೇರವಾಗಿ, ಸ್ಪಷ್ಟವಾಗಿ ಹೇಳಿದ್ದಾರೆ.

ಒಂದು ವಿಷಯವನ್ನು ಇಲ್ಲಿ ಸ್ಪಷ್ಟಪಡಿಸಬೇಕಾಗುತ್ತದೆ. ಬಸವಣ್ಣನನ್ನು ಹೊರತುಪಡಿಸಿ ಉಳಿದ ಬಹುತೇಕ ವಚನಕಾರರೆಲ್ಲ ೬೩ ಪುರಾತನರನ್ನು ಹೊಗಳಿ ಹಾಡಿದ್ದಾರೆ. ಪೂಜ್ಯಭಾವದಿಂದ ಅವರನ್ನು ಗೌರವಿಸಿದ್ದಾರೆ, ವರ್ಣಿಸಿದ್ದಾರೆ. ಆದರೆ ಬಸವಣ್ಣ ಮಾತ್ರ ಅವರನ್ನು ಗೌರವಿಸುತ್ತಲೇ ಅವರ ಹಿಂಸಾಭಕ್ತಿಯನ್ನು ವಿರೋಧಿಸಿದ್ದಾನೆ. ಅಂತೆಯೇ ಅಲ್ಲಮಪ್ರಭು ತಮ್ಮ ಒಂದು ವಚನದಲ್ಲಿ ಈ ಸಂಗತಿಯನ್ನು ಹೀಗೆ ಸ್ಪಷ್ಟಪಡಿಸಿದ್ದಾರೆ.

**ಸಿರಿಯಾಳ–ಚಂಗಳೆಯರಂತೆ ಶಿಶುವಧೆಯ ಮಾಡಿದವನಲ್ಲ, ನಂಬಿ–ಬಲ್ಲಾಳರಂತೆ ಕಾಮುಕತನವ ಮಾಡಿದವನಲ್ಲ. ಬೊಮ್ಮಯ್ಯ ಕಣ್ಣಪ್ಪನವರಂತೆ ಜೀವ ಹಿಂಸೆಯ ಮಾಡಿದವನಲ್ಲ. ಗುಹೇಶ್ವರಾ ನಿಮ್ಮ ಶರಣರಿಗಿಕ್ಕಿದ ಸೊಡರು ಸಂಗನ ಬಸವಣ್ಣ**

ಅಲ್ಲಮಪ್ರಭು (ಸ.ವ.ಸಂ.೨, ವ:೧೫೯೩)

ಲಿಂಗಾಯತ ಸಿದ್ಧಾಂತ ಎಷ್ಟೊಂದು ಬದ್ಧತೆಯಿಂದ ಕೂಡಿತ್ತೆಂಬುದಕ್ಕೆ ಅಲ್ಲಮನ ಈ ವಚನವೇ ಸಾಕ್ಷಿಯಾಗಿದೆ. ಉಳಿದ ವಚನಕಾರರಿಗೂ ಪೂರ್ಣ ಸ್ವಾತಂತ್ರ್ಯವಿತ್ತು. ಹೀಗಾಗಿ ಅವರು ಬಸವಣ್ಣನಂತೆ ನಿಷ್ಠುರವಾಗುವದಿಲ್ಲ. ಸೂಕ್ಷ್ಮವ್ಯತ್ಯಾಸವನ್ನು ಗುರುತಿಸುವುದಿಲ್ಲ. ಇಲ್ಲಿ ಬಸವಪೂರ್ವ ಯುಗದ ಧರ್ಮಗಳ ಬಗೆಗೆ ಮಾತ್ರ ಚರ್ಚೆ ಮಾಡಲಾಗಿದೆ.

■■

# ಲಿಂಗಾಯತ ಧರ್ಮ

• ಮೂಡ್ನಾಕೂಡು ಚಿನ್ನಸ್ವಾಮಿ

ಲಿಂಗಾಯತವು ಸ್ವತಂತ್ರ ಧರ್ಮ ಎಂಬ ಚರ್ಚೆ ಮತ್ತೆ ಶುರುವಾಗಿದೆ. ಅದು ಸ್ವತಂತ್ರ ಧರ್ಮವೆ, ಅಲ್ಲವೆ ಎಂಬ ಜಿಜ್ಞಾಸೆಗೆ ಅಲ್ಲಿ ಎಡೆಯೆ ಇಲ್ಲ. ಆದರೂ ಗುರು–ವಿರಕ್ತರ ಹಗ್ಗಜಗ್ಗಾಟ ನಡೆಯುತ್ತಲೇ ಇರುತ್ತದೆ. ಬೌದ್ಧ, ಜೈನ, ಲಿಂಗಾಯತಗಳು ಕೆಸರಿನಿಂದಲೇ ಹುಟ್ಟಿದರೂ ಸ್ವಚ್ಛ ಕಮಲದಂತೆ ಸ್ವತಂತ್ರವಾಗಿ ಅರಳಿನಿಂತಿವೆ. ಕೇವಲ ಲೌಕಿಕ ಹಿತಾಸಕ್ತಿಗಳಿಗಾಗಿ ಈ ಚರ್ಚೆ ಆಗಾಗ ಮುನ್ನೆಲೆಗೆ ಬರುತ್ತದೆ. ಲಿಂಗಾಯತ ಧರ್ಮಕ್ಕೆ ಒಬ್ಬ ಸ್ಥಾಪಕನಿದ್ದಾನೆ–ಬಸವಣ್ಣ. ವಚನಶಾಸ್ತ್ರವೆಂಬ ಧರ್ಮಗ್ರಂಥವಿದೆ. ಬೌದ್ಧ, ಜೈನಗಳಂತೆಯೆ ಅದು ಜನರಾಡುವ ಸ್ಥಳೀಯ ಭಾಷೆಯಲ್ಲಿಯೆ ಕಟ್ಟಲ್ಪಟ್ಟಿದೆ. ಒಂದು ಧರ್ಮವು ಇತರ ಧರ್ಮಗಳಿಗಿಂತ ಹೇಗೆ ಭಿನ್ನ ಎಂಬುದನ್ನು ಈ ಮೂರು ನೆಲೆಗಳಲ್ಲಿ ಪರೀಕ್ಷಿಸಬಹುದು. ೧) ತತ್ತ್ವಶಾಸ್ತ್ರದ ನೆಲೆ ೨) ದೈವಶಾಸ್ತ್ರದ ನೆಲೆ ೩) ಸಮಾಜಶಾಸ್ತ್ರೀಯ ನೆಲೆ.

ಸುಮಾರು ಎರಡು ದಶಕಗಳ ಹಿಂದೆ ನಾನು ಗದುಗಿನಲ್ಲಿದ್ದಾಗ ತೋಂಟದಾರ್ಯಮಠದ ಡಾ. ಸಿದ್ಧಲಿಂಗ ಮಹಾಸ್ವಾಮಿಗಳ ಸಖ್ಯವಿತ್ತು. ಅವರ ಶಾಖಾ ಮಠಗಳಿಗೆ ನನ್ನನ್ನು ಶಿವಾನುಭವ ಕಾರ್ಯಕ್ರಮಗಳಿಗೆ ಕರೆದೊಯ್ಯುತ್ತಿದ್ದರು. ಒಮ್ಮೆ ನಾನು ಉಪನ್ಯಾಸದಲ್ಲಿ ಲಿಂಗಾಯತ ಧರ್ಮವು ಸ್ವತಂತ್ರ ಧರ್ಮ ಎನ್ನುವುದಕ್ಕೆ ಇದೊಂದು ವಚನ ಸಾಕು ಎಂದು ಇದನ್ನು ಉದಾಹರಿಸಿದೆ.

**ಜನ್ಮಜನ್ಮಕೆ ಹೋಗಲೀಯದೆ, ಸೋಹಂ ಎಂದೆನಿಸದೆ**
**ದಾಸೋಹಂ ಎಂದೆನಿಸಯ್ಯಾ, ಲಿಂಗ ಜಂಗಮದ**
**ಪ್ರಸಾದವ ತೋರಿ ಬದುಕಿಸಯ್ಯಾ ಕೂಡಲಸಂಗಮದೇವಾ.**

ಈ ವಚನವನ್ನು ಕೇಳಿದ ಸ್ವಾಮೀಜಿಯವರು ಅದನ್ನು ಹೊಸದಾಗಿ ಕೇಳಿದವರಂತೆ ಹರ್ಷಗೊಂಡರು. ಅಂದೇ ತಮ್ಮ ಗುರುಗಳಾದ ಎಂ. ಎಂ. ಕಲಬುರ್ಗಿಯರೊಡನೆ ಅದರ ಬಗ್ಗೆ ಚರ್ಚಿಸಿದರು. ಅವರೂ ಸಹ ಮರುದಿನವೇ ನನ್ನೊಡನೆ ತಮಗಾದ ಸಂತಸವನ್ನು ಹಂಚಿಕೊಂಡರು.

ವಚನಗಳಲ್ಲಿ ಕೇವಲ ಶಬ್ದದ ಸೊಗಸಷ್ಟೇ ಅಲ್ಲ, ಅರ್ಥದ ಸೊಗಸೂ ನಮ್ಮನ್ನು ಬೆರಗುಗೊಳಿಸುತ್ತದೆ. ಈ ವಚನದಲ್ಲಿ ಬಸವಣ್ಣ ಮೊದಲನೆಯ ಸಾಲಿನಲ್ಲಿ ವೈದಿಕ ತತ್ತ್ವವನ್ನು ನಿರಾಕರಿಸಿಬಿಡುತ್ತಾನೆ. ಎರಡನೆಯ ಸಾಲಿನಲ್ಲಿ ತನ್ನ ಧರ್ಮದ ತತ್ತ್ವವೇನೆಂಬುದನ್ನು ನಿವೇದಿಸಿಕೊಳ್ಳುತ್ತಾನೆ. ತಾನು ಬದುಕುವ ಪರಿ ಹೀಗಿರಬೇಕೆಂದು ಮೂರನೆಯ ಸಾಲಿನಲ್ಲಿ ಹೇಳಿ ಮುಗಿಸುತ್ತಾನೆ. ಜನ್ಮಜನ್ಮಕೆ ಹೋಗಲೀಯದೆ ಎಂದರೆ ಪುನರ್ಜನ್ಮವಿಲ್ಲ. ಪುನರ್ಜನ್ಮದ ನಿರಾಕರಣೆ ಕರ್ಮಸಿದ್ಧಾಂತದ ನಿರಾಕರಣೆಯೂ ಹೌದು. ಸೋಹಂ ಎಂದೆನಿಸದಿರಯ್ಯಾ ಎಂಬ ಸರಳ ಮಾತು 'ಅಹಂ ಬ್ರಹ್ಮಾಸ್ಮಿ' ಎಂಬ ಸಿದ್ಧಾಂತವನ್ನೇ ಛಿದ್ರಗೊಳಿಸುತ್ತದೆ. ದಾಸೋಹಂ ಎಂದೆನಿಸಯ್ಯಾ ! ಎಂಥಾ ಅದ್ಭುತ ಕಟ್ಟುವಿಕೆ ಇದೆ ಇಲ್ಲಿ. ಕಾಯಕವಿಲ್ಲದೆ ದಾಸೋಹವಿಲ್ಲ. ಕರ್ಮ ಥಿಯರಿಯಿಲ್ಲದೆ ಪುನರ್ಜನ್ಮವಿಲ್ಲ. ನೋಡಿ, ಪುನರ್ಜನ್ಮ, ಕಾಯಕ ಎಂಬ ಪದಗಳನ್ನು ಬಳಸದೆಯೆ ಅವುಗಳ ಅರ್ಥವನ್ನು ಸ್ಫುಟಗೊಳಿಸುತ್ತಾನೆ ಬಸವಣ್ಣ. ಲಿಂಗ, ಜಂಗಮ, ಪ್ರಸಾದವ ತೋರಿ ಬದುಕಿಸಯ್ಯಾ ಎಂದು ಕೂಡಲಸಂಗಮನಲ್ಲಿ ಮೊರೆಯಿಡುತ್ತಾನೆ. ಹೀಗೆ ತತ್ತ್ವಾಧಾರಿತವಾಗಿ ಹಿಂದೂ ಮತ್ತು ಲಿಂಗಾಯತ ಧರ್ಮಗಳು ಮುಖಾಮುಖಿಯಾಗುತ್ತವೆ, ಕೂಡುವುದಿಲ್ಲ.

ದೈವಶಾಸ್ತ್ರದ ನೆಲೆಯಲ್ಲಿ ನೋಡುವುದಾದರೆ ಲಿಂಗಾಯತ ಧರ್ಮ ಆಸ್ತಿಕ ಧರ್ಮವಾದ್ದರಿಂದ ದೇವರನ್ನು ನಂಬುತ್ತದೆ. ಅದು ಶಿವಸ್ವರೂಪಿಯಾದ ಕೂಡಲಸಂಗಮ ನೆನ್ನುವುದು ನಿರ್ವಿವಾದವಾದರೂ ಅವನು ಶಾಕ್ತ ಪರಂಪರೆಯ ಶಿವನಲ್ಲ. ಅಂಗೈಯ ಮೇಲೆ ಸ್ವಾಯತವಾಗುವ ಲಿಂಗರೂಪಿ, ಏಕದೇವೋಪಾಸನೆಯನ್ನು ಸಾರುವ ಲಿಂಗಾಯತದಲ್ಲಿ ಇದೇ ಸರ್ವಸ್ವ. ಅನ್ಯದೈವಕ್ಕೆಳಸಿದರೆ ಅದು ಹಾದರ. ಹೀಗೆ ಒಂದು ಚುಳುಕಾದ ಲಿಂಗ ಮುಕ್ಕೋಟಿ ದೇವತೆಗಳನ್ನು ಹುರಿದು ಮುಕ್ಕಿದೆ. ಬಹುದೇವತಾರಾಧನೆಯನ್ನು ಧಿಕ್ಕರಿಸಿದೆ. ಅಲ್ಲಿ ದೇವಾಲಯಗಳಿಲ್ಲ. ದೇಹವೇ ದೇಹಾರ. ಅನುಭವ ಮಂಟಪವಿದೆ. ಅದು ನೀತಿನಿರೂಪಣೆಗಾಗಿ ಇರುವ ಪ್ರಜಾಪ್ರಭುತ್ವವಾದೀ ವೇದಿಕೆ. ಅಲ್ಲಿ ಮೂಢಾಚರಣೆಗಳಿಲ್ಲ, ಮುಕ್ತ ಚರ್ಚೆ ಇದೆ. ದಾಸೋಹ ನಡೆಯುವ ಸ್ಥಳವನ್ನು ಮಹಾಮನೆಯೆನ್ನುತ್ತಾರೆ. ಸ್ವರ್ಗ, ನರಕಗಳಿಲ್ಲ. ಎಲ್ಲ ಬಯಲು–ಆಲಯ. ಒಂದು ರೀತಿಯಲ್ಲಿ ಇದು ಅಂಬೇಡ್ಕರ್ ಕಲ್ಪಿಸಿದ ನವಯಾನ ಬೌದ್ಧಧರ್ಮಕ್ಕೆ ಹತ್ತಿರವಿದೆ.

ಬಸವಣ್ಣ ಒಂದು ಚಳುವಳಿಯನ್ನೇ ಹುಟ್ಟುಹಾಕಿದ. ಅಂದು ಸಮಾಜದಲ್ಲಿ ಬೇರೂರಿದ್ದ ಮೌಢ್ಯ, ಕಂದಾಚಾರ, ಜಾತೀಯತೆ, ಅಸ್ಪೃಶ್ಯತೆ, ಶೋಷಣೆ, ಅಸಮಾನತೆ ಇತ್ಯಾದಿ ಸಾಮಾಜಿಕ ಕಂಟಕಗಳನ್ನು ಬೇರುಸಹಿತ ಕಿತ್ತುಹಾಕುವುದೇ ಚಳುವಳಿಯ ಉದ್ದೇಶವಾಗಿತ್ತು. ಆದ್ದರಿಂದ ಲಿಂಗಾಯತವು ಸಮಾಜಮುಖೀ ಧರ್ಮ. ಅಂದಿನ ಕಾಲದಲ್ಲಿ ಶಿಕ್ಷಣವೇತ್ತರು ಎಂದರೆ ವೇದಪಾರಂಗತರು. ಆದರೆ ಅವರು ಮಾಡುತ್ತಿದ್ದ ಅರ್ಥಹೀನ ಆಚರಣೆಗಳು ಶಿಕ್ಷಣವನ್ನೇ ಅಣಕಿಸುವಂತಿದ್ದವು. ಈ ವಚನವನ್ನು ನೋಡಿ.

**ನೀರ ಕಂಡಲ್ಲಿ ಮುಳುಗುವರಯ್ಯಾ**
**ಮರನ ಕಂಡಲ್ಲಿ ಸುತ್ತುವರಯ್ಯಾ**
**ಬತ್ತುವ ಜಲವ, ಒಣಗುವ ಮರನ**
**ಮೆಚ್ಚಿದವರು ನಿಮ್ಮನೆತ್ತ ಬಲ್ಲರು**
**ಕೂಡಲಸಂಗಮದೇವಾ**

ಹೀಗೆ ಬಸವಣ್ಣ ಜನರನ್ನು ಎಚ್ಚರಿಸುತ್ತಾ ನಡೆದ. ಇಷ್ಟಲಿಂಗ ಧಾರಣೆಯ ಪರಿಕಲ್ಪನೆ ಸಮಾನತೆಯನ್ನು ತರುವುದೇ ಆಗಿತ್ತು. ಆದ್ದರಿಂದ ಅದು ದೇವೋಪಾಸನೆಗಿಂತಲೂ ಸಾಮಾಜಿಕ ಮನ್ನಣೆಯ ಕುರುಹಾಗಿ ಬೆಳೆಯಿತು. ಕುಲವನರಸುವರೆ ಜಾತಿಸಂಕರವಾದ ಬಳಿಕ? ಲಿಂಗದೀಕ್ಷೆಯನ್ನು ಕರ್ಮಕಾಂಡದ ಧರ್ಮದಿಂದ ಮಹಾನಿರ್ಗಮನ ಎಂದು ತಿಳಿಯಬೇಕು. ಅಲ್ಲಿ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಲಭ್ಯವಿವೆ. ಇವುಗಳನ್ನು ವೈದಿಕ ಶಾಸ್ತ್ರ ಪುರಾಣಗಳಲ್ಲಿ ಹುಡುಕಲು ಬಾರದು. ಜಂಗಮವೆಂದರೆ ಸಮಾಜ. ವ್ಯಕ್ತಿ, ಕುಟುಂಬ, ಸಮಾಜ ಮತ್ತು ರಾಜ್ಯಗಳನ್ನು ಏಕಸೂತ್ರದಲ್ಲಿ ಬೆಸೆಯುವ ಅದ್ಭುತ ಪರಿಕಲ್ಪನೆ ಲಿಂಗ, ಜಂಗಮ, ಪ್ರಸಾದ. ಸಮಾನ ಹಂಚಿಕೆಯೆ ಪ್ರಸಾದದ ಸಾರ. ಇಂತಹ ಅಮೂಲ್ಯ ತತ್ತ್ವಗಳನ್ನೊಳಗೊಂಡ ಲಿಂಗವಂತ ಧರ್ಮವನ್ನು ಶಾಕ್ತದ ಒಂದು ಕವಲಾದ ಶೈವದೊಂದಿಗೆ ಬೆರೆಸಿ ಎರಡೂ ಒಂದೇ ಎನ್ನುವುದು ಮಹಾಮಾನವತಾವಾದಿ ಬಸವಣ್ಣನಿಗೆ ಎಸಗುವ ಅಪಚಾರ. ಹಾಗಾದರೆ ವೀರಶೈವ ಹೇಗೆ ಬಂದು ಸೇರಿಕೊಂಡಿತು? ಎಂಬ ಪ್ರಶ್ನೆಗೆ ಕಲಬುರ್ಗಿಯವರು ಸಮರ್ಪಕವಾಗಿ ಉತ್ತರಿಸಿದ್ದಾರೆ. ಇನ್ನೊಂದು ವಚನ ವೇದ, ಶಾಸ್ತ್ರ, ಆಗಮಗಳನ್ನು ಹೊರತೊಲಗಿಸಿದ್ದಕ್ಕೆ ಸಾಕ್ಷಿಯಾಗಿದೆ.

**ವೇದ ನಡುನಡುಗಿತ್ತು, ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತಯ್ಯಾ ತರ್ಕ ತರ್ಕಿಸಲರಿಯದೆ ಮೂಗುವಟ್ಟಿದ್ದಿತಯ್ಯಾ ಆಗಮ ತೊಲಗಿ ಅಗಲಿದ್ದಿತಯ್ಯಾ ನಮ್ಮ ಕೂಡಲಸಂಗಯ್ಯನು ಮಾದಾರ ಚೆನ್ನಯ್ಯನ ಮನೆಯಲುಂಡ ಕಾರಣ.**

ಸಾಂಕೇತಿಕವಾಗಿ ಹೇಳುವುದಾದರೆ ಮಾದಾರ ಚೆನ್ನಯ್ಯನ ಮನೆಯಲ್ಲಿ ಉಂಡು ಹಾಗು ಹರಳಯ್ಯನ ಮನೆಗೆ ಹೆಣ್ಣು ಕೊಟ್ಟು ಸಂಬಂಧ ಬೆಳೆಸಿ ಜಾತಿಸಂಕರವಾದ ಬಳಿಕ ಉಂಟಾದ ಧರ್ಮವೇ ಲಿಂಗಾಯತ. ಈ ಸಂಶಯಾತೀತ ಸತ್ಯವನ್ನರಿಯದ ಅನ್ಯಕುಲಜರು ಕೊಟ್ಟಣವ ಕುಟ್ಟುತ್ತೈದಾರೆ.

■■

# ಭಾರತೀಯ ತತ್ತ್ವಶಾಸ್ತ್ರದ ವಿಮರ್ಶೆ
# ಬೆಳದಿಂಗಳು

● ಎಸ್. ಸೂರ್ಯಪ್ರಕಾಶ ಪಂಡಿತ್

ಭಾರತೀಯ ಸಂಸ್ಕೃತಿ-ಪರಂಪರೆ ವೈವಿಧ್ಯ ಪೂರ್ಣವಾದುದಷ್ಟೆ ಅಲ್ಲ, ಸಂಕೀರ್ಣವಾದುದೂ ಹೌದು; ಮಾತ್ರವಲ್ಲ, ಹರಹು ಕೂಡ ವಿಶಾಲವಾದುದು. ಭಾರತೀಯ ತತ್ತ್ವಶಾಸ್ತ್ರದ ಹಿನ್ನೆಲೆ ಇಲ್ಲದಿದ್ದರೆ ಈ ನೆಲದ ಪರಂಪರೆಯ ಮಾನಸಿಕತೆಯನ್ನೂ, ಚಿಂತನೆಯ ಆಯಾಮಗಳನ್ನೂ, ಸಂಸ್ಕೃತಿಯ ರೀತಿ-ನೀತಿಗಳನ್ನೂ ಅರ್ಥಮಾಡಿಕೊಳ್ಳುವುದು ಸುಲಭವಲ್ಲ. ಆದರೆ ದುರಂತವೆಂದರೆ ನಮ್ಮ ದೇಶದ ಹಲವು ವಿಶ್ವವಿದ್ಯಾಲಯಗಳಲ್ಲಿ ತತ್ತ್ವಶಾಸ್ತ್ರದ ಅಧ್ಯಯನವೇ ಮಾಯವಾಗಿದೆ. ಹೀಗಿರುವಾಗ ಭಾರತೀಯ ತತ್ತ್ವಶಾಸ್ತ್ರವನ್ನು ಅರಿಯಲು ಇರುವ ಪರ್ಯಾಯ ಮಾರ್ಗವಾದರೂ ಏನು? ಪುಸ್ತಕಗಳನ್ನೇ ಆಶ್ರಯಿಸಬೇಕಷ್ಟೆ !

ಭಾರತೀಯ ತತ್ತ್ವಶಾಸ್ತ್ರದ ಬಹುಪಾಲು ಮೂಲಕೃತಿಗಳು ಇರುವುದು ಸಂಸ್ಕೃತದಲ್ಲಿಯೇ; ಪಾಳಿ ಮತ್ತು ಪ್ರಾಕೃತ ಭಾಷೆಗಳಲ್ಲಿ ಬೌದ್ಧ-ಜೈನಮತಗಳ ಕೃತಿಗಳಿವೆ. (ಬೌದ್ಧ-ಜೈನದರ್ಶನದ ಹಲವು ಕೃತಿಗಳೂ ಸಂಸ್ಕೃತದಲ್ಲೂ ಇವೆಯೆನ್ನಿ!) ಒಟ್ಟಿನಲ್ಲಿ ಇಂದಿನ ನಮ್ಮ ಸಂವಹನಭಾಷೆಗೆ ದೂರವಾಗಿರುವ ಭಾಷೆಯಲ್ಲಿಯೇ ತತ್ತ್ವಶಾಸ್ತ್ರದ ಗ್ರಂಥಗಳು ಇವೆ ಎಂದಾಯಿತು. ಸಮಸ್ಯೆ ಇಲ್ಲಿಗೇ ಮುಗಿಯಲಿಲ್ಲ; ಇಲ್ಲಿಯ ಒಂದೊಂದು ತತ್ತ್ವಶಾಸ್ತ್ರದ ಪ್ರಸ್ಥಾನಕ್ಕೂ ಹಲವು ಶಾಖೆಗಳು; ಆ ಒಂದೊಂದು ಶಾಖೆಗೂ ಹತ್ತಾರು ಪ್ರಮಾಣಗ್ರಂಥಗಳು. ಇದರ ತಾತ್ಪರ್ಯ: ಭಾರತೀಯ ತತ್ತ್ವಶಾಸ್ತ್ರದ ಪರಂಪರೆಯನ್ನು ಈ ಎಲ್ಲ ಕಾರಣಗಳಿಂದಾಗಿ ಸುಲಭವಾಗಿ ತಿಳಿದುಕೊಳ್ಳುವುದು ಸಾಮಾನ್ಯರಿಗಿರಲಿ, ವಿದ್ವಾಂಸರಿಗೆ ಸುಲಭಸಾಧ್ಯವಲ್ಲ ಎಂಬುದು!

ಕಳೆದ ನೂರು-ನೂರೈವತ್ತು ವರ್ಷಗಳಿಂದ ಭಾರತೀಯ ತತ್ತ್ವಶಾಸ್ತ್ರದ ಮೂಲಗ್ರಂಥಗಳನ್ನು ಬೇರೆ ಬೇರೆ ಭಾಷೆಗಳಿಗೆ ಅನುವಾದಿಸುವ ಕಾರ್ಯ ನಡೆದು ಬಂದಿದೆ; ಇಲ್ಲಿಯ ತತ್ತ್ವಶಾಸ್ತ್ರದ ಪರಂಪರೆಯನ್ನು ಸಂಗ್ರಹವಾಗಿ ತಿಳಿಸಿಕೊಡುವ ಕೃತಿಗಳನ್ನೂ ವಿದ್ವಾಂಸರು ಪ್ರಕಟಿಸುತ್ತ ಬಂದಿದ್ದಾರೆ. ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿ ಇಂಥ ಕೃತಿಗಳು ಸಾಕಷ್ಟಿವೆ. ಆದರೆ ಕನ್ನಡದಲ್ಲಿ ಭಾರತೀಯ ತತ್ತ್ವಶಾಸ್ತ್ರವನ್ನು ಕುರಿತಂತೆ ಬಂದಿರುವ ಕೃತಿಗಳ ಸಂಖ್ಯೆ ಕಡಿಮೆ ಎಂದೇ ಹೇಳಬೇಕು.

ಪ್ರೊ. ಎಂ. ಹಿರಿಯಣ್ಣ, ಬಲದೇವ ಉಪಾಧ್ಯಾಯ, ನರೇಂದ್ರದೇವ, ಆರ್. ಡಿ. ರಾನಡೆ, ಎಸ್. ರಾಧಾಕೃಷ್ಣ, ದೇವೀಪ್ರಸಾದ ಚಟ್ಟೋಪಾಧ್ಯಾಯ, ಮತಿಲಾಲ್ ಮುಂತಾದ ಖ್ಯಾತನಾಮರ ಕೆಲವು ಕೃತಿಗಳು ಕನ್ನಡಕ್ಕೆ ಅನುವಾದವಾಗಿವೆ. 'ಕಲ್ಚರಲ್ ಹೆರಿಟೇಜ್ ಆಫ್ ಇಂಡಿಯಾ'ದ ನಾಲ್ಕು ಸಂಪುಟಗಳು ಅನುವಾದವಾಗಿವೆ. ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ, ಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳು, ಎನ್. ರಂಗನಾಥಶರ್ಮಾ, ಜಿ. ಹನುಮಂತರಾವ್, ಕೆ. ಟಿ. ಪಾಂಡುರಂಗಿ, ಸಾ. ಕೃ. ರಾಮಚಂದ್ರರಾವ್, ಬನ್ನಂಜೆ ಗೋವಿಂದಾಚಾರ್ಯ, ಎಂ. ಎ. ಹೆಗಡೆ, ಆರ್. ಗಣೇಶ್, ಕೆ. ವಿ. ಅಕ್ಷರ, ಜಿ. ರಾಮಕೃಷ್ಣ ಮುಂತಾದವರ ಲೇಖನಗಳು-ಪುಸ್ತಕಗಳು ಕೂಡ ಉಲ್ಲೇಖನೀಯ, ಸರ್ವದರ್ಶನಸಂಗ್ರಹ, ತರ್ಕಸಂಗ್ರಹ ಮುಂತಾದವು, ಶಂಕರ-ರಾಮಾನುಜ-ಮಧ್ವರ ಕೃತಿಗಳು, ಬೌದ್ಧ-ಜೈನದರ್ಶನದ ಕೆಲವು ಮೂಲಗ್ರಂಥಗಳೂ ಕನ್ನಡಕ್ಕೆ ಬಂದಿವೆ. ಇಷ್ಟಿದ್ದರೂ ಸಾಲದು ಎನ್ನುವುದರಲ್ಲಿ ಎರಡು ಮಾತಿಲ್ಲ. ಈ ಖಾಲಿತನವನ್ನು ಸ್ವಲ್ಪವಾದರೂ ತುಂಬುವಲ್ಲಿ ಯಶಸ್ವಿಯಾಗಿದೆ-ಇತ್ತೀಚೆಗಷ್ಟೇ ಕನ್ನಡಕ್ಕೆ ಅನುವಾದವಾಗಿರುವ ಖ್ಯಾತ ವಿದ್ವಾಂಸ ಪ್ರೊ. ಚಂದ್ರಧರ ಶರ್ಮಾ ಅವರ ಕೃತಿ. ಅವರ 'ಭಾರತೀಯ ದರ್ಶನ: ಆಲೋಚನ್ ಔರ್ ಅನುಶೀಲನ್' ಎಂಬ ಹಿಂದಿ ಕೃತಿಯನ್ನು ಕನ್ನಡಕ್ಕೆ ಸಮರ್ಥವಾಗಿ ಅನುವಾದಿಸಿದ್ದಾರೆ, ಸಿದ್ಧರಾಮ ಸ್ವಾಮಿಗಳು.

ಚಂದ್ರಧರ ಶರ್ಮಾ ಭಾರತದ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರು. ಭಾರತೀಯ ತತ್ತ್ವಶಾಸ್ತ್ರದ ಬಗ್ಗೆ ಅವರು ಬರೆದಿರುವ 'ಎ ಕ್ರಿಟಿಕಲ್ ಸರ್ವೇ ಆಫ್ ಇಂಡಿಯನ್ ಫಿಲಾಸಫಿ' (೧೯೬೦) ತುಂಬ ಪ್ರಸಿದ್ಧ ಕೃತಿ. ಅದರ ಪರಿಷ್ಕೃತ ರೂಪವಾಗಿ

ಹಿಂದಿಯಲ್ಲಿ 'ಭಾರತೀಯ ದರ್ಶನ: ಆಲೋಚನ್ ಔರ್ ಅನುಶೀಲನ' ಎಂಬ ಕೃತಿಯನ್ನು ಪ್ರಕಟಿಸಿದರು. ಅದರ ಕನ್ನಡ ಅನುವಾದವೇ 'ಭಾರತೀಯ ತತ್ತ್ವಶಾಸ್ತ್ರ-ವಿಮರ್ಶಾತ್ಮಕ ಅಧ್ಯಯನ'. ಈ ಕೃತಿಯ ಅನುವಾದಕರಾದ ಸಿದ್ಧರಾಮ ಸ್ವಾಮಿಗಳು ತತ್ತ್ವಶಾಸ್ತ್ರವನ್ನು ಅಧ್ಯಯನ ಮಾಡಿರುವವರು; ಈಗಾಗಲೇ ತತ್ತ್ವಶಾಸ್ತ್ರದ ಕೆಲವು ಕೃತಿಗಳನ್ನು ಹಿಂದಿಯಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಪ್ರಸ್ತುತ ಕೃತಿಯನ್ನು ಅವರು ಪ್ರೀತಿಯಿಂದಲೂ ಶ್ರದ್ಧೆಯಿಂದಲೂ ಕನ್ನಡಕ್ಕೆ ಕೊಟ್ಟಿದ್ದಾರೆ. ಅವರ ಈ ಕೊಡುಗೆಗಾಗಿ ಕನ್ನಡ ಸಾರಸ್ವತಲೋಕ ಅವರಿಗೆ ಕೃತಜ್ಞವಾಗಿರುತ್ತದೆ.

ಶಾಸ್ತ್ರ ಗ್ರಂಥಗಳನ್ನು ಅನುವಾದ ಮಾಡುವುದು ಸುಲಭವಲ್ಲ; ಇದಕ್ಕೆ ಕಾರಣ ಭಾಷೆಯ ತೊಡಕು ಮಾತ್ರವೇ ಅಲ್ಲ, ವಿಷಯವೂ ಕಾರಣ. ಮೂಲಕೃತಿಯ ಎಷ್ಟೋ ಪದಗಳನ್ನು ಅನುವಾದದಲ್ಲೂ ಉಳಿಸಿಕೊಳ್ಳಬೇಕಾಗುತ್ತದೆ; ಭಾವಾನುವಾದಕ್ಕೆ ಕೈ ಹಾಕಿದರೆ ವಿಷಯದ ಖಚಿತತೆಗೆ ಸಡಿಲಿಕೆಯುಂಟಾಗುತ್ತದೆ. ಹೀಗಿದ್ದರೂ ಪ್ರಸ್ತುತ ಕೃತಿಯನ್ನು 'ಕನ್ನಡ'ವಾಗಿಸುವಲ್ಲಿ ಸ್ವಾಮಿಗಳು ಸಾಕಷ್ಟು ಯಶಸ್ಸನ್ನು ಪಡೆದಿದ್ದಾರೆ.

'ಭಾರತೀಯ ತತ್ತ್ವಶಾಸ್ತ್ರ' ಇಪ್ಪತ್ತು ಅಧ್ಯಾಯಗಳಲ್ಲಿ ಹರಡಿಕೊಂಡಿದೆ. 'ವೇದ ಮತ್ತು ಉಪನಿಷತ್ತು'ಗಳಿಂದ ಆರಂಭವಾಗಿ 'ಶೈವ ಮತ್ತು ಶಾಕ್ತ ಸಂಪ್ರದಾಯಗಳು' ತನಕ ವಿವಿಧ ದಾರ್ಶನಿಕ ಮಾರ್ಗಗಳ ವಿಶ್ಲೇಷಣೆಯಿದೆ. ಇಲ್ಲೆಲ್ಲ ಅವುಗಳ ಇತಿಹಾಸವನ್ನು ಮಾತ್ರವೇ ಗುರುತಿಸುವ ತವಕಕ್ಕಿಂತಲೂ, ಅವುಗಳ ಸಿದ್ಧಾಂತಗಳನ್ನು ವಿವರಿಸುವ, ವಿಶ್ಲೇಷಿಸುವ ಮನೋಧರ್ಮವೇ ಎದ್ದುಕಾಣುತ್ತದೆ. ಮೂಲ ಲೇಖಕರ ಆಳವಾದ ಅಧ್ಯಯನ ಮತ್ತು ಒಳನೋಟಗಳಿಂದ ಕೃತಿ ಸಮೃದ್ಧವಾಗಿದ್ದು ಆಸಕ್ತರಿಗೂ ವಿದ್ವಾಂಸರಿಗೂ ಸಂಶೋಧಕರಿಗೂ ಒದಗುವಂತಿದೆ. ಇಷ್ಟೇ ಅಲ್ಲ, ಈಗಾಗಲೇ ಒಪ್ಪಿತವಾಗಿರುವ ಹಲವು ವಿವರಗಳನ್ನು ಸಕಾರಣವಾಗಿ ವಿಶ್ಲೇಷಿಸಿ, ಅವುಗಳನ್ನು ಮೌಲ್ಯಮಾಪನ ಮಾಡಿರುವುದು ಈ ಕೃತಿಯ ವಿಶೇಷವಾಗಿದೆ.

ಗ್ರಂಥಭಾಗದ ೫೭೦ ಪುಟಗಳಲ್ಲಿ ಬೌದ್ಧದರ್ಶನಕ್ಕೆ ಸಿಂಹಪಾಲು, ಎಂದರೆ ಸುಮಾರು ೧೪೦ ಪುಟಗಳು ಮೀಸಲಾಗಿರುವುದು ಗಮನಾರ್ಹವಾದುದು. ಈ ದರ್ಶನದ ಬಗ್ಗೆ ಮಹತ್ವಪೂರ್ಣವಾದ ಜಿಜ್ಞಾಸೆಯನ್ನು ಇಲ್ಲಿ ಕಾಣುತ್ತೇವೆ. ಉದಾಹರಣೆಗೊಂದು ಮಾತು: 'ಭಗವಾನ್ ಬುದ್ಧನ ದರ್ಶನವು ಚಿದದ್ವೈತ ಅಥವಾ ನಿರಪೇಕ್ಷತತ್ತ್ವವಾದವಾಗಿದೆ... ಈ ಅದ್ವೈತವಾದಕ್ಕೆ ಆಧಾರವು ಉಪನಿಷತ್ತುಗಳಾಗಿರುವುದರಿಂದ ಬುದ್ಧನು ಉಪನಿಷತ್ತುಗಳಿಗೆ ಋಣಿಯಾಗಿದ್ದಾನೆ. ಬುದ್ಧನು ಸ್ವತಃ ಹೇಳಿರುವುದೇನೆಂದರೆ 'ನಾನು ಯಾವುದೇ ಹೊಸ ಧರ್ಮದ ಉಪದೇಶವನ್ನೇನೂ ಕೊಡುತ್ತಿಲ್ಲ. ಪ್ರಾಚೀನ ಜ್ಞಾನಿಗಳು ಮತ್ತು ಋಷಿಗಳು ಸಾಕ್ಷಾತ್ಕರಿಸಿಕೊಂಡಿದ್ದ ಸತ್ಯವನ್ನೇ ನಾನೂ ಸ್ವತಃ ಅನುಭವಿಸಿದ್ದು ಅದೇ ಅನುಭವದ ಉಪದೇಶವನ್ನು ಕೊಡುತ್ತಿದ್ದೇನೆ.

ಅದೇ ಬೌದ್ಧದರ್ಶನದ ಬಗ್ಗೆ ಅನುವಾದಕರ ಮಾತೊಂದು ಹೀಗಿದೆ: 'ಇಂದಿಗೆ ಎರಡು ಸಾವಿರ ವರ್ಷಗಳ ಹಿಂದೆ ಜನ್ಮತಾಳಿದ ಭಗವಾನ್ ಮಹಾವೀರ ಮತ್ತು ಭಗವಾನ್ ಬುದ್ಧರು ಸ್ಥಾಪಿತ ವೈದಿಕ ಮೌಲ್ಯಗಳನ್ನು ವಿರೋಧಿಸಿ ಹೊಸ ವಿಚಾರಧಾರೆಯನ್ನು ಪ್ರಾರಂಭಿಸಿದರು. ಮೂಲ ಲೇಖಕರ ಅಭಿಪ್ರಾಯದೊಂದಿಗೆ ಅನುವಾದಕರಿಗೆ ಸಹಮತ ಇದೆಯೋ ಇಲ್ಲವೋ ಎನ್ನುವುದು ಇಲ್ಲಿ ಸ್ಪಷ್ಟವಾಗದು, ದಿಟ; ಆದರೆ ಮೂಲ ಕೃತಿಯನ್ನು ಮಾತ್ರ ಮೂಲ ಕೃತಿಕಾರರ ನಿಲುವಿಗೆ ಅಡ್ಡಿಯಾಗದಂತೆ ಡಾ. ಸಿದ್ಧರಾಮ ಸ್ವಾಮಿಗಳು ಅನುವಾದಿಸಿರುವುದಂತೂ ಎದ್ದು ಕಾಣುತ್ತದೆ.

ಮುದ್ರಣ ದೋಷಗಳಿಂದ ಮುಕ್ತವಾಗಿರುವುದು ಈ ಕೃತಿಯ ಇನ್ನೊಂದು ಪ್ರಧಾನ ಗುಣ. ಅಂತೆಯೇ 'ಪದಕೋಶ' ಮತ್ತು 'ಪಾರಿಭಾಷಿಕ ಪದಕೋಶ'ಗಳು ಕೃತಿಯ ಪ್ರಯೋಜವನ್ನು ಇನ್ನಷ್ಟು ಹೆಚ್ಚಿಸಿವೆ. ಭಾರತೀಯ ತತ್ತ್ವಶಾಸ್ತ್ರದಲ್ಲಿ ಆಸಕ್ತರಾದವರೆಲ್ಲರೂ ಓದಲೇಬೇಕಾದ ಕೃತಿ 'ಭಾರತೀಯ ತತ್ತ್ವಶಾಸ್ತ್ರ: ವಿಮರ್ಶಾತ್ಮಕ ಅಧ್ಯಯನ'.

**ಸಂಗ್ರಹ: ಪ್ರಜಾವಾಣಿ ದಿನಪತ್ರಿಕೆ ೯-೬-೨೦೧೯**

ಭಾರತೀಯ ತತ್ತ್ವಶಾಸ್ತ್ರ: ವಿಮರ್ಶಾತ್ಮಕ ಅಧ್ಯಯನ
ಮೂಲ ಹಿಂದಿ: ಪ್ರೊ. ಚಂದ್ರಧರ ಶರ್ಮಾ
ಕನ್ನಡಾನುವಾದ: ಡಾ. ಸಿದ್ಧರಾಮ ಸ್ವಾಮಿಗಳು
ಪ್ರಕಾಶಕರು: ನಾಗನೂರು ಶ್ರೀ ಶಿವಬಸವ ಸ್ವಾಮಿಗಳ ಕಲ್ಯಾಣ ಕೇಂದ್ರ, ಶಿವಬಸವನಗರ ಬೆಳಗಾವಿ
ಬೆಲೆ: ೩೫೦=೦೦
ಪುಟ: ೬೦೦